ಸೋಮವಾರ, ನವೆಂಬರ್ 25, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 326 | ಪುಟ 12

• www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಗಮನಿಸಿ, ಬಿ-ಸ್ಕೂಲ್ ಸೇರುವ ಮುನ್ನ

ಆಳ-ಅಗಲ
ಗುಕೇಶ್ ಮುಡಿಗೇರುವುದೇ ವಿಶ್ವ ಚೆಸ್ ಕಿರೀಟ?

ಮಲೆಕುಡಿಯರ ಶ್ರಮ, ವ್ಯಾಪಾರಿಗಳ ಲಾಭ 5

ಹೇಮಂತ್ ಸೋರೇನ್ 28ಕ್ಕೆ ಪ್ರಮಾಣ ಸ್ವೀಕಾರ 9

ಪುಸ್ತಕಗಳಿಗೆ ಗುಣಮಟ್ಟದ ಮುಚ್ಚಳಿಕೆ 4A

'ಗೃಹಲಕ್ಷ್ಮಿ' ನಕಲು ಮಾಡಿ ಗೆಲುವು: ಡಿಕೆಶಿ 4B

ಉ.ಪ್ರ: ಸಂಭಲ್‌ನಲ್ಲಿ ಹಿಂಸಾಚಾರ, ಮೂವರ ಸಾವು

ಸಂಭಲ್(ಉತ್ತರ ಪ್ರದೇಶ) (ಪಿಟಿಐ): ನಗರದ ಶಾಹಿ ಜಾಮಾ ಮಸೀದಿಯ ಸಮೀಕ್ಷೆಗೆ ವಿರೋಧಿಸಿ ಪ್ರತಿಭಟನೆ ನಡೆಸುತ್ತಿದ್ದವರು ಭದ್ರತಾ ಸಿಬ್ಬಂದಿ ಜೊತೆ ಘರ್ಷಣೆಗಿಳಿದಿದ್ದರಿಂದ ಭುಗಿಲೆದ್ದ ಹಿಂಸಾಚಾರದಲ್ಲಿ ಭಾನುವಾರ ಮೂವರು ಮೃತಪಟ್ಟಿದ್ದಾರೆ. 9

ಪಹಣಿಯಲ್ಲಿ ವಕ್ಫ್ ಹೆಸರು ರದ್ದು

ದಾವಣಗೆರೆ: ಇಲ್ಲಿನ ಪ್ರಿನ್ಸ್ ಜಯಚಾಮರಾಜೇಂದ್ರ (ಪಿ.ಜೆ) ಬಡಾವಣೆಯ ಪಹಣಿ ತಿದ್ದುಪಡಿ ಮಾಡಿರುವ ಕಂದಾಯ ಇಲಾಖೆ, 'ಖಬರಸ್ತಾನ್ ಸುನ್ನಿ ವಕ್ಫ್ ಸಂಸ್ಥೆ' ಎಂಬುದನ್ನು ಬದಲಾಯಿಸಿ 'ಸರ್ಕಾರಿ ಖರಾಬು' ಎಂಬುದಾಗಿ ಉಲ್ಲೇಖಿಸಿದೆ. ಸ್ಥಳೀಯರ ಆಕ್ರೋಶಕ್ಕೆ ಮಣಿದು ಭೂದಾಖಲೆಗಳನ್ನು ಸರಿಪಡಿಸಿದೆ. 5

ದರ್ಶನ್ ಜಾಮೀನು ರದ್ದತಿಗೆ ಮನವಿ 4A

ಬಿಜೆಪಿಗೆ ಸರಿಯಾದ ಪೈಪೋಟಿ ನೀಡಿದ ಕಾಂಗ್ರೆಸ್ 4B

ಬಿಜೆಪಿಯಿಂದ ಹೆಚ್ಚು ನೋಟಿಸ್

'ವಕ್ಫ್ ಆಸ್ತಿ' ಸಂರಕ್ಷಿಸುವಂತೆ ಜಿಲ್ಲಾಧಿಕಾರಿಗಳಿಗೆ ಹೇಳಿದ್ದ ವಿಧಾನ ಮಂಡಲ ಸಮಿತಿ

• ಜಯಸಿಂಹ ಆರ್.

ಬೆಂಗಳೂರು: ವಕ್ಫ್ ಆಸ್ತಿಗಳ ಒತ್ತುವರಿಯನ್ನು ತೆರವು ಮಾಡಿಸಬೇಕು ಮತ್ತು ಪಹಣಿಗಳಲ್ಲಿ 'ವಕ್ಫ್ ಆಸ್ತಿ' ಎಂದು ನಮೂದಿಸಬೇಕು ಎಂಬ ನಿರ್ಧಾರವು ಬಿ.ಎಸ್.ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ಬಿಜೆಪಿ ಸರ್ಕಾರದಲ್ಲೇ ಆಗಿತ್ತು. ಅದೇ ಅವಧಿಯಲ್ಲೇ ರೈತರಿಗೆ ಮತ್ತು ಭೂಮಾಲೀಕರಿಗೆ ಅತಿಹೆಚ್ಚು ನೋಟಿಸ್‌ಗಳನ್ನು ನೀಡಲಾಗಿತ್ತು.

2018–2023ರ ನಡುವೆ ಬಿಜೆಪಿ ಶಾಸಕರಾಗಿದ್ದ ಕುಮಾರ್ ಬಂಗಾರಪ್ಪ ಅವರ ಅಧ್ಯಕ್ಷತೆಯ ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯು, ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದಂತೆ ವಕ್ಫ್ ಅಧಿಕಾರಿಗಳು, ಜಿಲ್ಲಾಧಿಕಾರಿಗಳ ಜತೆ ಸಾಲು-ಸಾಲು ಸಭೆ ನಡೆಸಿತ್ತು. ಆಸ್ತಿಸಂರಕ್ಷಣೆಗೆ ಕ್ರಮ ತೆಗೆದುಕೊಳ್ಳುವಂತೆ ಸಮಿತಿಯು ಜಿಲ್ಲಾಧಿಕಾರಿಗಳಿಗೆ ಸೂಚಿಸಿತ್ತು. ಆನಂತರವೇ ವಕ್ಫ್ ಆಸ್ತಿಗಳನ್ನು ಗುರುತಿಸುವ, ಅಧಿಸೂಚನೆ ಹೊರಡಿಸುವ ಮತ್ತು ಒತ್ತುವರಿದಾರರಿಗೆ ನೋಟಿಸ್ ನೀಡುವ ಕಾರ್ಯವನ್ನು ಚುರುಕುಗೊಳಿಸಲಾಗಿತ್ತು.

ಹೀಗಾಗಿಯೇ, ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಒಟ್ಟು 2,865 ಎಕರೆ 9 ಗುಂಟೆ ವಿಸ್ತೀರ್ಣದ ಜಮೀನನ್ನು 'ವಕ್ಫ್ ಆಸ್ತಿ' ಎಂದು ಹೊಸದಾಗಿ ಅಧಿಸೂಚನೆ ಹೊರಡಿಸಲಾಗಿತ್ತು.

5ನೇ ಪುಟ ನೋಡಿ

ಬಿಜೆಪಿ– ಕಾಂಗ್ರೆಸ್ ಅವಧಿಯಲ್ಲಿ ನೀಡಿದ್ದ ನೋಟಿಸ್‌ಗಳು

1,201 ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ರೈತರಿಗೆ, ಭೂಮಾಲೀಕರಿಗೆ ನೀಡಲಾದ ನೋಟಿಸ್‌ಗಳು

1,735 ಬಿಜೆಪಿ ಸರ್ಕಾರದ ಅವಧಿಯಲ್ಲಿ ರೈತರಿಗೆ, ಭೂಮಾಲೀಕರಿಗೆ ನೀಡಲಾಗಿದ್ದ ನೋಟಿಸ್‌ಗಳು

2,865 ಎಕರೆ ಬಿಜೆಪಿ ಸರ್ಕಾರದ 2019–2020ರ ಅವಧಿಯಲ್ಲಿ 'ವಕ್ಫ್ ಆಸ್ತಿ' ಎಂದು ಅಧಿಸೂಚನೆ ಹೊರಡಿಸಲಾದ ಜಮೀನುಗಳ ಒಟ್ಟು ವಿಸ್ತೀರ್ಣ

391 ಎಕರೆ ಸಿದ್ದರಾಮಯ್ಯ ಅವರ ಹಿಂದಿನ ಸರ್ಕಾರದ 2016-18ರ ಅವಧಿಯಲ್ಲಿ 'ವಕ್ಫ್ ಆಸ್ತಿ' ಎಂದು ಅಧಿಸೂಚನೆ ಹೊರಡಿಸಲಾದ ಜಮೀನುಗಳ ಒಟ್ಟು ವಿಸ್ತೀರ್ಣ

4,720 ಎಕರೆ ಅಕ್ರಮ ಪರಬಾರೆ ಆಗದಂತೆ ಬಿಜೆಪಿ ಸರ್ಕಾರದ ಅವಧಿಯಲ್ಲಿ 'ಫ್ಲ್ಯಾಗ್ ಆಫ್' ಮಾಡಲಾದ ವಕ್ಫ್ ಆಸ್ತಿಗಳ ವಿಸ್ತೀರ್ಣ

'ವಕ್ಫ್ ಆಸ್ತಿ ಎಂದು ನಮೂದಿಸಿ'

ವ್ಯಕ್ತಿಗಳ ಹೆಸರಿನಲ್ಲಿ ಇರುವ ವಕ್ಫ್ ಆಸ್ತಿಗಳ ಪಹಣಿಯಲ್ಲಿ 'ವಕ್ಫ್ ಆಸ್ತಿ' ಎಂದು ನಮೂದಿಸಿ ಎಂದು ಇದೇ ಸಮಿತಿ ಸೂಚಿಸಿತ್ತು.

ವಕ್ಫ್ ಮಂಡಳಿ ಸಲ್ಲಿಸಿರುವ ದಾಖಲೆಗಳಲ್ಲಿ ವಕ್ಫ್ ಆಸ್ತಿಗಳು ಎಂದು ನಮೂದು ಮಾಡದೇ, ವೈಯಕ್ತಿಕ ಹೆಸರಿನಲ್ಲಿರುವ ಆಸ್ತಿಗಳಲ್ಲಿ ಅಕ್ರಮವಾಗುವ ಸಾಧ್ಯತೆ ಇದೆ. ಹೀಗಾಗಿ ರಾಜ್ಯದಾದ್ಯಂತ ವಕ್ಫ್ ಆಸ್ತಿಗಳನ್ನು ತಾಲ್ಲೂಕುವಾರು ಪರಿಶೀಲಿಸಬೇಕು. ಕಂದಾಯ ಇಲಾಖೆಯ ಭೂಮಿ ಸಾಫ್ಟ್‌ವೇರ್‌ನಲ್ಲಿ ನಿಯಮಾನುಸಾರ, ವಕ್ಫ್ ಆಸ್ತಿ ಎಂದು ನಮೂದಿಸಬೇಕು ಎಂದು ಸೂಚಿಸಲಾಗಿದೆ.

5ನೇ ಪುಟ ನೋಡಿ

ಚಿನಕುರುಳಿ


ಪ್ರಕಾಶ್ ಶೆಟ್ಟಿ



ಐಪಿಎಲ್ ಇತಿಹಾಸದಲ್ಲಿಯೇ ಅತಿ ಹೆಚ್ಚು ಮೌಲ್ಯ ಪಡೆದ ಆಟಗಾರ

ರಿಷಭ್ ಪಂತ್‌ಗೆ 'ಮೆಗಾ' ಜಾಕ್‌ಪಾಟ್

ಮೊದಲೇ ನಿರೀಕ್ಷಿಸಿದಂತೆ ವಿಕೆಟ್‌ಕೀಪರ್ ರಿಷಭ್ ಪಂತ್ ಅವರು ಸೌದಿ ಅರೇಬಿಯಾದಲ್ಲಿ ಭಾನುವಾರ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮೆಗಾ ಬಿಡ್‌ನಲ್ಲಿ 'ಜಾಕ್‌ಪಾಟ್' ಗಳಿಸಿದರು. ಐಪಿಎಲ್ ಇತಿಹಾಸದಲ್ಲಿಯೇ ಗರಿಷ್ಠ ಮೊತ್ತದ ಬಿಡ್ ಗಳಿಸಿದ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾದರು.



‘ಡಿಎಚ್ಎಕ್ಸ್‌ಪ್ರೆಷನ್ಸ್ 2024–25 ಆವೃತ್ತಿ’ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡೆಕ್ಕನ್ ಹೆರಾಲ್ಡ್’ ಪತ್ರಿಕೆಯ ಡಿಎಚ್ಐಇ ಇನಿಷಿಯೇಟಿವ್‌ನ ‘ಡಿಎಚ್ ಎಕ್ಸ್‌ಪ್ರೆಷನ್ಸ್ 2024–25’ರ ಆವೃತ್ತಿಯ ಸ್ಪರ್ಧೆಗಳು ನವೆಂಬರ್ 26ರಿಂದ 29ರವರೆಗೆ ಕಬ್ಬನ್ ಉದ್ಯಾನದ ಆವರಣದಲ್ಲಿರುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನದ ಸಭಾಂಗಣದಲ್ಲಿ ನಡೆಯಲಿವೆ.

ನ.26ರಂದು ಸಮೂಹ ನೃತ್ಯ, ನ.27ರಂದು ಸಮೂಹ ಗಾಯನ ಮತ್ತು ಚಿತ್ರ ಬಿಡಿಸುವಿಕೆ, ನ.28ರಂದು ಸೃಜನಶೀಲ ಬರವಣಿಗೆ ಮತ್ತು ಸ್ಪೆಲ್ ಬೀ ಹಾಗೂ ನ.29ರಂದು ರಸಪ್ರಶ್ನೆ ಸ್ಪರ್ಧೆಗಳು ನಡೆಯಲಿವೆ.

ರಾಜ್ಯ ಸರ್ಕಾರಿ ನೌಕರರ ಭವನದ ಸಭಾಂಗಣದಲ್ಲಿ ನ.26ರ ಬೆಳಿಗ್ಗೆ 9.30ಕ್ಕೆ ಸಮೂಹ ನೃತ್ಯದೊಂದಿಗೆ ಸ್ಪರ್ಧೆ ಉದ್ಘಾಟನೆಯಾಗಲಿದೆ. ವಿವಿಧ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿರುವವರು ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಲಿದ್ದಾರೆ.

ಬಿಬಿಎಂಪಿ ಸಲ್ಲಿಸಿದ್ದ ಕ್ರಿಯಾಯೋಜನೆಗೆ ನಗರಾಭಿವೃದ್ಧಿ ಇಲಾಖೆ ಅನುಮೋದನೆ

ರಸ್ತೆ ಡಾಂಬರೀಕರಣಕ್ಕೆ ₹694 ಕೋಟಿ

• ನವೀನ್ ಮಿನೇಜಸ್

ಬೆಂಗಳೂರು: ರಾಜಧಾನಿಯಲ್ಲಿ ₹694 ಕೋಟಿ ವೆಚ್ಚದಲ್ಲಿ 389.68 ಕಿಲೋ ಮೀಟರ್ ಉದ್ದದ ರಸ್ತೆಗಳ ಮರು ಡಾಂಬರೀಕರಣ ಮಾಡುವ ಕ್ರಿಯಾ ಯೋಜನೆಗೆ ನಗರಾಭಿವೃದ್ಧಿ ಇಲಾಖೆ ಒಪ್ಪಿಗೆ ನೀಡಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಎರಡು ಆರ್ಥಿಕ ವರ್ಷಗಳ ಅವಧಿಯಲ್ಲಿ ಈ ಕಾಮಗಾರಿಗಳನ್ನು ಅನುಷ್ಠಾನ ಗೊಳಿಸಲಿದೆ.

ರಾಜಧಾನಿಯ ಹೃದಯ ಭಾಗಕ್ಕಿಂತಲೂ ಹೊರ ವಲಯದಲ್ಲಿ ರಸ್ತೆಗಳು ತೀರಾ ಹದಗೆಟ್ಟಿವೆ. ಹೀಗಾಗಿ ಆ ಭಾಗದಲ್ಲಿನ ರಸ್ತೆ ಕಾಮಗಾರಿಗಳಿಗೆ ಹೆಚ್ಚಿನ ಅನುದಾನ ಒದಗಿಸಲಾಗಿದೆ. ಯಲಹಂಕ, ಬೊಮ್ಮನಹಳ್ಳಿ, ರಾಜ ರಾಜೇಶ್ವರಿನಗರ ಸೇರಿದಂತೆ ಬಿಬಿಎಂಪಿ ಹೊರವಲಯದ ಒಂಬತ್ತು ವಿಧಾನಸಭಾ ಕ್ಷೇತ್ರಗಳಲ್ಲಿನ ರಸ್ತೆಗಳ ಮರು ಡಾಂಬರೀಕರಣಕ್ಕೆ ಒಟ್ಟು ₹429.5 ಕೋಟಿ ಅನುದಾನ ಒದಗಿಸಲಾಗಿದೆ.



ಬೃಹತ್ ಸಂಖ್ಯೆಯ ಐ.ಟಿ ಕಂಪನಿಗಳು ಕಾರ್ಯನಿರ್ವಹಿಸುತ್ತಿರುವ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಮೂಲಸೌಕರ್ಯದ ಕೊರತೆ ತೀವ್ರವಾಗಿದೆ. ಅಲ್ಲಿನ ರಸ್ತೆಗಳ ಸ್ಥಿತಿ ಶೋಚನೀಯವಾಗಿದೆ. ಈ ಕ್ಷೇತ್ರದ ರಸ್ತೆಗಳ ಸುಧಾರಣೆಗೆ ಬರೋಬ್ಬರಿ ₹140 ಕೋಟಿ ಅನುದಾನ ಮೀಸಲಿಡಲಾಗಿದೆ. ಆದರೆ, ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸಿಕ್ಕಿರುವ ಪಾಲು ₹ 20 ಕೋಟಿ ಮಾತ್ರ.

ನಗರದ ಒಳ ಭಾಗದಲ್ಲಿರುವ 18 ವಿಧಾನಸಭಾ ಕ್ಷೇತ್ರಗಳಲ್ಲಿನ ರಸ್ತೆಗಳ ಮರು ಡಾಂಬರೀಕರಣಕ್ಕೆ ಒಟ್ಟು ₹264.5 ಕೋಟಿ ಒದಗಿಸಲಾಗಿದೆ. ಬಿಬಿಎಂಪಿಯ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯಗಳಲ್ಲಿರುವ ಈ ಕ್ಷೇತ್ರಗಳಲ್ಲಿ ರಸ್ತೆಗಳ ಸ್ಥಿತಿ ತುಸು ಉತ್ತಮವಾಗಿದೆ.

₹659.71 ಕೋಟಿ ವೆಚ್ಚದಲ್ಲಿ 197 ರಸ್ತೆಗಳ ದುರಸ್ತಿಗೆ ಸೆಪ್ಟೆಂಬರ್‌ನಲ್ಲಿ ಬಿಬಿಎಂಪಿ ಪ್ರಸ್ತಾವ ಸಿದ್ಧಪಡಿಸಿತ್ತು. ಆದರೆ, ಶಾಸಕರ ಒತ್ತಡ ಹೆಚ್ಚಾಗಿದ್ದರಿಂದ ತುರ್ತು ದುರಸ್ತಿ ಅಗತ್ಯವಿರುವ ಮತ್ತಷ್ಟು ರಸ್ತೆಗಳನ್ನು ಪಟ್ಟಿಗೆ ಸೇರಿಸಲು ತೀರ್ಮಾನಿಸಲಾಗಿತ್ತು. ಒಟ್ಟು 218 ರಸ್ತೆಗಳ ದುರಸ್ತಿಗೆ ನವೆಂಬರ್‌ನಲ್ಲಿ ಬಿಬಿಎಂಪಿ ಪರಿಷ್ಕೃತ ಪ್ರಸ್ತಾವ ಸಲ್ಲಿಸಿತ್ತು.

ನಗರಾಭಿವೃದ್ಧಿ ಇಲಾಖೆಯು ಕ್ರಿಯಾಯೋಜನೆಗೆ ಅನುಮೋದನೆ ನೀಡಿರುವುದರಿಂದ 2025ರ ಜನವರಿಯಲ್ಲಿ ರಸ್ತೆಗಳ ಮರು ಡಾಂಬರೀಕರಣ ಆರಂಭಿಸಲು ಬಿಬಿಎಂಪಿ ಸಿದ್ಧತೆ ನಡೆಸಿದೆ. ರಸ್ತೆ ಮತ್ತು ಪಾದಚಾರಿ ಮಾರ್ಗಗಳ ಕಾಮಗಾರಿಗಳಿಗೆ ‘ಸಮಗ್ರ ನಿರ್ಧಾರಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ)’ ರೂಪಿಸಲು ಬಿಬಿಎಂಪಿಯು 15 ಸದಸ್ಯರ ತಜ್ಞರ ಸಮಿತಿ ರಚಿಸಿದೆ. ಈ ಸಮಿತಿ ಡಿಸೆಂಬರ್ ಮಧ್ಯ ಭಾಗದಲ್ಲಿ ಶಿಫಾರಸುಗಳನ್ನು ಸಲ್ಲಿಸುವ ಸಾಧ್ಯತೆ ಇದೆ.

ಮುಖ್ಯಾಂಶಗಳು

- 9 ವಿಧಾನಸಭಾ ಕ್ಷೇತ್ರಗಳಲ್ಲಿನ ರಸ್ತೆಗಳ ಮರು ಡಾಂಬರೀಕರಣಕ್ಕೆ ₹429.5 ಕೋಟಿ
- ಮಹದೇವಪುರಕ್ಕೆ ₹140 ಕೋಟಿ, ದಾಸರಹಳ್ಳಿಗೆ ₹20 ಕೋಟಿ
- 18 ವಿಧಾನಸಭಾ ಕ್ಷೇತ್ರಗಳಲ್ಲಿನ ರಸ್ತೆಗಳ ಮರು ಡಾಂಬರೀಕರಣಕ್ಕೆ ಒಟ್ಟು ₹264.5 ಕೋಟಿ

ಸುದ್ದಿ 2 ನಿಮಿಷ

‘ಇಂದಿರಾ ಪ್ರಶಸ್ತಿ’ಗೆ ಮಲರ್ ವಿಳಿ ಆಯ್ಕೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘ ನೀಡುವ 2024ನೇ ಸಾಲಿನ ‘ಇಂದಿರಾರತ್ನ ಪ್ರಶಸ್ತಿ’ಗೆ ಕನ್ನಡ ಪರ ಹೋರಾಟಗಾರ್ತಿ ಹಾಗೂ ಅನುವಾದಕಿ ಮಲರ್ ವಿಳಿ ಕೆ. ಅವರು ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹5 ಸಾವಿರ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ. ಇದೇ 27ರಂದು ಸೌತ್ ಎಂಡ್ ಸರ್ಕಲ್‌ನಲ್ಲಿರುವ ಸುರಾನ ಕಾಲೇಜಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆಯವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಅನುವಾದಕರಾಗಿರುವ ಮಲರ್ ವಿಳಿ ಕೆ. ಅವರು ಕಾಲೇಜು ಮತ್ತಿತರ ಕಡೆಗಳಲ್ಲಿ ಕನ್ನಡ ಸಂಘಗಳನ್ನು ಕಟ್ಟಿ, ಕನ್ನಡ ಭಾಷೆಯನ್ನು ಪ್ರಚುರಪಡಿಸುತ್ತಿದ್ದಾರೆ. ಕನ್ನಡದಿಂದ ತಮಿಳಿಗೆ ಹಾಗೂ ತಮಿಳಿನಿಂದ ಕನ್ನಡಕ್ಕೆ ಹಲವು ಕೃತಿಗಳನ್ನು ಅನುವಾದಿಸಿದ್ದಾರೆ. ಮಲರ್ ವಿಳಿ ಅವರ ಈ ಎಲ್ಲ ಕಾರ್ಯಗಳನ್ನು ಗುರುತಿಸಿ, ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

‘ಬಿಜೆಪಿ ಬೆಂಬಲದಿಂದ ಗೆಲುವು’

ಕನಕಪುರ: ‘ಬಿಜೆಪಿ ಬೆಂಬಲ ನೀಡದೆ ಇದ್ದಿದ್ದರೆ ನಾವು ಚುನಾವಣೆಯಲ್ಲಿ ಗೆಲ್ಲಲು ಆಗುತ್ತಿತ್ತೇ? ಅವರ ಸಹಕಾರವೂ ಗೆಲುವಿಗೆ ಕಾರಣ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹೇಳಿದರು.

‘ಜನ ಬಯಸಿದರೆ ಕಾಂಗ್ರೆಸ್ ಸೇರುವೆ ಎಂದು ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಹೇಳಿಕೆಗೆ ಕನಕಪುರದಲ್ಲಿ ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಇದು ಜಿಟಿಡಿ ಅವರೊಬ್ಬರ ಅಭಿಪ್ರಾಯ ಅಲ್ಲ. ಬಿಜೆಪಿಯ ಬಹಳಷ್ಟು ಮಂದಿ ಇದೇ ಅಭಿಪ್ರಾಯ ಹೊಂದಿದ್ದಾರೆ’ ಎಂದರು.

ಅಶ್ವತ್ಥ ನಾರಾಯಣ ದಡ್ಡರೇ?: ‘ನನಗೆ ಮೊದಲೇ ತಿಳಿದಿತ್ತು. ಯೋಗೇಶ್ವರ್ ಗೆಲ್ಲುತ್ತಾರೆ ಎಂದು ಬಿಜೆಪಿ ನಾಯಕ ಅಶ್ವತ್ಥ ನಾರಾಯಣ ಹೇಳಿದ್ದಾರೆ. ಉಪಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಅವರು, ಈ ರೀತಿ ಹೇಳಲು ದಡ್ಡರೇ? ಅವರಿಗೆ ಜನರ ನಾಡಿಮಿಡಿತ ಗೊತ್ತಿತ್ತು’ ಎಂದರು.

ಸಿ.ಎಂ.ಕೇಳಿ ನೋಡಿ: ಸಂಪುಟ ಪುನರ್‌ರಚನೆ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಅದೆಲ್ಲ ಸುಳ್ಳು. ಯಾವ ಒತ್ತಾಯವೂ ಇಲ್ಲ. ಏನಿದ್ದರೂ ಮುಖ್ಯಮಂತ್ರಿಯನ್ನು ಕೇಳಿ’ ಎಂದು ಹೇಳಿದರು.

‘ಡಿ.ಕೆ.ಸುರೇಶ್ ಸೋತಾಗ ಇದೇ ಯೋಗೇಶ್ವರ್ ಬಿಜೆಪಿಯಲ್ಲಿದ್ದರು. ಕುಮಾರಸ್ವಾಮಿ ತಮ್ಮ ಬಾಮೈದುನನ್ನು ಬಿಜೆಪಿಯಿಂದ ನಿಲ್ಲಿಸಿ ಗೆಲ್ಲಿಸಿದರು. ಇದಕ್ಕೆ ಯಾವ ಪದ ಜೋಡಣೆ ಮಾಡುತ್ತೀರಿ?’ ಎಂದು ಮತ್ತೊಂದು ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಇಂದು ಪ್ರಾಣಿವಧೆ, ಮಾಂಸ ಮಾರಾಟ ನಿಷೇಧ

ಬೆಂಗಳೂರು: ‘ಸಾಧು ವಾಸವಾನಿ ಜಯಂತಿ’ ಅಂಗವಾಗಿ ಸೋಮವಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕಸಾಯಿ ಖಾನೆಗಳಲ್ಲಿ ಪ್ರಾಣಿವಧೆ ಮತ್ತು ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಬಿಬಿಎಂಪಿ ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಸವನಗುಡಿ: ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಚಾಲನೆ

ಕಡಲೆಕಾಯಿ ಪರಿಷೆ ಇಂದು–ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐತಿಹಾಸಿಕ ಕಡಲೆಕಾಯಿ ಪರಿಷೆಗೆ ಬಸವನಗುಡಿಯ ದೊಡ್ಡ ಗಣಪತಿ ದೇವಸ್ಥಾನದ ಆವರಣ ಮತ್ತು ಸುತ್ತಮುತ್ತಲ ಪ್ರದೇಶ ಸಜ್ಜಾಗಿದ್ದು, ಈ ಪರಿಷೆಗೆ ಸೋಮವಾರ ಬೆಳಿಗ್ಗೆ 10 ಗಂಟೆಗೆ ಅಧಿಕೃತವಾಗಿ ಚಾಲನೆ ಸಿಗಲಿದೆ.

ಎರಡು ದಿನಗಳ ಈ ಪರಿಷೆಯ ಮುನ್ನಾದಿನವಾದ ಭಾನುವಾರವೇ ಬಸವಗುಡಿಯಲ್ಲಿ ಜಾತ್ರೆಯ ವಾತಾವರಣ ಸೃಷ್ಟಿಯಾಗಿತ್ತು. ರಸ್ತೆಯ ಇಕ್ಕೆಲಗಳಲ್ಲಿ ಕಡಲೆಕಾಯಿ ವ್ಯಾಪಾರ ಕಳೆಗಟ್ಟಿತ್ತು. ರಜಾ ದಿನವಾದ್ದರಿಂದ ಬೆಳಿಗ್ಗೆಯಿಂದಲೇ ಅಧಿಕ ಸಂಖ್ಯೆಯಲ್ಲಿ ಜನರು ಬಂದಿದ್ದರು. ಸಂಜೆ ವೇಳೆಗೆ ಜನಸಾಗರವೇ ಹರಿದು ಬಂದಿದ್ದರಿಂದ ಜನದಟ್ಟಣೆ ಉಂಟಾಗಿತ್ತು.

ಗ್ರಾಮೀಣ ಸೊಗಡಿನ ಈ ಪರಿಷೆಗೆ ಸೋಮವಾರ ಬೆಳಿಗ್ಗೆ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಲಿದ್ದಾರೆ. ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಎಲ್.ಎ.ರವಿ ಸುಬ್ರಹ್ಮಣ್ಯ, ಉದಯ್ ಬಿ. ಗರುಡಾಚಾರ್ ಉಪಸ್ಥಿತರಿರುತ್ತಾರೆ. ದೊಡ್ಡಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಸಿ, ನಂದಿಗೆ ಕಡಲೆಕಾಯಿ ಅಭಿಷೇಕ ಮಾಡಲಾಗುತ್ತದೆ.




ಬಸವನಗುಡಿಯ ಬುಲ್ ಟೆಂಪಲ್ ರಸ್ತೆಯಲ್ಲಿ ಕಡಲೆಕಾಯಿ ಪರಿಷೆ ಮುನ್ನಾ ದಿನದಂದು ಅಪಾರ ಸಂಖ್ಯೆಯ ಜನರು ಭೇಟಿ ನೀಡಿದರು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಎರಡೂ ದಿನ ಬ್ಯೂಗಲ್ ರಾಕ್ ಉದ್ಯಾನ ಹಾಗೂ ನರಸಿಂಹಸ್ವಾಮಿ ಉದ್ಯಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಬ್ಯೂಗಲ್ ರಾಕ್ ಉದ್ಯಾನದಲ್ಲಿ ಸೋಮವಾರ ಸಂಜೆ 6ರಿಂದ ವಿದ್ಯಾ ರವಿಶಂಕರ್ ತಂಡದಿಂದ ಸಮೂಹ ಭರತನಾಟ್ಯ ಪ್ರದರ್ಶನ, ವಿಜಯ ವಿಠಲ ಶಾಲೆಯಿಂದ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ, ಮಂಗಳವಾರ ಸಂಜೆ 7ರಿಂದ ಆದರ್ಶ ಸುಗಮ ಸಂಗೀತ ಅಕಾಡೆಮಿಯಿಂದ ‘ಕನ್ನಡ ಡಿಂಡಿಮ’ ಕನ್ನಡ ಚಿತ್ರಗೀತೆಗಳ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ನರಸಿಂಹಸ್ವಾಮಿ ಉದ್ಯಾನದಲ್ಲಿ ಸೋಮವಾರ ಸಂಜೆ 6ರಿಂದ ಸಿರಿಕಲಾ ಮೇಳ ತಂಡದಿಂದ ‘ಭಕ್ತ ಸುಧನ್ವ’ ಯಕ್ಷಗಾನ ಪ್ರದರ್ಶನ, ಮಂಗಳವಾರ ಸಂಜೆ 6ರಿಂದ ಆಲಾಪ್ ಮ್ಯೂಸಿಕ್ ಅಕಾಡೆಮಿ ಟ್ರಸ್ಟ್‌ನಿಂದ ಭರತನಾಟ್ಯ ಹಾಗೂ ವೀಣಾ ವಾದನ, ಸೀತಾರಾಮ ಮುನಿಕೋಟಿ ಅವರಿಂದ ಹರಿಕಥೆ ನಡೆಯಲಿದೆ.

ನಿಧನ ವಾರ್ತೆ

ರಕ್ಷಿತ್



ಹೆಸರಘಟ್ಟ:ಹುಸ್ಕೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಬೆತ್ತನಗೆರೆ ಗ್ರಾಮದ ರಕ್ಷಿತ್ (24) ಹೃದಯಾಘಾತದಿಂದ ಭಾನುವಾರ ನಿಧನರಾದರು. ಮೃತರಿಗೆ ತಾಯಿ ಇದ್ದಾರೆ. ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಚಿಕಿತ್ಸಾ ಶುಲ್ಕ ಹೆಚ್ಚಳಕ್ಕೆ ಖಂಡನೆ

ಬೆಂಗಳೂರು: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ಅಧೀನ ಆಸ್ಪತ್ರೆಗಳಲ್ಲಿ ವಿವಿಧ ಶುಲ್ಕಗಳ ಹೆಚ್ಚಳವನ್ನು ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾದ (ಎಸ್‌ಯುಸಿಐ-ಸಿ) ಬೆಂಗಳೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿಗಳಾದ ಎಂ. ಎನ್. ಶ್ರೀರಾಮ್ ಮತ್ತು ಜ್ಞಾನಮೂರ್ತಿ ವಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಸಿನಿಮಾ, ಸಾಹಿತ್ಯದ ವಿಸ್ತೃತ ರೂಪವಲ್ಲ’

ಪಿ.ಶೇಷಾದ್ರಿ ‘ಸಿನಿಮಾವಲೋಕನ’ದಲ್ಲಿ ಗಿರೀಶ ಕಾಸರವಳ್ಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡದ ವಿಮರ್ಶಾ ಪರಂಪರೆಯಲ್ಲಿ ಸಿನಿಮಾವನ್ನು ಸಾಹಿತ್ಯದ ವಿಸ್ತೃತ ರೂಪವಾಗಿ ನೋಡಲಾಗುತ್ತಿದೆ. ಸಿನಿಮಾ, ಸಾಹಿತ್ಯದ ವಿಸ್ತೃತ ರೂಪವಲ್ಲ. ಮೂಲ ಕೃತಿಯನ್ನು ಸಿನಿಮಾಕ್ಕೆ ಹೋಲಿಸಿ ನೋಡುವುದೂ ಸರಿಯಾದ ಕ್ರಮವಲ್ಲ’ ಎಂದು ಸಿನಿಮಾ ನಿರ್ದೇಶಕ ಗಿರೀಶ ಕಾಸರವಳ್ಳಿ ಅಭಿಪ್ರಾಯಪಟ್ಟರು.

ಭಾನುವಾರ ನಗರದ ಸುಚಿತ್ರಾ ಫಿಲ್ಮ್ ಸೊಸೈಟಿಯಲ್ಲಿ ನಡೆದ ಸಿನಿಮಾ ನಿರ್ದೇಶಕ ಪಿ.ಶೇಷಾದ್ರಿ ಅವರ ‘ಸಿನಿಮಾವಲೋಕನ’ ಕಾರ್ಯಕ್ರಮದಲ್ಲಿ ಅವರ ‘ಚಿತ್ರ–ಮಂಥನ’, ‘ಕಣ್ಣು ಕಂಡ ಕ್ಷಣಗಳು’, ‘ದಕ್ಕಿದ್ದು–ಮಿಕ್ಕಿದ್ದು’ ಹಾಗೂ ‘ಫ್ರೇಮ್ಸ್ ಆಫ್ ಕನ್ಸೈನ್ಸ್’ ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಎಲ್ಲ ಕಲೆಗಳಿಗೂ ಅದರದ್ದೇ ಆದ ಶ್ರೇಷ್ಠತೆ ಇದೆ. ಹಾಗೆಯೇ ಮಿತಿಯೂ ಇದೆ’ ಎಂದು ಹೇಳಿದರು.



ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಪಿ. ಶೇಷಾದ್ರಿ ‘ಸಿನಿಮಾವಲೋಕನ’ ಕಾರ್ಯಕ್ರಮದಲ್ಲಿ ಕೃತಿಗಳ ಬಿಡುಗಡೆ ಮಾಡಿದರು. ಚಿತ್ರ ನಿರ್ಮಾಪಕ ಬಸಂತಕುಮಾರ ಪಾಟೀಲ, ನಿರ್ದೇಶಕ ಗಿರೀಶ ಕಾಸರವಳ್ಳಿ, ರಾಜೇಂದ್ರಸಿಂಗ್ ಬಾಬು, ಟಿ.ಎನ್‌. ಸೀತಾರಾಮ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ‘ಸಿನಿಮಾಗಳು, ಕಾಯ್ದೆ, ಕಾನೂನುಗಳಂತಹ ಕ್ಲಿಷ್ಟ ಹಾಗೂ ಗಂಭೀರ ವಿಷಯಗಳನ್ನು ಸರಳವಾಗಿ ತಿಳಿಸುತ್ತವೆ’ ಎಂದು ಹೇಳಿದರು.

ನಿರ್ದೇಶಕ ಟಿ.ಎನ್.ಸೀತಾರಾಮ್, ‘ಶೇಷಾದ್ರಿಯವರು ತಮ್ಮ ಸಿನಿಮಾಗಳ ಮೂಲಕ ಬದುಕಿನ ಅಸಹಾಯಕತೆ, ಸಂಕಟವನ್ನು ಸಮರ್ಥವಾಗಿ ವೀಕ್ಷಕರಿಗೆ ಮುಟ್ಟಿಸಿದ್ದಾರೆ’ ಎಂದು ಹೇಳಿದರು.


ಪಿ.ಶೇಷಾದ್ರಿ ಅವರು ತಮ್ಮ ಸಿನಿಮಾ ಪಯಣದಲ್ಲಿ ಜೊತೆಯಾದವರನ್ನು ನೆನಪಿಸಿಕೊಂಡರು.

ನಿರ್ದೇಶಕರಾದ ರಾಜೇಂದ್ರಸಿಂಗ್ ಬಾಬು, ಟಿ.ಎಸ್.ನಾಗಾಭರಣ, ಹಿರಿಯ ನಟ ದತ್ತಣ್ಣ, ನಿರ್ಮಾಪಕ ಬಸಂತಕುಮಾರ್ ಪಾಟೀಲ್ ಮಾತನಾಡಿದರು.

ನಗರದಲ್ಲಿ ಇಂದು

ಕರ್ನಾಟಕ ರಾಜ್ಯೋತ್ಸವ: ಧ್ವಜಾರೋಹಣ: ಆನ್ನಿ ಜೇಮ್ಸ್, ಉದ್ಘಾಟನೆ: ಮನೋಜ್ ಜೈನ್, ಅಧ್ಯಕ್ಷತೆ: ರಜನೀಶ್ ಶರ್ಮ, ಸನ್ಮಾನ: ಎಸ್.ಎಸ್. ಅಯ್ಯಂಗಾರ್, ಮುಖ್ಯ ಅತಿಥಿ: ಶ್ರೀನಾಥ್, ಆಯೋಜನೆ ಹಾಗೂ ಸ್ಥಳ: ಡಾ. ಮಾಸ್ತಿ ಮಂಟಪ, ಭಾರತ್ ಎಲೆಕ್ಟ್ರಾನಿಕ್ಸ್ ಬೆಂಗಳೂರು ಘಟಕ, ಬೆಳಿಗ್ಗೆ 10.30

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಸಂಸತ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಸಂವಾದ: ಉಪಸ್ಥಿತಿ: ಐವನ್ ಡಿಸೋಜ, ಕಾತ್ಯಾಯಿನಿ ಚಾಮರಾಜ್, ಅಂಜಲಿ ರಾಮಣ್ಣ, ಆಯೋಜನೆ: ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ (ಕೆಸಿಆರ್‌ಒ), ಸ್ಥಳ: ಮೂರನೇ ಮಹಡಿ, ವಿಧಾನಸೌಧ, ಮಧ್ಯಾಹ್ನ 3



ವ್ಯಾಸನಕೆರೆ ಪ್ರಭಂಜನಾಚಾರ್ಯ

ಮಹಾಭಾರತ ಪ್ರವಚನ ಮಾಲಿಕೆ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ ಹಾಗೂ ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 6.30

ಸನ್ಮಾನ ಸಮಾರಂಭ: ಸನ್ಮಾನಿತರು: ಬೈರಮಂಗಲ ರಾಮೇಗೌಡ, ಟಿ. ವೆಂಕಟೇಶಮೂರ್ತಿ, ಅಧ್ಯಕ್ಷತೆ: ಎ.ಜಿ. ನಟರಾಜ್, ಉಪಸ್ಥಿತಿ: ಕೆ.ಎಸ್. ಗೋಪಾಲಕೃಷ್ಣ, ಆಯೋಜನೆ ಹಾಗೂ ಸ್ಥಳ: ಬಿಇಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯ, ಜಯನಗರ 4ನೇ ಬ್ಲಾಕ್, ಸಂಜೆ 5

ಕಾರ್ತಿಕ ದೀಪೋತ್ಸವ ಹಾಗೂ ಸನ್ಮಾನ ಸಮಾರಂಭ: ಸನ್ಮಾನಿತರು: ಕೆ. ರೇವಣ್ಣ, ಉಪಸ್ಥಿತಿ: ಎಲ್.ಎ.ರವಿಸುಬ್ರಹ್ಮಣ್ಯ, ಆಯೋಜನೆ: ಅರಳಿಕಟ್ಟೆ ಲಕ್ಷ್ಮೀಪುರ, ಸ್ಥಳ: ವೆಂಕಟೇಶ್ವರ ಭಜನಾ ಮಂದಿರ, ಲಕ್ಷ್ಮೀಪುರ, ಸಂಜೆ 6.15

‘ಮಹಾಭಾರತ ತಾತ್ಪರ್ಯ ನಿರ್ಣಯ’ ಧಾರ್ಮಿಕ ಪ್ರವಚನ: ಬಿ. ಜಗನ್ನಾಥಾಚಾರ್ಯ, ಆಯೋಜನೆ: ಶ್ರೀ ರಾಘವೇಂದ್ರ ಸೇವಾ ಸಮಿತಿ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

‘ಗುಂಡಿಗಳಿಂದ ಕೂಡಿದ ರಸ್ತೆ’



ಲಗ್ಗೆರೆ ಸಂಪರ್ಕಿಸುವ ರಸ್ತೆಯಲ್ಲಿನ ಗುಂಡಿಗಳು

ಲಗ್ಗೆರೆ ಸೇತುವೆ ಕಡೆಯಿಂದ ಹೊರವರ್ತುಲ ರಸ್ತೆಯ ಮೂಲಕ ಲಗ್ಗೆರೆ ಸಂಪರ್ಕಿಸುವ ರಸ್ತೆಯು ಬೃಹತ್ ಗುಂಡಿಗಳಿಂದ ಕೂಡಿದೆ. ಡಾಂಬರು ಕಿತ್ತುಹೋಗಿದ್ದು, ವಾಹನ ಸವಾರರು ಸಂಚರಿಸುವುದು ಕಷ್ಟವಾಗಿದೆ. ಮಾರುದ್ದದ ಗುಂಡಿಗಳು ಅಲ್ಲಲ್ಲಿ ಕಂಡು ಬರುತ್ತವೆ. ಇಲ್ಲಿನ ಸಂಚಾರ ಅಪಾಯಕ್ಕೆ ಆಹ್ವಾನ ನೀಡುತ್ತಿದೆ. ಬೈಕ್ ಸವಾರರು ಈ ರಸ್ತೆಯಲ್ಲಿ ಹೋಗುವಾಗ ತಮ್ಮ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಸಂಚರಿಸಬೇಕಾದ ದುಃಸ್ಥಿತಿ ಇದೆ. ದ್ವಿಚಕ್ರ ವಾಹನಗಳ ಸವಾರರು ಈ ರಸ್ತೆಯಲ್ಲಿ ಆಯತಪ್ಪಿ ಬೀಳುವುದು ಸಾಮಾನ್ಯವಾಗಿಬಿಟ್ಟಿದೆ. ಅಪಘಾತಗಳೂ ಹೆಚ್ಚುತ್ತಿವೆ. ಹಲವು ತಿಂಗಳಿಂದ ರಸ್ತೆ ಹಾಳಾಗಿದ್ದರೂ ಅಧಿಕಾರಿಗಳು ದುರಸ್ತಿಗೆ ಕ್ರಮ ಕೈಗೊಂಡಿಲ್ಲ. ಹೀಗೆ ಬಿಟ್ಟರೆ ಭಾರಿ ಅವಘಡ ಸಂಭವಿಸುವ ಸಾಧ್ಯತೆಯಿದೆ. ಆದ್ದರಿಂದ ಆದಷ್ಟು ಬೇಗ ದುರಸ್ತಿ ಮಾಡಿಸಬೇಕು.

ಆನಂದ್ ಎನ್., ಲಗ್ಗೆರೆ ನಿವಾಸಿ

‘ಬೆಳಗದ ಬೀದಿ ದೀಪ’

ಅರಮನೆ ರಸ್ತೆಯಲ್ಲಿ ಬಾಲಬ್ರೂಯಿ ಕಟ್ಟಡದಿಂದ ಮಿನುಗುತಾರೆ ಕಲ್ಪನಾ ವೃತ್ತದವರೆಗೆ ಇರುವ ಬೀದಿ ದೀಪಗಳು ಬೆಳಗುತ್ತಿಲ್ಲ. ಇದರಿಂದ ಕತ್ತಲೆಯಲ್ಲಿಯೇ ವಾಹನಗಳು ಸಂಚರಿಸಬೇಕಾಗಿದೆ. ಇಲ್ಲಿ ರಸ್ತೆ ಅಪಘಾತಗಳು ಸಂಭವಿಸುವ ಸಾಧ್ಯತೆಗಳಿವೆ. ಇದೇ ರಸ್ತೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರ ಮನೆಯಿದೆ. ಇಷ್ಟಾಗಿಯೂ ಬೀದಿ ದೀಪ ಸಮಸ್ಯೆಗೆ ಪರಿಹಾರ ಒದಗಿಸದಿರುವುದು ವಿಪರ್ಯಾಸ. ಈಗಲಾದರೂ ಎಚ್ಚೆತ್ತುಕೊಂಡು ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು.

ವಸಂತನಗರ ನಿವಾಸಿ ಕ್ಷೇಮಾಭಿವೃದ್ಧಿ ಸಂಘ



‘ಕಿತ್ತುಹೋದ ಸಿಮೆಂಟಿನ ಚಪ್ಪಡಿ’



ಚರಂಡಿಗೆ ಹಾಕಿರುವ ಸಿಮೆಂಟಿನ ಚಪ್ಪಡಿಗಳು ಕಿತ್ತು ಹೋಗಿವೆ

ಬಾಬುಸಪಾಳ್ಯದ ಫ್ಲವರ್ ಗಾರ್ಡನ್ 1ನೇ ಕ್ರಾಸ್ ರಸ್ತೆಯ ಚರಂಡಿಗೆ ಹಾಕಿರುವ ಸಿಮೆಂಟಿನ ಚಪ್ಪಡಿಗಳು (ಕಾಂಕ್ರೀಟ್ ಸ್ಲ್ಯಾಬ್) ಕಿತ್ತುಹೋಗಿವೆ. ಕೆಲವು ಚಪ್ಪಡಿಗಳು ತುಂಡಾಗಿ ಚರಂಡಿಗೆ ಬಿದ್ದಿವೆ. ಇದರಿಂದಾಗಿ ಮಳೆ ಬಂದಲ್ಲಿ ಚರಂಡಿ ಕಟ್ಟಿಕೊಂಡು ನೀರು, ರಸ್ತೆಯನ್ನು ಆವರಿಸಿಕೊಳ್ಳುತ್ತಿದೆ. ಇದರಿಂದ ಪ್ರಯಾಣಿಕರು ಮೂಗು ಮುಚ್ಚಿಕೊಂಡು ಸಾಗಬೇಕಾಗಿದೆ. ದ್ವಿಚಕ್ರ ವಾಹನ ಸವಾರರಿಗೆ ಸಂಚಾರ ಕಷ್ಟವಾಗಿದೆ. ಇಲ್ಲಿ ಓಡಾಡುವಾಗ ಮಕ್ಕಳು, ವೃದ್ಧರು ಬಿದ್ದು ಗಾಯ ಮಾಡಿಕೊಳ್ಳುವ ಸಾಧ್ಯತೆಗಳೂ ಇವೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳ ಗಮನಕ್ಕೆ ತಂದರೂ ಕ್ರಮಕೈಗೊಂಡಿಲ್ಲ.

ಕೃಷ್ಣಚಾರಿ, ಫ್ಲವರ್ ಗಾರ್ಡನ್ 1ನೇ ಕ್ರಾಸ್ ನಿವಾಸಿ

ಕಂಬಾಳು ಗೊಲ್ಲರಹಟ್ಟಿಯ ಗ್ರಾಮಸ್ಥರಲ್ಲಿ ಮತ್ತೆ ಮೂಡಿದ ಆತಂಕ • ಮೊಬೈಲ್ ಫೋನ್‌ನಲ್ಲಿ ಚಿರತೆ ಫೋಟೊ ಸೆರೆ

ಮಹಿಳೆ ಕೊಂದ ಜಾಗದಲ್ಲೇ ಮತ್ತೆ ಚಿರತೆ


ಕಂಬಾಳು ಗೊಲ್ಲರಹಟ್ಟಿ ಪ್ರದೇಶದಲ್ಲಿ ಮಹಿಳೆಯನ್ನು ಕೊಂದ ಜಾಗದಲ್ಲಿ ಬಂಡೆ ಮೇಲೆ ಕಾಣಿಸಿಕೊಂಡ ಚಿರತೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನ.18ರಂದು ಮಹಿಳೆಯನ್ನು ಕೊಂದುಹಾಕಿದ್ದ ಸ್ಥಳದಲ್ಲೇ ಭಾನುವಾರ ಸಂಜೆ ಮತ್ತೆ ಚಿರತೆ ಕಾಣಿಸಿಕೊಂಡಿದ್ದು, ಗ್ರಾಮಸ್ಥರು ಭಯಭೀತರಾಗಿದ್ದಾರೆ.

ನೆಲಮಂಗಲ ತಾಲ್ಲೂಕು ಶಿವಗಂಗೆ ಬೆಟ್ಟದ ತಪ್ಪಲಿನ ಕಾಡಂಚಿನ ಗ್ರಾಮ ಕಂಬಾಳು ಗೊಲ್ಲರಹಟ್ಟಿಯಲ್ಲಿ ಕರಿಯಮ್ಮ ಎಂಬ ಮಹಿಳೆಯನ್ನು ಚಿರತೆಯೊಂದು ಕೊಂದುಹಾಕಿತ್ತು. ಈಗ ಆ ಜಾಗದ ಸಮೀಪದಲ್ಲಿರುವ ಬಂಡೆಯ ಮೇಲೆ ಚಿರತೆ ಕಾಣಿಸಿಕೊಂಡಿದೆ. ಸ್ಥಳೀಯರು ಮೊಬೈಲ್ ಫೋನ್ ಕ್ಯಾಮೆರಾದಲ್ಲಿ ಆ ಚಿರತೆಯ ಫೋಟೊವನ್ನು ಸೆರೆ ಹಿಡಿದಿದ್ದಾರೆ.

ಮುಖ್ಯಾಂಶಗಳು

- 8 ಚಿಕ್ಕ ಬೋನು, ಒಂದು ದೊಡ್ಡ ಬೋನು ಇರಿಸಿದ ಅರಣ್ಯ ಇಲಾಖೆ
- ಹೊಲಗಳಿಗೆ ಹೋಗಲು ಅಂಜುತ್ತಿರುವ ಗ್ರಾಮಸ್ಥರು

ಮಹಿಳೆಯನ್ನು ಕೊಂದ ಘಟನೆಯ ನಂತರ, ಅರಣ್ಯ ಇಲಾಖೆಯವರು ಎಂಟು ಚಿಕ್ಕ ಬೋನು ಹಾಗೂ ಒಂದು ದೊಡ್ಡದಾದ 'ತುಮಕೂರು ಬೋನ'ನ್ನು ಚಿರತೆ ಓಡಾಡಿದ್ದ ಜಾಗಗಳಲ್ಲಿ ಇಟ್ಟಿದ್ದಾರೆ.

'ಇದು ಕರಿಯಮ್ಮ ಅವರನ್ನು ಕೊಂದ ಚಿರತೆಯಾಗಿರಬಹುದು. ಏಕೆಂದರೆ, ಕರಿಯಮ್ಮ ಅವರನ್ನು ಕೊಂದು ಮೃತದೇಹವನ್ನು ಎಳೆದುಕೊಂಡು ಹೋದ ಜಾಗದಿಂದ ನೂರು ಮೀಟರ್ ದೂರದಲ್ಲಿ ಈ ಚಿರತೆ ಕಾಣಿಸಿಕೊಂಡಿದೆ' ಎಂದು ಗ್ರಾಮಸ್ಥರು ಅಂದಾಜಿಸುತ್ತಿದ್ದಾರೆ.

ಈಗಾಗಲೇ 40ರಿಂದ 50 ಮಂದಿ ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಸೆರೆ ಹಿಡಿಯುವುದಕ್ಕಾಗಿ ಎರಡು ಪಾಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. 'ಈಗ ಚಿರತೆ ಕಾಣಿಸಿಕೊಂಡಿರುವುದರಿಂದ ಗ್ರಾಮಸ್ಥರು ರಾತ್ರಿ ವೇಳೆ ಹೊರಗೆ ಅಡ್ಡಾಡುವಾಗ ಎಚ್ಚರಿಕೆ ವಹಿಸಬೇಕು' ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಜನರಲ್ಲಿ ಮನವಿ ಮಾಡಿದ್ದಾರೆ.

'ಕರಿಯಮ್ಮ ಅವರನ್ನು ಕೊಂದ ಚಿರತೆ ಇದೇ ಇರಬಹುದು. ಗಲಾಟೆ ಮಾಡದೆ ಚಿರತೆ ಬೋನಿಗೆ ಬೀಳುವಂತೆ ಮಾಡಬೇಕಿದೆ' ಎಂದು ಹೆಸರು ಹೇಳಲಿಚ್ಛಿಸದ ಅರಣ್ಯ ಸಿಬ್ಬಂದಿಯೊಬ್ಬರು ತಿಳಿಸಿದ್ದಾರೆ.

ಕರಿಯಮ್ಮ ಅವರು ಹಸುಗಳಿಗೆ ಮೇವು ತರಲು ಹೋದ ಸಂದರ್ಭದಲ್ಲಿ ಚಿರತೆ ದಾಳಿ ಮಾಡಿ ಕೊಂದುಹಾಕಿತ್ತು.

ಚಿರತೆ ದಾಳಿಯಿಂದಾಗಿ ಹೊಲಗಳ ಹತ್ತಿರಕ್ಕೆ ಹೋಗಲು, ದನ-ಕರು ಮೇಕೆ ಮೇಯಿಸಲು ತೆರಳಲು ಗ್ರಾಮಸ್ಥರು ಹೆದರುತ್ತಿದ್ದಾರೆ. ಚಿರತೆಯ ಭಯದಿಂದಾಗಿ ಮುದ್ದೀರೇಶ್ವರ ಜಾತ್ರೆಯನ್ನು ಮಾಡದಂತೆ ತಹಶೀಲ್ದಾರ್ ತಿಳಿಸಿದ್ದಾರೆ.



ಉದ್ಯಮಿಗೆ ₹56 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನ ಮಾರುವುದಾಗಿ ನಂಬಿಸಿ ಉದ್ಯಮಿಯಿಂದ ₹56 ಲಕ್ಷ ಪಡೆದು ವಂಚಿಸಿದ ದಂಪತಿ ವಿರುದ್ಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾದಹಳ್ಳಿ ವಿಲೇಜ್ ಹಾಲಿವುಡ್ ಟೌನ್ ನಿವಾಸಿ ಜಾನ್ ರಾಬರ್ಟ್ ಕೊಲಾಸೊ ಅವರು ನೀಡಿದ ದೂರಿನ ಮೇರೆಗೆ ಎ.ಶಿವಲಿಂಗಯ್ಯ ಮತ್ತು ಆತನ ಪತ್ನಿ ಭವಾನಿ ರೆಡ್ಡಿ ವಿರುದ್ಧ ವಂಚನೆ, ನಂಬಿಕೆ ದ್ರೋಹ ಆರೋಪದಡಿ ಸಿಸಿಬಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಉದ್ಯಮಿ ಜೀವಾ ಕೈ ಬರಹದ ಮಾದರಿ ಸಂಗ್ರಹ

ಮರಣಪತ್ರ ಎಫ್‌ಎಸ್‌ಎಲ್‌ಗೆ ರವಾನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣದ ಆರೋಪಿ ಮಹಿಳೆ ಎಸ್. ಜೀವಾ ಆತ್ಮಹತ್ಯೆಗೂ ಮುನ್ನ ಬರೆದ ಪತ್ರದ ನೈಜತೆ ತಿಳಿಯಲು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಲಾಗುತ್ತಿದೆ.

ಮರಣಪತ್ರ ಬರೆದಿಟ್ಟು ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡಿರುವ ಉದ್ಯಮಿ ಜೀವಾ ಅವರ ಸಾವಿನ ಸಂಬಂಧ ಸಹೋದರಿ ಸಂಗೀತಾ ದೂರು ನೀಡಿದ್ದು, ಹಲವು ಆರೋಪಗಳನ್ನು ಮಾಡಿದ್ದಾರೆ.

ಸಾಯುವ ಮುನ್ನ ಅವರು ಬರೆದಿಟ್ಟಿದ್ದಾರೆ ಎನ್ನಲಾದ 11 ಪುಟಗಳ ಮರಣಪತ್ರ ಹಾಗೂ ಸಂಗೀತಾ ನೀಡಿರುವ ದೂರು ಆಧರಿಸಿ ಸಿಐಡಿ ತನಿಖಾಧಿಕಾರಿಯಾಗಿರುವ ಡಿವೈಎಸ್‌ಪಿ ಕನಕಲಕ್ಷ್ಮೀ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಹಾಗೂ ಆತ್ಮಹತ್ಯೆಗೆ ಪ್ರಚೋದನೆ ಆರೋಪದಡಿ ಪ್ರಕರಣ ದಾಖಲಿಸಿಕೊಂಡಿರುವ ಬನಶಂಕರಿ ಠಾಣೆ ಪೊಲೀಸರು, ಹಲವು ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ.

'ಮರಣಪತ್ರ ವಶಕ್ಕೆ ಪಡೆದು ಪರಿಶೀಲನೆ ನಡೆಸಲಾಗುತ್ತಿದ್ದು, ಜೀವಾ ಅವರ ಕೈ ಬರಹದ ಮಾದರಿ ಸಂಗ್ರಹಿಸಲಾಗಿದೆ. ಮರಣಪತ್ರದ ನೈಜತೆ ತಿಳಿಯುವುದಕ್ಕಾಗಿ ಎಫ್‌ಎಸ್‌ಎಲ್‌ಗೆ ಕಳುಹಿಸಲಾಗುವುದು. ಮೃತ ಮಹಿಳೆಯ ಸಂಬಂಧಿಕರ ಹೇಳಿಕೆಗಳನ್ನು ದಾಖಲಿಸಲಾಗುವುದು. ಆ ಬಳಿಕ ಪ್ರಕರಣದಲ್ಲಿ ಆರೋಪಿಯಾಗಿರುವ ಅಧಿಕಾರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗುವುದು' ಎಂದು ಪೊಲೀಸರು ಹೇಳಿದ್ದಾರೆ.

ಭೋವಿ ಅಭಿವೃದ್ಧಿ ನಿಗಮದಲ್ಲಿ ಸಾಲ ಕೊಡಿಸುವುದಾಗಿ ಮಹಿಳೆಯರು ಸೇರಿದಂತೆ ಹಲವರಿಂದ ಹಣ ಪಡೆದು ವಂಚಿಸಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಸಿದ್ದಾಪುರ ಠಾಣೆಯಲ್ಲಿ 2023ರಲ್ಲಿ ದಾಖಲಾಗಿದ್ದ ಪ್ರಕರಣವನ್ನು ಸಿಐಡಿ ತನಿಖೆ ನಡೆಸುತ್ತಿದೆ. ಈ ಪ್ರಕರಣದಲ್ಲಿ ಸರಸ್ವತಿ, ಲಕ್ಷ್ಮೀ ಹಾಗೂ ಎರಡು ಕಂಪನಿಗಳು ಸೇರಿ 9 ಆರೋಪಿಗಳನ್ನು ಹೆಸರಿಸಲಾಗಿತ್ತು.

ಈ ವಂಚನೆ ಪ್ರಕರಣದಲ್ಲಿ ಜೀವಾ ಕೂಡ ಭಾಗಿಯಾಗಿದ್ದ ಆರೋಪವಿದ್ದ ಕಾರಣ ಸಿಐಡಿ ವಿಚಾರಣೆಗೆ ಕರೆದಿತ್ತು. ಸಿಐಡಿ ವಿಚಾರಣೆಯಿಂದ ರಕ್ಷಣೆ ಕೋರಿ ಜೀವಾ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ನ್ಯಾಯಾಲಯವು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿತ್ತು.

76 ಮೊಬೈಲ್, 9 ದ್ವಿಚಕ್ರ ವಾಹನ ವಶ

ಬೆಂಗಳೂರು: ನಗರದ ವಿವಿಧೆಡೆ ವಾಹನ ಹಾಗೂ ಮೊಬೈಲ್‌ಗಳನ್ನು ಕಳವು ಮಾಡುತ್ತಿದ್ದ ಏಳು ಮಂದಿಯನ್ನು ಬಂಧಿಸಿ, 76 ಮೊಬೈಲ್ ಹಾಗೂ 9 ದ್ವಿಚಕ್ರ ವಾಹನಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಪ್ರಯಾಣಿಕರ ಸೋಗಿನಲ್ಲಿ ಬಸ್‌ಗಳಲ್ಲಿ ಪ್ರಯಾಣಿಸಿ ಮೊಬೈಲ್ ಕಳವು ಮಾಡುತ್ತಿದ್ದ ದಾಸನಪುರದ ಲಿಖಿನ್ ವಿಶಾಲ್ ಮತ್ತು ವೆರಾಕುಲಾ ಸಾಕಿಮ್‌ನನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಬಂಧಿಸಿ, ₹6.60 ಲಕ್ಷ ಮೌಲ್ಯದ 38 ಮೊಬೈಲ್ ಫೋನ್ ಹಾಗೂ ಒಂದು ದ್ವಿಚಕ್ರ ವಾಹನ ವಶಪಡಿಸಿಕೊಂಡಿದ್ದಾರೆ. ಮನೆ ಮುಂಭಾಗ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳವಾದ ದೂರಿನ ತನಿಖೆ ನಡೆಸಿದ ಪೊಲೀಸರು, ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು.

ಎಂಟು ದ್ವಿಚಕ್ರ ವಾಹನ ಜಪ್ತಿ: ಗೋವಿಂದರಾಜ ನಗರ ಠಾಣೆ ಪೊಲೀಸರು ಐವರು ಆರೋಪಿಗಳನ್ನು ಬಂಧಿಸಿ, ಎಂಟು ದ್ವಿಚಕ್ರ ವಾಹನ ಹಾಗೂ 28 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಮೊಹಮ್ಮದ್ ಸೋಹೆಲ್, ಭರತ್, ಹರೀಶ್, ಸಂತೋಷ್, ಸಲ್ಮಾನ್ ಖಾನ್ ಎಂಬುವವರನ್ನು ಬಂಧಿಸಿ, ₹5.50 ಲಕ್ಷ ಮೌಲ್ಯದ ಸ್ವತ್ತು ಜಪ್ತಿ ಮಾಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಬಡಗಿ ಕೆಲಸಕ್ಕೆ ಬಂದು ಹೋಟೆಲ್‌ನಲ್ಲಿ ಆತ್ಮಹತ್ಯೆ

ಬೆಂಗಳೂರು: ಬಡಗಿ ಕೆಲಸಕ್ಕಾಗಿ ಉಡುಪಿಯಿಂದ ನಗರಕ್ಕೆ ಬಂದಿದ್ದ ವ್ಯಕ್ತಿಯೊಬ್ಬರು ಹೋಟೆಲ್‌ನ ಸ್ನಾನದ ಕೊಠಡಿಯ ಕಿಟಕಿಯ ಗ್ರಿಲ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕೋರಮಂಗಲ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಉಡುಪಿಯ ಮೂಲ್ಕಿ ನಿವಾಸಿ ಜಯರಾಮ್(40) ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 'ಜಯರಾಮ್ ಮದ್ಯ ವ್ಯಸನಿಯಾಗಿದ್ದರು. ಇತ್ತೀಚೆಗೆ ಅವರ ಚಿಕ್ಕಮ್ಮ ವಯೋಸಹಜ ಕಾಯಿಲೆಯಿಂದ ಮೃತಪಟ್ಟಿದ್ದರು. ಅದರಿಂದ ಬಹಳ ಬೇಸರಗೊಂಡಿದ್ದರು. ಜಯರಾಮ್ ಅವರು ಸಹೋದರ ವಾಸುದೇವ್ ಹಾಗೂ ಇತರೆ ಇಬ್ಬರ ಜತೆ ಹೋಟೆಲ್‌ವೊಂದರ ಮರಗೆಲಸ ಮಾಡಲು ಶುಕ್ರವಾರ ಉಡುಪಿಯಿಂದ ಬಂದಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಗೆಳತಿ ಸೇರಿ 7 ಆರೋಪಿಗಳ ಬಂಧನ

ಆಂಧ್ರಪ್ರದೇಶದ ಉದ್ಯಮಿ ಅಪಹರಿಸಿ ಚಿನ್ನಾಭರಣ ಸುಲಿಗೆ ಮಾಡಿದ್ದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರಪ್ರದೇಶದ ಉದ್ಯಮಿಯನ್ನು ಆತನ ಸ್ನೇಹಿತೆ ಮೂಲಕ ಕರೆಸಿಕೊಂಡು ಅಪಹರಿಸಿ, ಚಿನ್ನಾಭರಣ ದೋಚಿದ್ದ 7 ಆರೋಪಿಗಳನ್ನು ಕೋರಮಂಗಲ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ನೆಲ್ಲೂರಿನ ಪೋತುಲ ಶಿವ ಎಂಬುವವರನ್ನು ಅಪಹರಿಸಿ ಸುಲಿಗೆ ಮಾಡಿದ ಆರೋಪದಡಿ ಮೋನಿಕಾ, ಹರೀಶ್, ಹರಿಕೃಷ್ಣ, ರಾಜ್‌ಕುಮಾರ್, ನರೇಶ್, ಅಂಜನೀಲ್, ನರಸಿಂಹ ಎಂಬುವವರನ್ನು ಬಂಧಿಸಲಾಗಿದೆ.

'ಆಂಧ್ರ ಪ್ರದೇಶದಲ್ಲಿ ಔಷಧ ವ್ಯಾಪಾರಿಯಾಗಿರುವ ಶಿವ ಹಾಗೂ ಮೋನಿಕಾ ಅವರು ನಾಲ್ಕು ವರ್ಷಗಳಿಂದ ಸ್ನೇಹಿತರು. ನವೆಂಬರ್ 17ರಂದು ಮೋನಿಕಾ, ಶಿವನನ್ನು ಪೆನುಗೊಂಡಕ್ಕೆ ಕರೆಸಿದ್ದಳು. ನಂತರ ಇಬ್ಬರೂ ಪಾವಗಡಕ್ಕೆ ಬಂದು ಸುತ್ತಾಟ ನಡೆಸುವ ವೇಳೆ ಕಾರೊಂದರಲ್ಲಿ ಬಂದ ಆರೋಪಿಗಳಾದ ಹರೀಶ್, ಹರಿಕೃಷ್ಣ ಹಾಗೂ ಇತರರು ತಾವು ಪೊಲೀಸರೆಂದು ಪರಿಚಯಿಸಿಕೊಂಡು ಶಿವ ಹಾಗೂ ಮೋನಿಕಾಳನ್ನು ಕಾರಿನಲ್ಲಿ ಅಪಹರಿಸಿದರು. ಶಿವ ಅವರ ಮೇಲೆ ಹಲ್ಲೆ ನಡೆಸಿ ಪಾವಗಡದ ಮನೆಯೊಂದರಲ್ಲಿ ಕೂಡಿ ಹಾಕಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'3 ದಿನಗಳು ಹೋಟೆಲ್‌ನಲ್ಲಿರಿಸಿಕೊಂಡು ಅವರ ಬಳಿಯಿದ್ದ ಚಿನ್ನದ ಸರ, ಬ್ರಾಸ್‌ಲೆಟ್ ಕಿತ್ತುಕೊಂಡು ಅದನ್ನು ಅಡ ವಿಟ್ಟು ಹಣ ಪಡೆದುಕೊಂಡಿದ್ದರು. ನಂತರ ಮೋನಿಕಾಳನ್ನು ಬಿಟ್ಟು ಕಳುಹಿಸಿದರು. ಬಳಿಕ ಶಿವನಿಗೆ ₹10 ಲಕ್ಷ ನೀಡುವಂತೆ ಬೇಡಿಕೆ ಇರಿಸಿದರು. ಆದರೆ ಅವರು ₹5 ಲಕ್ಷ ನೀಡಲು ಒಪ್ಪಿದರು. ಸ್ನೇಹಿತರ ಮೂಲಕ ಹಣವನ್ನು ಶಿವ ಅವರು ತನ್ನ ಖಾತೆಗೆ ಹಾಕಿಸಿಕೊಂಡಿದ್ದರು. ಆದರೆ, ಹಣ ನಗದೀಕರಣಕ್ಕೆ ಅಗತ್ಯವಿರುವ ಡೆಬಿಟ್ ಕಾರ್ಡ್‌ಗಳನ್ನ ಮನೆಯಲ್ಲಿಟ್ಟು ಬಂದಿದ್ದರು. ಮನೆಯವರಿಗೆ ಕರೆ ಮಾಡಿಸಿದ್ದ ಆರೋಪಿಗಳು, ಮೆಜೆಸ್ಟಿಕ್‌ಗೆ ಅವರ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳನ್ನು ತರಿಸಿಕೊಂಡಿದ್ದರು' ಎಂದು ಹೇಳಿದ್ದಾರೆ.

'ನ. 21ರಂದು ಹಣ ಡ್ರಾ ಮಾಡಿಸಲು ಮೂವರೂ ಆರೋಪಿಗಳು ಶಿವನನ್ನು ಕೋರಮಂಗಲದ ಫೋರಂ ಮಾಲ್ ಜಂಕ್ಷನ್ ಬಳಿಯಿರುವ ಎಟಿಎಂ ಬಳಿ ಕರೆತಂದಿದ್ದರು. ಆಗ ಹಣ ಹಂಚಿಕೊಳ್ಳುವ ವಿಚಾರದಲ್ಲಿ ಇಬ್ಬರು ಆರೋಪಿಗಳ ನಡುವೆ ಜಗಳವಾಯಿತು. ಗಸ್ತಿನಲ್ಲಿದ್ದ ಕೋರಮಂಗಲ ಪೊಲೀಸರ ತಂಡ ಅನುಮಾನಗೊಂಡು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಅಪಹರಣ ಮಾಡಿರುವುದು ಗೊತ್ತಾಯಿತು. ತಕ್ಷಣ ಪ್ರಕರಣ ದಾಖಲಿಸಿಕೊಂಡ ಕೋರಮಂಗಲ ಪೊಲೀಸರು, ಪಾವಗಡದಲ್ಲಿದ್ದ ನಾಲ್ವರ ಸಹಿತ ಒಟ್ಟು ಏಳು ಆರೋಪಿಗಳನ್ನು ಬಂಧಿಸಿದರು' ಎಂದಿದ್ದಾರೆ.

ಆರೋಪಿ ಯುವತಿ ಹಾಗೂ ಆಕೆಯ ಪ್ರಿಯಕರ ಅಂಜನೀಲ್ ಸೇರಿ ಶಿವನ ಅಪಹರಣದ ಸಂಚು ರೂಪಿಸಿರುವುದು ವಿಚಾರಣೆ ವೇಳೆ ಗೊತ್ತಾಗಿದೆ. ಆರೋಪಿಗಳ ಪೈಕಿ ಒಬ್ಬನ ವಿರುದ್ಧ 15 ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಅಪರಾಧ ಸುದ್ದಿ

ಪತ್ನಿ ಕೊಲೆ ಮಾಡಿ ಪರಾರಿ

ಪತ್ನಿಯ ಕುತ್ತಿಗೆಯನ್ನು ವೇಲ್‌ನಿಂದ ಬಿಗಿದು ಕೊಲೆ ಮಾಡಿ, ಪತಿ ಪರಾರಿಯಾಗಿರುವ ಘಟನೆ ಚಂದ್ರಾ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಗಂಗೊಂಡನಹಳ್ಳಿ ಮೂರನೇ ಮುಖ್ಯರಸ್ತೆ ನಿವಾಸಿ ಗೌಸಿಯಾಬಿ (31) ಕೊಲೆಯಾದ ಗೃಹಿಣಿ. ವೆಲ್ಡಿಂಗ್ ಕೆಲಸ ಮಾಡುವ ಇಮ್ರಾನ್ ಖಾನ್ ಅವರನ್ನು ವಿವಾಹವಾಗಿದ್ದು, ನಾಲ್ಕು ವರ್ಷದ ಗಂಡುಮಗುವಿದೆ.

'ಪತ್ನಿಯ ಶೀಲದ ಬಗ್ಗೆ ಶಂಕೆ ವ್ಯಕ್ತಪಡಿಸಿ ಇಮ್ರಾನ್ ಜಗಳವಾಡುತ್ತಿದ್ದರು. ಶುಕ್ರವಾರವೂ ದಂಪತಿ ಮಧ್ಯೆ ಜಗಳ ನಡೆದು, ಆಕೆಯ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಿ, ಮನೆಯ ಬಾಗಿಲ ಮುಚ್ಚಿಕೊಂಡು ಪರಾರಿಯಾಗಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

ಶನಿವಾರ ರಾತ್ರಿ ಗೌಸಿಯಾಬಿ ಅವರ ಸಹೋದರ ಮೊಬೈಲ್‌ಗೆ ಕರೆ ಮಾಡಿದಾಗ ಸ್ವೀಕರಿಸಲಿಲ್ಲ. ಮನೆಗೆ ಬಂದು ನೋಡಿದಾಗ ಕೊಲೆ ಆಗಿರುವುದು ಗೊತ್ತಾಗಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪ್ರಕರಣ ದಾಖಲಿಸಿಕೊಂಡು ಆರೋಪಿ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಹೊಯ್ಸಳ ಸಿಬ್ಬಂದಿ ಮೇಲೆ ಹಲ್ಲೆ

ಹೊಯ್ಸಳ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಯುವಕನನ್ನು ಬಾಗಲೂರು ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಾಗಲೂರು ಸಮೀಪದ ಬಿ.ಕೆ ಹಳ್ಳಿ ನಿವಾಸಿ ನಾಗೇಶ್ (30) ಬಂಧಿತ. ಶನಿವಾರ ತಡರಾತ್ರಿ ಹೆಡ್ ಕಾನ್‌ಸ್ಟೆಬಲ್ ಮಲ್ಲಿಕಾರ್ಜುನ್ ಮೇಲೆ ಹಲ್ಲೆ ನಡೆಸಿದ್ದ.

ಪಾರ್ಕ್‌ನಲ್ಲಿ ಮರ ಬಿದ್ದು ಸಾವು

ಬೆಂಗಳೂರು: ರಾಜಾಜಿನಗರದ ಬಿಬಿಎಂಪಿ ಉದ್ಯಾನದಲ್ಲಿ ಮರ ಬಿದ್ದು ಲಕ್ಷ್ಮಣ್ ಎಂಬುವವರು ಮೃತಪಟ್ಟಿದ್ದಾರೆ.

ಬಿಬಿಎಂಪಿ ತ್ಯಾಜ್ಯ ವಿಲೇವಾರಿ ವಾಹನದ ಚಾಲಕನಾಗಿರುವ ಲಕ್ಷ್ಮಣ್ (30) ಅವರು ನವರಂಗ್ ಚಿತ್ರಮಂದಿರದ ಬಳಿಯ ಉದ್ಯಾನದಲ್ಲಿ ಭಾನುವಾರ ಮಲಗಿದ್ದರು. ಆಗ ಅವಘಡ ನಡೆದಿದೆ. ರಾಜಾಜಿನಗರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮೊಬೈಲ್ ನೋಡುತ್ತಿದ್ದಾಗ ಕಾರು ಡಿಕ್ಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯ ಮುಂದೆ ಮೊಬೈಲ್ ನೋಡುತ್ತಾ ಕುಳಿತಿದ್ದ ವ್ಯಕ್ತಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಅವರ ಎರಡೂ ಕಾಲುಗಳಿಗೆ ಪೆಟ್ಟಾದ ಘಟನೆ ಮಂಜುನಾಥನಗರದಲ್ಲಿ ನಡೆದಿದೆ.

ಖಾಸಗಿ ಕಂಪನಿ ಉದ್ಯೋಗಿ ಆಗಿರುವ ಮಂಜುನಾಥ್ (40) ಅವರು ತಮ್ಮ ಮನೆಯ ಮುಂದಿನ ಮರದ ಕೆಳಗಿರುವ ಕಟ್ಟೆಯಲ್ಲಿ ಕುಳಿತು ಮೊಬೈಲ್ ನೋಡುತ್ತಿದ್ದರು. ಸಂಜೆ 4.30ರ ವೇಳೆ ಅದೇ ರಸ್ತೆಯಲ್ಲಿ ಬಂದ ಕಾರು ಚಾಲಕನ ನಿಯಂತ್ರಣ ತಪ್ಪಿ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ಕಾರಿನ ಮುಂಭಾಗ ಜಖಂಗೊಂಡಿದೆ.



ಈ ಘಟನೆಯ ದೃಶ್ಯ ಮನೆ ಮುಂದಿನ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

ತೀವ್ರವಾಗಿ ಗಾಯಗೊಂಡ ಮಂಜುನಾಥ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದರು. ಅವರ ಎರಡೂ ಕಾಲುಗಳಿಗೆ ಬಲವಾದ ಪೆಟ್ಟು ಬಿದ್ದಿದ್ದು, ಶಸ್ತ್ರಚಿಕಿತ್ಸೆ ಅಗತ್ಯವಿದೆ ಎಂದು ವೈದ್ಯರು ತಿಳಿಸಿದ್ದಾರೆ. ಸ್ಥಳೀಯ ನಿವಾಸಿಯಾಗಿರುವ ಕಾರು ಚಾಲಕನಿಗೂ ಸಣ್ಣಪುಟ್ಟ ಗಾಯವಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಜಯನಗರ ಸಂಚಾರ ವಿಭಾಗದ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.


ಪೀಣ್ಯದಾಸರಹಳ್ಳಿ ಸಮೀಪದ ಕಾಳಸ್ತ್ರೀ ನಗರದಲ್ಲಿ ರಮಾಬಾಯಿ ರಾಜ್ಯ ಮಹಿಳಾ ಸಂಘ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದಲ್ಲಿ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರನ್ನು ಅಭಿನಂದಿಸಲಾಯಿತು. ಸಂಘದ ಅಧ್ಯಕ್ಷೆ ಗಿರಿಜಾ ಎನ್., ಪ್ರಧಾನ ಕಾರ್ಯದರ್ಶಿ ಸವಿತಾ ಡಿ.ಎನ್, ಕನ್ನಡ ಜಾನಪದ ಪರಿಷತ್ ದಾಸರಹಳ್ಳಿ ಕ್ಷೇತ್ರ ಘಟಕದ ಅಧ್ಯಕ್ಷ ವೈ.ಬಿ.ಎಚ್ ಜಯದೇವ್, ಜೆಡಿಎಸ್ ಮುಖಂಡ ಅಂದಾನಪ್ಪ, ಸಮಾಜ ಸೇವಕರಾದ ಸಂಗನ ಬಸಪ್ಪ ಬಿರಾದಾರ್, ಲತಾ ಕುಂದರಗಿ, ಬಿ.ಟಿ. ಶ್ರೀನಿವಾಸ್, ಬಲರಾಮ್, ಎಸ್. ಮಂಜುನಾಥ್(ಎಬಿಬಿ),ಎ.ಎನ್. ನಾಗರಾಜ ಗೌಡ, ಶಕ್ತಿಅಸ್ತ್ರ ಮಂಜುನಾಥ್ ಹಾಜರಿದ್ದರು

ನಾಳೆಯಿಂದ ಟೆನಿಸ್ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವೆಂಬರ್ 26ರಿಂದ 30ರವರೆಗೆ ನಗರದಲ್ಲಿ 25ನೇ ಅಖಿಲ ಭಾರತ ಪೊಲೀಸ್ ಲಾನ್ ಟೆನಿಸ್ ಚಾಂಪಿಯನ್‌ಷಿಪ್ ಆಯೋಜಿಸಲಾಗಿದೆ.

ಆಂಧ್ರ ಪ್ರದೇಶ, ತೆಲಂಗಾಣ, ಅಸ್ಸಾಂ, ಬಿಹಾರ, ಹಿಮಾಚಲ ಪ್ರದೇಶ, ಗುಜರಾತ್, ಜಮ್ಮು ಮತ್ತು ಕಾಶ್ಮೀರ, ಕರ್ನಾಟಕ ರಾಜ್ಯಗಳ ಪೊಲೀಸ್, ಸಿಆರ್‌ಪಿಎಫ್, ಗುಪ್ತಚರ ವಿಭಾಗ, ರಾಷ್ಟ್ರೀಯ ಭದ್ರತಾ ಪಡೆ ಸೇರಿದಂತೆ 24 ತಂಡಗಳು ಹೆಸರು ನೋಂದಾಯಿಸಿದ್ದು, 120 ಆಟಗಾರರು ಪಾಲ್ಗೊಳ್ಳುತ್ತಿದ್ದಾರೆ ಎಂದು ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಐಜಿಪಿ ಜೋಸೆಫ್ ಮೋಹನ್ ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನ.26ರ ಬೆಳಿಗ್ಗೆ ತಂಡಗಳು ಹಾಗೂ ಆಟಗಾರರ ಡ್ರಾ ಪ್ರಕ್ರಿಯೆ ನಡೆಯಲಿದೆ. ಬಳಿಕ ಸಿಂಗಲ್ಸ್, ಡಬಲ್ಸ್ ಮತ್ತು ಹಿರಿಯರ ವಿಭಾಗದ ಪಂದ್ಯಗಳು ಕಬ್ಬನ್ ಉದ್ಯಾನದಲ್ಲಿರುವ ಲಾನ್ ಟೆನಿಸ್ ಅಸೋಸಿಯೇಷನ್ ಹಾಗೂ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿವೆ. ವಿಜೇತರಿಗೆ ಟ್ರೋಫಿ ನೀಡಿ ಗೌರವಿಸಲಾಗುವುದು ಎಂದು ಹೇಳಿದರು.

ಟೂರ್ನಿಯಲ್ಲಿ ಹೈದರಾಬಾದ್ ಪೊಲೀಸ್ ಕಮಿಷನರ್ ಸಿ.ವಿ.ಆನಂದ್ ಸೇರಿದಂತೆ ಎಡಿಜಿಪಿ ಹಾಗೂ ಐಜಿಪಿ ದರ್ಜೆಯ ಅಧಿಕಾರಿಗಳು ಸಹ ಭಾಗವಹಿಸುತ್ತಿದ್ದಾರೆ. ನ.26ರ ಬೆಳಿಗ್ಗೆ 10 ಗಂಟೆಗೆ ಸಿಐಎಸ್‌ಎಫ್ ವಿಶೇಷ ಡಿಜಿಪಿ ಪ್ರವೀಣ್ ರಂಜನ್ ಟೂರ್ನಿಯನ್ನು ಉದ್ಘಾಟಿಸಲಿದ್ದು, ನ.30ರಂದು ಸಮಾರೋಪ ಸಮಾರಂಭದಲ್ಲಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಭಾಗವಹಿಸುವರು ಎಂದರು.

ಒತ್ತಡ ನಿವಾರಣೆಗೆ ಕ್ರೀಡೆ ಸಹಕಾರಿ. ತರಬೇತಿ ಅವಧಿಯಲ್ಲಿಯೇ ಕ್ರೀಡೆಗೆ ಹೆಚ್ಚು ಪ್ರೊತ್ಸಾಹ ನೀಡಲಾಗುತ್ತದೆ ಎಂದರು.

ಗೋಷ್ಠಿಯಲ್ಲಿ ಸಿಐಎಸ್‌ಎಫ್ ಸೀನಿಯರ್ ಕಮಾಡೆಂಟ್ ಧನಂಜಯ ನಾಯ್ಕ, ಡಿಐಜಿ ಮಂಜುನಾಥ್ ಹಾಜರಿದ್ದರು.

ಸಾರ್ವಜನಿಕ ಪ್ರಕಟಣೆ

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಈ ಕೆಳಗೆ ತಿಳಿಸಿರುವ ಮಾಲೀಕರುಗಳು (ಇನ್ನು ಮುಂದೆ ಮಾಲೀಕರು ಎಂದು ಕರೆಯಲ್ಪಡುವ) ಮತ್ತು ಇವರಿಗೆ ಸೇರಿದ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಮಲ್ಲಸಂದ್ರ ಗ್ರಾಮದಲ್ಲಿರುವ ಷೆಡ್ಯೂಲ್‌ನಲ್ಲಿ ಸವಿವರವಾಗಿ ವಿವರಿಸಿರುವ ಸ್ವತ್ತಿನ ಒಟ್ಟು ವಿಸ್ತೀರ್ಣ 8 ಎಕರೆ 17 ½ ಗುಂಟೆ ಇನ್ನು ಮುಂದೆ ಇದನ್ನು ಷೆಡ್ಯೂಲ್ ಸ್ವತ್ತುಗಳು ಎಂದು ಕರೆಯಲ್ಪಡುವ ಈ ಸ್ವತ್ತುಗಳ ಮಾಲೀಕತ್ವವನ್ನು ನಾವು ತನಿಖೆ ನಡೆಸುತ್ತಿದ್ದೇವೆ.

1. ಶ್ರೀ.ಕೆ.ಎನ್.ಕಾರ್ತಿಕ್, ಬಿನ್ ಲೇಟ್ ಕೆ.ವಿ. ನಾಗ ವಯಸ್ಸು ಸುಮಾರು 34 ವರ್ಷ ಮನೆ ನಂ.15, 11ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು, 560011, ರಲ್ಲಿ ವಾಸವಾಗಿದ್ದು, ಸದರಿಯವರು **ಕ್ರಮ ಸಂಖ್ಯೆ 1 ರ ಜಂಟಿ ಮತ್ತು 3ನೇ** ಷೆಡ್ಯೂಲ್ ಸ್ವತ್ತುಗಳ ಮಾಲೀಕರಾಗಿರತ್ತಾರೆ.
2. ಶ್ರೀಮತಿ. ತಾರಾ ಕೋಂ. ಎ.ಭಾಸ್ಕರ್, ವಯಸ್ಸು ಸುಮಾರು 53 ವರ್ಷ, ಮನೆ ನಂ.1524, 17ನೇ ಮೇನ್, 2ನೇ ಹಂತ, ಜೆ.ಪಿ.ನಗರ, ಬೆಂಗಳೂರು – 560078. ರಲ್ಲಿ ವಾಸವಾಗಿದ್ದು ಸದರಿಯವರು **ಕ್ರಮ ಸಂಖ್ಯೆ 1ರ ಜಂಟಿ ಮತ್ತು 5ನೇ** ಷೆಡ್ಯೂಲ್ ಸ್ವತ್ತುಗಳ ಮಾಲೀಕರಾಗಿರುತ್ತಾರೆ.
3. ಶ್ರೀಮತಿ.ವಿ.ಸುಲೋಚನ ಕೋಂ.ಸಿ.ವೆಂಕಟೇಶಲು, ವಯಸ್ಸು ಸುಮಾರು 61 ವರ್ಷ, ಮನೆ ನಂ.538, 20ನೇ ಮುಖ್ಯ ರಸ್ತೆ, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು 560041 ರಲ್ಲಿ ವಾಸವಾಗಿದ್ದು, ಸದರಿಯವರು **ಕ್ರಮ ಸಂಖ್ಯೆ 1ರ ಜಂಟಿ ಮತ್ತು 4ನೇ** ಷೆಡ್ಯೂಲ್ ಸ್ವತ್ತುಗಳ ಮಾಲೀಕರಾಗಿರುತ್ತಾರೆ.
4. ಶ್ರೀಮತಿ.ಪಿ.ಕೋಲಮ್ಮಾಳ್ ಕೋಂ.ದಿವಂಗತ.ಎ.ಸಿ.ಪಿಳ್ಳೈ, ವಯಸ್ಸು ಸುಮಾರು 84 ವರ್ಷ, ವಾಸ ಮಾರಪ್ಪ ರಸ್ತೆ, ಹಲಸೂರು, ಬೆಂಗಳೂರು 560008 ರಲ್ಲಿ ವಾಸವಾಗಿದ್ದು, ಸದರಿಯವರು **ಕ್ರಮಸಂಖ್ಯೆ 1ನೇ** ಷೆಡ್ಯೂಲ್ ಸ್ವತ್ತಿನ ಜಂಟಿ ಮಾಲೀಕರಾಗಿರುತ್ತಾರೆ.
5. ಶ್ರೀ.ಎನ್.ಕೆ.ವೆಂಕಟರಮಣ ಬಿನ್. ಎನ್.ಕೃಷ್ಣನ್, ವಯಸ್ಸು ಸುಮಾರು 63 ವರ್ಷ, ವಾಸ ನಂ.105, ಸೂರ್ಯ ಅಪ್ಟ್–98,ರುಸ್ತೋಂಬಾಗ್ ಏರ್‌ಪೋರ್ಟ್ ರಸ್ತೆ, ಬೆಂಗಳೂರು 560017. ರಲ್ಲಿ ವಾಸವಾಗಿದ್ದು, ಸದರಿಯವರು **ಕ್ರಮಸಂಖ್ಯೆ 2ನೇ** ಷೆಡ್ಯೂಲ್ ಸ್ವತ್ತಿನ ಮಾಲೀಕರಾಗಿರುತ್ತಾರೆ.

ಈ ಮೇಲ್ಕಂಡಂತೆ ವಿವರಿಸಿದ ಷೆಡ್ಯೂಲ್ ಸ್ವತ್ತುಗಳಿಗೆ ಮಾಲೀಕರು ಮತ್ತು **ಸಪ್ತಗಿರಿ ಆಗ್ರೋಫಾರ್ಮ್** ಪಾಲುದಾರಿಗೆ ಸಂಸ್ಥೆಯ ಪಾಲುದಾರರಾಗಿರುತ್ತಾರೆ, ಹಾಗೂ ಷೆಡ್ಯೂಲ್ ಸ್ವತ್ತುಗಳನ್ನು ಮಾರುವ ನಿಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ಸದರಿ ಮಾಲೀಕರು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ ಮತ್ತು ಸದರಿ ಷೆಡ್ಯೂಲ್ ಸ್ವತ್ತುಗಳು ಎಲ್ಲಾ ಋಣಭಾರ, ಅಡಮಾನ, ಭಾಗಾಂಶ, ಬಾಕಿದಾವೆಗಳು ಮತು/ಅಥವಾ ಇತರೆ ಯಾವುದೇ ಮೂರನೇ ವ್ಯಕ್ತಿಗಳ ಹಕ್ಕು/ಕ್ಲೈಮುಗಳಿಂದ ಮುಕ್ತವಾಗಿದೆ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಯಾವುದೇ ವ್ಯಕ್ತಿಗಳು, ಕಂಪನಿ ಅಥವಾ ಸಂಸ್ಥೆಯು, ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮಾರಾಟ, ಗುತ್ತಿಗೆ, ಪರವಾನಗಿ, ಈಡು, ಅಡಮಾನ, ಪರಬಾರೆ, ಜಪ್ತಿ, ನಿವಾರಣೆ, ಬಾಕಿ ಇರುವ ದಾವೆ, ಕ್ಲೈಮು, ಡಿಮ್ಯಾಂಡ್ ಅಥವಾ ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾವುದೇ ಸ್ವರೂಪದ ಅಥವಾ ಅದರ ಭಾಗದ ಮೇಲೆ ಆಸಕ್ತಿಯನ್ನು ಹೊಂದಿದ್ದರೆ, ಮೂಲ ದಾಖಲೆ ಪತ್ರಗಳ ಬೆಂಬಲದೊಂದಿಗೆ ಸದರಿ ನೋಟೀಸು ಪ್ರಕಟವಾದ 15 (ಹದಿನೈದು) ದಿನಗಳ ಕಾಲಾವಧಿಯೊಳಗೆ ಕೆಳಗೆ ತಿಳಿಸಿರುವ ವಿಳಾಸಕ್ಕೆ ಕಳುಹಿಸಬೇಕಾಗಿ ಈ ಮೂಲಕ ಕರೆ ನೀಡಲಾಗಿದೆ. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳು ನಿಗದಿತ ಸದರಿ ಕಾಲಾವಧಿಯೊಳಗೆ ಬಾರದಿದ್ದರೆ, ಮೇಲೆ ತಿಳಿಸಿರುವ ಮಾಲೀಕರ ಹೊರತಾಗಿ ಬೇರೆ ಯಾರೂ ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾವುದೇ ರೀತಿಯ ಹಕ್ಕು, ಹಕ್ಕು ಬಾಧ್ಯತೆ, ಹಿತಾಸಕ್ತಿ, ಅಥವಾ ಯಾವುದೇ ಆಕ್ಷೇಪಣೆಗಳು ಮತ್ತು/ಅಥವಾ ಕ್ಲೈಮನ್ನು ಹೊಂದಿರುವುದಿಲ್ಲವೆಂದು ಭಾವಿಸಲಾಗುವುದು ಮತ್ತು ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಮ್ಮ ಕಕ್ಷಿದಾರರು ಸದರಿ ಮಾಲೀಕರೊಂದಿಗೆ ಉದ್ದೇಶಿತ ವ್ಯವಹಾರ ನಡೆಸಲು ಸ್ವತಂತ್ರರಾಗಿರುವರೆಂದು ತಿಳಿಯಲಾಗುವುದು. ನಿಗದಿತ ಸದರಿ ಕಾಲಾವಧಿ ಮುಗಿದ ನಂತರ ಬರುವ ಯಾವುದೇ ರೀತಿಯ ಆಕ್ಷೇಪಣೆಗಳು ಮತ್ತು/ಅಥವಾ ಕ್ಲೈಮುಗಳು ನಮ್ಮ ಕಕ್ಷಿದಾರರ ಮೇಲೆ ಬಂಧನೆಯಾಗುವುದಿಲ್ಲ.

ಷೆಡ್ಯೂಲ್ ಸ್ವತ್ತುಗಳು

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ -2 ಹೋಬಳಿ, ಮಲ್ಲಸಂದ್ರ ಗ್ರಾಮದಲ್ಲಿರುವ ಸ್ಥಿರಾಸ್ತಿ ಸ್ವತ್ತುಗಳ ಒಟ್ಟಾರೆ ವಿಸ್ತೀರ್ಣ 8 ಎಕರೆ 17½ ಗುಂಟೆಗಳು ಮತ್ತು ಈ ಕೆಳಕಂಡ ಸರ್ವೆ ನಂಬರುಗಳಲ್ಲಿ ಒಳಗೊಂಡ ಜಮೀನುಗಳು ಸ್ವತ್ತುಗಳ ಚಕ್ಕುಬಂದಿ ಈ ಕೆಳಕಂಡಂತಿರುವುದು.

ಕ್ರಮ ಸಂಖ್ಯೆ	ಸರ್ವೆ ನಂ.	ವಿಸ್ತೀರ್ಣ ಎಕರೆ/ಗುಂಟೆ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1.	18/1A4	2 ಎಕರೆ 1 ½ G	ಸರ್ವೆ ನಂ. 18/1A5, 18/1A6 & ಸರ್ವೆ ನಂ. 18/1A7 ಸ್ವತ್ತುಗಳು	ರಸ್ತೆ	ಸರ್ವೆ ನಂ. 18/1B ಸ್ವತ್ತು ಮತ್ತು 18/1A4 ರ ಉಳಿಕೆ ಸ್ವತ್ತು	ಸರ್ವೆ ನಂ.21 ಮತ್ತು ಸರ್ವೆ ನಂ.18/1A8 ರ ಸ್ವತ್ತು
2.	18/1A5	1 ಎಕರೆ 19 G	ಸರ್ವೆ ನಂ. 18/1A5, ರ ಉಳಿದ ಸ್ವತ್ತು	ಸರ್ವೆ ನಂ. 18/1A4, ರ ಸ್ವತ್ತು.	ಸರ್ವೆ ನಂ.18/1B ಮತ್ತು ಸರ್ವೆ ನಂ. 18/2 ರ ಸ್ವತ್ತು	ಸರ್ವೆ ನಂ. 18/1A6 ರ ಸ್ವತ್ತು
3.	18/1A6	1 ಎಕರೆ 34 G	ಸರ್ವೆ ನಂ. 18/3 ರ ಸ್ವತ್ತು	ಸರ್ವೆ ನಂ. 18/1A4 ರ ಸ್ವತ್ತು	ಸರ್ವೆ ನಂ.18/1A5 ರ ಸ್ವತ್ತು	ಸರ್ವೆ ನಂ.18/1A7 ರ ಸ್ವತ್ತು
4.	18/1A7	1 ಎಕರೆ 18 G	ಸರ್ವೆ ನಂ.18/1A7 ರ ಉಳಿದ ಸ್ವತ್ತು	ಸರ್ವೆ ನಂ.18 /1A4 ರ ಸ್ವತ್ತು	ಸರ್ವೆ ನಂ.18/1A6 ರ ಸ್ವತ್ತು	ಸರ್ವೆ ನಂ.18/1A8 ರ ಸ್ವತ್ತು
5.	18/1A9	1 ಎಕರೆe 25 G	ಸರ್ವೆ ನಂ.18/1A9 ರ ಉಳಿದ ಸ್ವತ್ತು	ಸರ್ವೆ ನಂ.21 ರ ಸ್ವತ್ತು	ಸರ್ವೆ ನಂ.18/1A8 ರ ಸ್ವತ್ತು	ಸರ್ವೆ ನಂ.18/1A10 ರ ಸ್ವತ್ತು

Gerald Manoharan,
Partner,
JSA, Advocates,
Level 3, Prestige Obelisk,
3, Kasturba Road, Bengaluru – 560 001.
Ph. 080-43503600/080-43503610

ಸ್ಥಳ: ಬೆಂಗಳೂರು
ದಿನಾಂಕ : 19/11/2024





ಬಿ-ಸ್ಕೂಲ್ ಸೇರುವ ಮುನ್ನ

ಡಾ. ಗಿರೀಶ ಯರಲಕಟ್ಟಿ ಮಠ

ಒಂದು ಅತ್ಯುತ್ತಮ ಬಿಸಿನೆಸ್ ಸ್ಕೂಲ್‌ನಲ್ಲಿ (ಬಿ-ಸ್ಕೂಲ್) ಪಿಜಿಡಿಎಂ ಅಥವಾ ಎಂಬಿಎ ಪದವಿ ಪಡೆಯುವುದು ಬಹುತೇಕ ವಿದ್ಯಾರ್ಥಿಗಳ ಕನಸು. ಆದರೆ, ಇಂಥ ಸ್ಕೂಲ್‌ಗಳಲ್ಲಿ ಪ್ರವೇಶ ಪಡೆಯುವುದು ಅಷ್ಟು ಸುಲಭದ ಮಾತಲ್ಲ. ಇಂಥ ಸ್ಕೂಲ್‌ಗಳು ವಿಧಿಸುವ ಶುಲ್ಕ ಬೇರೆ ಸಂಸ್ಥೆಗಳಿಗೆ ಹೋಲಿಸಿದರೆ ತುಸು ದುಬಾರಿ. ಜತೆಗೆ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆ ಕಠಿಣವಾಗಿರುತ್ತದೆ.

ಆದರೆ, ಬಿ-ಸ್ಕೂಲ್‌ಗಳು ವಿದ್ಯಾರ್ಥಿಗಳ ನಿರೀಕ್ಷೆಗೂ ಮೀರಿದ ಅವಕಾಶಗಳನ್ನು ನೀಡುತ್ತವೆ. ಕಾರ್ಪೊರೇಟ್ ವೃತ್ತಿ ಬದುಕಿಗೆ ಅಗತ್ಯವಿರುವ ಪಟ್ಟುಗಳನ್ನು ಕಲಿಸುವುದಲ್ಲದೇ ಉತ್ತಮ ನಾಯಕರನ್ನಾಗಿ ರೂಪಿಸುವಲ್ಲಿ ಯಶಸ್ವಿಯಾಗುತ್ತವೆ. ಹಾಗಾಗಿ ಬಿ-ಸ್ಕೂಲ್‌ಗಳನ್ನು ಆಯ್ಕೆ ಮಾಡುವಾಗ ಕೆಳಕಂಡ ಮಾನದಂಡಗಳನ್ನು ಅನುಸರಿಸಿ.

- **ರ‍್ಯಾಂಕಿಂಗ್:** ಉನ್ನತ ಶ್ರೇಣಿಯ ಬಿ-ಸ್ಕೂಲ್‌ಗಳು ವಿಶ್ವ ದರ್ಜೆಯ ಗುಣಮಟ್ಟದ ಬೋಧನೆ ನೀಡುತ್ತವೆ. ಹಾಗಾಗಿ ಅರ್ಹ ಮೂಲಗಳಿಂದ ಬಿ-ಸ್ಕೂಲ್‌ಗಳ ರ‍್ಯಾಂಕಿಂಗ್‌ಗಳನ್ನು ಖಚಿತಪಡಿಸಿಕೊಳ್ಳಿ.
- **ಮಾನ್ಯತೆ:** ಬಿ-ಸ್ಕೂಲ್ ಸರ್ಕಾರದಿಂದ ಮಾನ್ಯತೆ ಪಡೆದಿದೆಯೇ ಪರೀಕ್ಷಿಸಿ. ಮಾನ್ಯತೆ ಪಡೆದ ಬಿ-ಸ್ಕೂಲ್ ವಿದ್ಯಾರ್ಥಿಗಳಿಗೆ ಮಾತ್ರ ಉದ್ಯೋಗ ನೀಡಲು ಸಂಸ್ಥೆಗಳು ಮುಂದಾಗುತ್ತವೆ. ಹಾಗಾಗಿ ಬಿ-ಸ್ಕೂಲ್ ಎಎಸಿಎಸ್‌ಬಿ (AACSB) ಎ.ಎಂ. ಬಿ.ಎ, (AMBA)) ಇಕ್ವಿಸ್ ((EQUIS), ಎನ್‌ಬಿಎ (NBA)ಏಜೆನ್ಸಿಗಳಿಂದ ಮಾನ್ಯತೆ ಪಡೆದಿದೆಯೇ ಎಂದು ಅರಿತುಕೊಳ್ಳಿ.

- **ಗ್ರಂಥಾಲಯ:** ಪುಸ್ತಕ ಹಾಗೂ ದಿನಪತ್ರಿಕೆಗಳು ಸಂವಹನವನ್ನು ಸಶಕ್ತಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಜ್ಞಾನವನ್ನು ಹೆಚ್ಚಿಸುವುದಲ್ಲದೇ, ಅದನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಳ್ಳಲು ಇವುಗಳ ಅವಶ್ಯಕತೆ ಇದೆ. ಹಾಗಾಗಿ ಗ್ರಂಥಾಲಯದಲ್ಲಿ ಹಣಕಾಸು, ಮಾರ್ಕೆಟಿಂಗ್, ಮಾನವ ಸಂಪನ್ಮೂಲ, ಅನಾಲಿಟಿಕ್ಸ್, ಆಪರೇಷನ್ ಸಿಸ್ಟಮ್ಸ್ ಸೇರಿ ಎಂಥ ಪುಸ್ತಕಗಳಿವೆ, ಎಷ್ಟು ನಿಯತಕಾಲಿಕೆಗಳಿವೆ ಎಂಬುದರ ಕಡೆ ಗಮನವಿರಲಿ. ಡಿಜಿಟಲ್ ಪುಸ್ತಕಗಳು ಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳಿ. ನಿತ್ಯ ಪತ್ರಿಕೆಗಳನ್ನು ಓದಿಯೇ ಪರೀಕ್ಷೆಗೆ ತಯಾರು ಮಾಡುವ ಕೋರ್ಸ್‌ಅನ್ನು ಪಠ್ಯಕ್ರಮದ ಭಾಗವಾಗಿ ಇರಿಸಿದೆಯೇ ಎಂದು ಪರಿಶೀಲಿಸಿ.
- **ಭಾಷಾ ಪ್ರಯೋಗಾಲಯ:** ಕೋರ್ಸ್‌ನ ಅವಧಿಯಲ್ಲಿ ನಂತರ ಉತ್ತಮ ಉದ್ಯೋಗ ಪಡೆಯಲು ಸಂವಹನ ಕಲೆ ಮಹತ್ತರ ಪಾತ್ರ ವಹಿಸುತ್ತದೆ. ವಿದ್ಯಾರ್ಥಿಗಳ ಸಂವಹನ ಕಲೆಯನ್ನು ನಿರಂತರವಾಗಿ ತೀಡುವಲ್ಲಿ ನುರಿತ ಭಾಷಾತಜ್ಞರಿರುವ ಪ್ರತ್ಯೇಕ ಭಾಷಾ ಪ್ರಯೋಗಾಲಯವನ್ನು ಬಿ-ಸ್ಕೂಲ್ ರೂಪಿಸಿದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಿ.

- **ಪಠ್ಯಕ್ರಮ:** ವಿಸ್ತರಣೆಯಾಗುತ್ತಿರುವ ಉದ್ಯಮಗಳ ಬೇಡಿಕೆಗಳನ್ನು ಪೂರೈಸುವಷ್ಟು ಬಿ-ಸ್ಕೂಲ್‌ನ ಪಠ್ಯ ಕ್ರಮಬದ್ಧವಾಗಿದೆಯೇ? ಎಂದು ಪರೀಕ್ಷಿಸಿಕೊಳ್ಳಿ. ಕೌಶಲ ಹಾಗೂ ಕ್ರಿಯಾತ್ಮಕವಾಗಿರುವುದನ್ನು ಕಲಿಸುವ ಜತೆಗೆ ಹೊಸ ತಂತ್ರಜ್ಞಾನಗಳ ಬಳಕೆ ಸಾಧ್ಯತೆಯನ್ನು ಹೇಳುವ ಪಠ್ಯಕ್ರಮವಿದ್ದರೆ ಒಳ್ಳೆಯದು.
- **ನಿರಂತರ ಸಂಪರ್ಕ:** ಅತ್ಯುತ್ತಮ ಬಿ-ಸ್ಕೂಲ್‌ಗಳು ವಿದ್ಯಾರ್ಥಿಗಳು ಉದ್ಯಮಗಳ ಜತೆ ನಿರಂತರ ಸಂಪರ್ಕದಲ್ಲಿರುವಂತೆ ಪ್ರೇರೇಪಿಸುತ್ತವೆ. ಇದಕ್ಕೆ ಪೂರಕವಾದ ವಾತಾವರಣವನ್ನು ಸೃಷ್ಟಿಸುತ್ತವೆ. ಇದರಿಂದ ಉದ್ಯಮಗಳ ಬಗ್ಗೆ ಅಳವಾದ ಪ್ರಾಯೋಗಿಕ ಜ್ಞಾನ ಬೆಳೆಯುತ್ತದೆ. ಕೈಗಾರಿಕೆಗಳು ಹೇಗೆ ವ್ಯವಹಾರ ನಡೆಸುತ್ತವೆ? ಎಂಥ ಸವಾಲುಗಳನ್ನು ಎದುರಿಸುತ್ತಿವೆ? ಎಂಬುದರ ಕುರಿತ ವಿಚಾರಸಂಕಿರಣಗಳನ್ನು ಬಿ-ಸ್ಕೂಲ್‌ಗಳು ಆಯೋಜಿಸುತ್ತಿವೆಯೇ? ಎಂಬುದನ್ನು ಖಾತ್ರಿಪಡಿಸಿಕೊಳ್ಳಿ.
- **ಬೋಧಕ ವರ್ಗ:** ಎಷ್ಟು ಮಂದಿ ಬೋಧಕರಿದ್ದಾರೆ. ಅದರಲ್ಲಿಯೂ ಕಾಯಂ ಬೋಧಕರೆಷ್ಟು? ಬೋಧಕರೆಲ್ಲ ನಿರಂತರ ಸಂಶೋಧನೆಯಲ್ಲಿ ತೊಡಗಿಕೊಂಡಿದ್ದಾರ ಎಂಬುದನ್ನು ಅರಿತುಕೊಳ್ಳಿ. ಬೋಧಕರ ಸಮಗ್ರ ಮಾಹಿತಿಯನ್ನು ಬಿ-ಸ್ಕೂಲ್ ವೆಬ್‌ಸೈಟ್‌ಗೆ ಭೇಟಿ ಕೊಟ್ಟು ಸಂಗ್ರಹಿಸಿ. ಪ್ರಾಯೋಗಿಕ ಆಧಾರಿತ ಕೇಸ್‌ಸ್ಟಡಿಗಳ ಮೂಲಕ ಬೋಧನಾ ಅಭ್ಯಾಸಗಳು ಚಾಲ್ತಿಯಲ್ಲಿವೆಯೇ ಎಂಬುದನ್ನು ಅರ್ಥಮಾಡಿಕೊಳ್ಳಿ.
- **ನೇಮಕಾತಿ:** ಕೋರ್ಸ್ ಪೂರ್ಣಗೊಳಿಸಿದ ನಂತರ ಉದ್ಯೋಗ ದೊರಕುವ ಖಾತ್ರಿಯಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ. ಬಿ-ಸ್ಕೂಲ್‌ಗಳಿಗೆ ಯಾವ ಕಂಪನಿಗಳು ನೇಮಕಾತಿಗಾಗಿ ಭೇಟಿ ನೀಡಿದ್ದವು, ಈ ಮುಂಚೆ ಎಷ್ಟು ವಿದ್ಯಾರ್ಥಿಗಳು ನೇಮಕವಾಗಿದ್ದರು, ಎಂಥ ಹುದ್ದೆಗಳಿಗೆ ಆಯ್ಕೆಯಾಗಿದ್ದಾರೆ. ಕಂಪನಿಗಳು ನೀಡುವ ವೇತನ, ಇತರೆ ಸೌಲಭ್ಯಗಳ ಬಗ್ಗೆ ಸ್ಪಷ್ಟ ಮಾಹಿತಿ ಇರಲಿ. ವಿದ್ಯಾರ್ಥಿಗಳ ನಿಯೋಜನೆಗೆ ಪೂರ್ಣಾವಧಿಯ 'ಪ್ಲೇಸ್‌ಮೆಂಟ್' ಅಧಿಕಾರಿ ಇದ್ದಾರೆಯೇ ಎಂಬುದನ್ನು ತಿಳಿದುಕೊಳ್ಳಿ.
- **ಗೊಂದಲಬೇಡ:** ದೊಡ್ಡ ನಗರಗಳಲ್ಲಿರುವ ಸಂಸ್ಥೆಗಳು ಮಾತ್ರ ಗುಣಮಟ್ಟದ ಶಿಕ್ಷಣ ಹಾಗೂ ಉದ್ಯೋಗಾವಕಾಶ ನೀಡುತ್ತದೆ ಎಂದು ತಿಳಿಯಬೇಡಿ. ಕೆಲವು ಅತ್ಯುತ್ತಮ ಬಿ-ಸ್ಕೂಲ್‌ಗಳು ತಾಲ್ಲೂಕು ಪ್ರದೇಶಗಳಲ್ಲಿಯೂ ಇವೆ. ❖

ವಿದ್ಯಾರ್ಥಿ ವೇತನ ಕೈಪಿಡಿ

ಶ್ರೀ ತುಳಸಿ ತಂತಿ ಸ್ಕಾಲರ್‌ಷಿಪ್

ಆರ್ಥಿಕವಾಗಿ ದುರ್ಬಲರಾಗಿರುವ ಪ್ರತಿಭಾವಂತ ವಿದ್ಯಾರ್ಥಿನಿಯರನ್ನು ಪ್ರೋತ್ಸಾಹಿಸಲು ಸುಜ್ಲಾನ್ ಗ್ರೂಪ್ ನೀಡುವ ನೆರವು ಇದಾಗಿದೆ.

ಅರ್ಹತೆ: 9ನೇ ತರಗತಿಯಲ್ಲಿ ಓದುತ್ತಿರುವ ಅಥವಾ ಬಿಇ/ಬಿ.ಟೆಕ್ ಪದವಿ ಅಥವಾ ಡಿಪ್ಲೊಮಾ ಇನ್ ಎಂಜಿನಿಯರಿಂಗ್‌ನ ಮೊದಲ ವರ್ಷಕ್ಕೆ ದಾಖಲಾಗಿರುವ ವಿದ್ಯಾರ್ಥಿನಿಯರಿಗೆ ಲಭ್ಯವಿರುತ್ತದೆ. ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದಲೂ ₹ 6 ಲಕ್ಷಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು. ಬಿಇ/ಬಿ.ಟೆಕ್ ಪದವಿ ಅಥವಾ ಡಿಪ್ಲೊಮಾ ಕೋರ್ಸ್‌ಗಳನ್ನು ಮಾಡುತ್ತಿರುವ ವಿದ್ಯಾರ್ಥಿನಿಯರು 10ನೇ ತರಗತಿ ಮತ್ತು 12ನೇ ತರಗತಿಗಳಲ್ಲಿ ಕನಿಷ್ಠ ಶೇ 50 ಅಂಕಗಳನ್ನು ಗಳಿಸಿರಬೇಕು.

ಆರ್ಥಿಕ ನೆರವು: 9ನೇ ತರಗತಿಯ ವಿದ್ಯಾರ್ಥಿನಿಯರಿಗೆ- ವಾರ್ಷಿಕ ₹ 6,000 (ಗಮನಿಸಿ: 9 ಮತ್ತು 10ನೇ ತರಗತಿಗಳೆರಡಕ್ಕೂ ವಿದ್ಯಾರ್ಥಿವೇತನ ನೀಡಲಾಗುತ್ತದೆ). ಡಿಪ್ಲೊಮಾ ಮತ್ತು ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ- ವಾರ್ಷಿಕ ₹. 60,000. ಬಿಇ/ಬಿ.ಟೆಕ್ ಪದವಿ ವಿದ್ಯಾರ್ಥಿಗಳಿಗೆ- ವಾರ್ಷಿಕ ₹ 1,20,000

ಅರ್ಜಿ ಸಲ್ಲಿಸಲು ಕೊನೆ ದಿನ: 10-12-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/SZSP1

ಡಿಎಕ್ಸ್‌ಸಿ ಪ್ರೋಗ್ರೆಸಿಂಗ್ ಮೈಂಡ್ಸ್

ಡಿಎಕ್ಸ್‌ಸಿ ಟೆಕ್ನಾಲಜಿಯ ಉಪಕ್ರಮವಾಗಿದ್ದು, ಶೈಕ್ಷಣಿಕ ಹಾಗೂ ಕ್ರೀಡಾ ವೆಚ್ಚಗಳಿಗೆ ಸಹಾಯ ಮಾಡುತ್ತದೆ.

ಅರ್ಹತೆ: ಸ್ಟೆಮ್-ಸಂಬಂಧಿತ ಕ್ಷೇತ್ರಗಳಲ್ಲಿ ಯಾವುದೇ ವರ್ಷದ ಪದವಿ ಅಭ್ಯಾಸ ಮಾಡುತ್ತಿರುವ ಮಹಿಳೆಯರು ಮತ್ತು ಲಿಂಗ ಪರಿವರ್ತಿತ ವಿದ್ಯಾರ್ಥಿಗಳು ಅರ್ಹರು. 13ರಿಂದ 25 ವರ್ಷ ವಯಸ್ಸಿನೊಳಗಿನ ರಾಜ್ಯ/ ರಾಷ್ಟ್ರೀಯ / ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯ / ದೇಶವನ್ನು ಪ್ರತಿನಿಧಿಸಿರುವ ಮಹಿಳಾ ಕ್ರೀಡಾ ಪಟುಗಳು ಕೂಡ ಅರ್ಜಿ ಸಲ್ಲಿಸಬಹುದು. ಪದವಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ತಮ್ಮ ಹಿಂದಿನ ತರಗತಿ/ಸೆಮಿಸ್ಟರ್‌ನಲ್ಲಿ ಕನಿಷ್ಠ ಶೇ 60 ಅಂಕಗಳನ್ನು ಪಡೆದಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹4,00,000ಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು (ಕ್ರೀಡಾಪಟುಗಳಿಗೆ ₹5,00,000)

ಆರ್ಥಿಕ ಸಹಾಯ: ಸ್ಟೆಮ್‌ನಲ್ಲಿ ಪದವಿಗೆ - ₹50,000 **ಕ್ರೀಡಾಪಟುಗಳಿಗೆ** - ₹1,25,000

ಅರ್ಜಿ ಸಲ್ಲಿಸಲು ಕೊನೆ ದಿನ: 30-11-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/DXCS4

ಎಚ್‌ಡಿಎಫ್‌ಸಿ ಬ್ಯಾಂಕ್ ಪರಿವರ್ತನ್ಸ್

ಹಿಂದುಳಿದ ವರ್ಗಗಳಿಗೆ ಸೇರಿದ ಪ್ರತಿಭಾವಂತ ಮತ್ತು ಅಗತ್ಯವಿರುವ ವಿದ್ಯಾರ್ಥಿಗಳಿಗೆ ನೆರವು ನೀಡುತ್ತದೆ.

ಅರ್ಹತೆ: ವಿದ್ಯಾರ್ಥಿವೇತನವು ಭಾರತೀಯ ಪ್ರಜೆಗಳಿಗೆ ಮುಕ್ತವಾಗಿದೆ. ವಿದ್ಯಾರ್ಥಿಗಳು 1 ರಿಂದ 12ನೇ ತರಗತಿಯಲ್ಲಿ ಓದುತ್ತಿರಬೇಕು ಅಥವಾ ಡಿಪ್ಲೊಮಾ, ಐಟಿಐ, ಪಾಲಿಟೆಕ್ನಿಕ್, ಪದವಿ ಅಥವಾ ಸ್ನಾತಕೋತ್ತರ (ಸಾಮಾನ್ಯ ಮತ್ತು ವೃತ್ತಿಪರ ಸೇರಿದಂತೆ) ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರಬೇಕು. ಅರ್ಜಿದಾರರು ತಮ್ಮ ಹಿಂದಿನ ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಠ ಶೇ 55 ಅಂಕ ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯವು ₹ 2.5 ಲಕ್ಷಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು.

ಆರ್ಥಿಕ ಸಹಾಯ: ₹ 75,000ದ ವರೆಗೆ

ಅರ್ಜಿ ಸಲ್ಲಿಸಲು ಕೊನೆ ದಿನ: 31-12-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಮಾಹಿತಿಗೆ: Short Url: www.b4s.in/pjvi/HDFC54

ಟಿಎಸ್‌ಡಿಪಿಎಲ್ ಸಿಲ್ವರ್ ಜುಬಿಲಿ ಸ್ಕಾಲರ್‌ಷಿಪ್

ಟಾಟಾ ಸ್ಟೀಲ್ ಡೌನ್‌ಸ್ಟ್ರೀಮ್ ಪ್ರಾಡಕ್ಟ್ಸ್ ಲಿಮಿಟೆಡ್ ನೀಡುವ ವಿದ್ಯಾರ್ಥಿವೇತನ ಇದಾಗಿದೆ.

ಅರ್ಹತೆ: ಸರ್ಕಾರಿ-ಮಾನ್ಯತೆ ಪಡೆದ ಸಂಸ್ಥೆಗಳಿಂದ ಫಿಟ್ಟರ್, ಎಲೆಕ್ಟ್ರಿಕಲ್, ವೆಲ್ಡರ್ಸ್, ಸೇಫ್ಟಿ ಇತ್ಯಾದಿ ಕ್ಷೇತ್ರಗಳಲ್ಲಿ ಐಟಿಐ/ ಡಿಪ್ಲೊಮಾವನ್ನು ಅಭ್ಯಾಸ ಮಾಡುತ್ತಿರಬೇಕು. ಅಭ್ಯರ್ಥಿಗಳು ತಮ್ಮ 10ನೇ ತರಗತಿಯ ಪರೀಕ್ಷೆಯಲ್ಲಿ ಕನಿಷ್ಠ ಶೇ 50 ಅಂಕಗಳನ್ನು ಗಳಿಸಿರಬೇಕು. ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದಲೂ ₹ 5,00,000ಕ್ಕಿಂತ ಹೆಚ್ಚಿರಬಾರದು.

ಆರ್ಥಿಕ ಸಹಾಯ: 1 ವರ್ಷಕ್ಕೆ ₹ 50,000


ಅರ್ಜಿ ಸಲ್ಲಿಸಲು ಕೊನೆ ದಿನ: 03-12-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಮಾಹಿತಿಗೆ: Short Url: www.b4s.in/pjvi/TSDPL4

ಸಿಎ ಮಾಡುವುದು ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ನಾನು ಬಿ.ಕಾಂ ಮಾಡುತ್ತಿದ್ದು, ಮುಂದೆ ಸಿಎ ಮಾಡಬೇಕೆಂದುಕೊಂಡಿದ್ದೇನೆ. ಮಾರ್ಗದರ್ಶನ ನೀಡಿ.

ಹೆಸರು, ಊರು ತಿಳಿಸಿಲ್ಲ.

ಸಿಎ ಮಾಡಲು ಎರಡು ಆಯ್ಕೆಗಳಿರುತ್ತವೆ. ಪಿಯು ಕೋರ್ಸ್‌ನಲ್ಲಿ ಶೇ 50 ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಸಿಎ ಫೌಂಡೇಷನ್ ಕೋರ್ಸ್ ಮಾಡಿದರೆ, ನಂತರ ಇಂಟರ್‌ಮೀಡಿಯಟ್ ಕೋರ್ಸಿಗೆ ಅರ್ಹತೆ ಸಿಗುತ್ತದೆ. ಬಿಕಾಂ ಪದವೀಧರರು ಫೌಂಡೇಷನ್ ಕೋರ್ಸ್ ಮಾಡುವ ಅಗತ್ಯವಿಲ್ಲ. ಬಿಕಾಂ ಪದವಿಯಲ್ಲಿ ಕನಿಷ್ಠ ಶೇ 55 ಅಂಕಗಳನ್ನು ಗಳಿಸಿ ನೇರವಾಗಿ ಸಿಎ ಇಂಟರ್‌ಮೀಡಿಯಟ್ ಕೋರ್ಸ್ ಮಾಡಬಹುದು. ಹಾಗಾಗಿ, ಈಗಲೇ ಫೌಂಡೇಷನ್ ಕೋರ್ಸ್ ಮಾಡುವುದು ಅಥವಾ ಬಿಕಾಂ ನಂತರ ನೇರವಾಗಿ ಇಂಟರ್‌ಮೀಡಿಯಟ್ ಕೋರ್ಸ್ ಮಾಡುವುದು, ನಿಮ್ಮ ಆಯ್ಕೆ. 3 ವರ್ಷದ ಆರ್ಟಿಕಲ್ಡ್ ತರಬೇತಿ ಪಡೆಯಲು, ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಗಳನ್ನು ಸೇರಬೇಕು. ಇಂಟರ್‌ಮೀಡಿಯೆಟ್ ನಂತರ ಫೈನಲ್‌ಗೆ ನೋಂದಾಯಿಸಿ, ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಫೈನಲ್ ಪರೀಕ್ಷೆಗೆ ಮುಂಚೆ ನಾಲ್ಕು ವಾರಗಳ ಐಟಿ ಮತ್ತು ಸಾಫ್ಟ್ ಸ್ಕಿಲ್ ಕೋರ್ಸ್ ಮಾಡಿರಬೇಕು. ಪರಿಶ್ರಮ, ಬದ್ಧತೆ, ಆತ್ಮವಿಶ್ವಾಸ ಮತ್ತು ಸಮಯದ ನಿರ್ವಹಣೆಯಿಂದ ಸಿಎ ಕೋರ್ಸ್ ಮಾಡಬಹುದು; ಕೋಚಿಂಗ್ ಕಡ್ಡಾಯವಲ್ಲ. ಮೇಲಾಗಿ, ಚಾರ್ಟರ್ಡ್ ಅಕೌಂಟೆಂಟ್ ಇನ್‌ಸ್ಟಿಟ್ಯೂಟ್ ವತಿಯಿಂದ ನೀಡುವ ಕೋಚಿಂಗ್ ಮತ್ತು ಮಾರ್ಗದರ್ಶನದ ಸೌಲಭ್ಯವನ್ನು ನೀವು ಉಪಯೋಗಿಸಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=fuTaa5UjZCo

2. ಬಿ.ಟೆಕ್ ಮಾಡಿದೆ. ಕ್ಯಾಂಪಸ್ ನೇಮಕಾತಿಯಾಗಲಿಲ್ಲ. ಈಗಲೂ ಸರಿಯಾದ ಕೆಲಸ ಸಿಕ್ಕಿಲ್ಲ.

ಹೆಸರು, ಊರು ತಿಳಿಸಿಲ್ಲ.

ಬಿಟೆಕ್ ಮಾಡಿದ ನಂತರವೂ ಉತ್ತಮ ಉದ್ಯೋಗ ಸಿಗದಿರಲು ಕಾರಣಗಳೇನು ಎಂದು ಸ್ವಯಂ-ಮೌಲ್ಯಮಾಪನ ಮಾಡಬೇಕು. ಸಾಮಾನ್ಯವಾಗಿ, ಉದ್ಯೋಗದಲ್ಲಿ ಯಶಸ್ವಿಯಾಗಲು ಎಂಜಿನಿಯರಿಂಗ್ ಜ್ಞಾನದ ಜೊತೆಗೆ ಪ್ರಾಥಮಿಕ ಮತ್ತು ವೃತ್ತಿ ಸಂಬಂಧಿತ ಕೌಶಲಗಳ ಅಗತ್ಯವಿರುತ್ತದೆ. ಉದ್ಯೋಗದ ಸಂದರ್ಶನಗಳಲ್ಲಿ, ಇವುಗಳು ಅಭ್ಯರ್ಥಿಗಳಲ್ಲಿವೆಯೇ ಎಂದು ಪರೀಕ್ಷಿಸಲಾಗುತ್ತದೆ. ಉದಾಹರಣೆಗೆ, ಪ್ರಾಥಮಿಕ ಕೌಶಲಗಳಾದ ಸಮಯದ ನಿರ್ವಹಣೆ, ಸಂವಹನ ಕೌಶಲ, ಅಂತರ್-ವೈಯಕ್ತಿಕ ಕೌಶಲ ಮತ್ತು ನಾಯಕತ್ವದ ಕೌಶಲಗಳು ಯಾವುದೇ ವೃತ್ತಿಯಲ್ಲಿ ಮುಖ್ಯವಾಗುತ್ತದೆ. ಹಾಗೂ, ವೃತ್ತಿ ಸಂಬಂಧಿತ ಕೌಶಲಗಳಾದ ಯೋಜನೆಯ ನಿರ್ವಹಣೆ, ತಾಂತ್ರಿಕ ಕೌಶಲ, ವಿಶ್ಲೇಷಾತ್ಮಕ ಕೌಶಲ, ಇತ್ಯಾದಿ ಕೌಶಲಗಳೂ ಎಂಜಿನಿಯರಿಂಗ್ ಉದ್ಯೋಗದ ಆಕಾಂಕ್ಷಿಗಳಲ್ಲಿರಬೇಕು. ನಿಮ್ಮ ಶಕ್ತಿ, ಸಾಮರ್ಥ್ಯ, ಕುಂದು ಕೊರತೆಗಳನ್ನರಿತು, ಪ್ರಾಮಾಣಿಕ ಪ್ರಯತ್ನಗಳಿಂದ ಈ ಕೌಶಲಗಳನ್ನು ವ್ಯಕ್ತಿತ್ವದಲ್ಲಿ ಮೈಗೂಡಿಸಿಕೊಳ್ಳಬೇಕು. ವ್ಯಕ್ತಿತ್ವ ಮತ್ತು ವೃತ್ತಿಗೆ ಸಂಬಂಧಿಸಿದ ಕೌಶಲಗಳನ್ನು ಕಲಿಯಲು ಇಂದು ವಿಭಿನ್ನವಾದ ಮತ್ತು ವಿಸ್ತಾರವಾದ ಅವಕಾಶಗಳಿವೆ. ಅಚ್ಚುಕಟ್ಟಾದ ಬಯೋಡೇಟ ಬರೆಯುವುದರ ಬಗ್ಗೆ ಮತ್ತು ಸಂದರ್ಶನಗಳನ್ನು ಆತ್ಮವಿಶ್ವಾಸದಿಂದ ಎದುರಿಸುವ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=faQz_iLCWEk

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಸಮಾಜವಿಜ್ಞಾನ: ಇತಿಹಾಸ

ಅಧ್ಯಾಯ-3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

ಬಹು ಆಯ್ಕೆ ಪ್ರಶ್ನೆಗಳು

18) ಬ್ರಿಟಿಷ್ ಸರಕಾರವು 1881ರಲ್ಲಿ ಮೈಸೂರಿನ ಸಿಂಹಾಸನವನ್ನು ಹತ್ತನೆಯ ಚಾಮರಾಜೇಂದ್ರ ಒಡೆಯರಿಗೆ ವಹಿಸಿತು. ಕಮೀಷನರ್ ಆಡಳಿತ ಕೊನೆಗೊಂಡು ....ಎಂಬ ಬ್ರಿಟಿಷ್ ಪ್ರತಿನಿಧಿಯನ್ನು ನೇಮಿಸಲಾಯಿತು.
ಎ) ದಿವಾನ್ ಬಿ) ಗವರ್ನರ್ ಜನರಲ್
ಸಿ) ವೈಸರಾಯ್ ಡಿ) ರೆಸಿಡೆಂಟ್
ಉತ್ತರ:- ಡಿ

19) ಹತ್ತನೆಯ ಚಾಮರಾಜೇಂದ್ರ ಒಡೆಯರಿಗೆ ಬ್ರಿಟಿಷ್ ಸರಕಾರವು 1881ರಲ್ಲಿ ಮೈಸೂರಿನ ಸಿಂಹಾಸನವನ್ನು ಬಿಟ್ಟುಕೊಟ್ಟಾಗ ದಿವಾನರಾಗಿ ನೇಮಕವಾದವರು ಯಾರು?
ಎ) ಸರ್ ಎಂ. ವಿಶ್ವೇಶ್ವರಯ್ಯ
ಬಿ) ಸಿ. ರಂಗಾಚಾರ್ಲು ಸಿ) ಕೆ. ಶೇಷಾದ್ರಿ ಅಯ್ಯರ್
ಡಿ) ಮೇಲಿನ ಯಾರೂ ಅಲ್ಲ.
ಉತ್ತರ:- ಬಿ

20) ಮೈಸೂರು ಪ್ರಜಾಪ್ರತಿನಿಧಿ ಸಭೆಯನ್ನು ಪ್ರಾರಂಭಿಸಿದರು ಯಾರು?
ಎ) ಸಿ. ರಂಗಾಚಾರ್ಲು ಬಿ) ಕೆ. ಶೇಷಾದ್ರಿ ಅಯ್ಯರ್
ಸಿ) ಕಾಂತರಾಜೆ ಅರಸ ಡಿ) ಮಾಧವರಾವ್
ಉತ್ತರ:- ಎ

21) 1881ರಲ್ಲಿ ಕೋಲಾರದ ಚಿನ್ನದಗಣಿ ಆರಂಭಿಸಿದವರು ಯಾರು?
ಎ) ಕಾಂತರಾಜೆ ಅರಸ ಬಿ) ಮಾಧವರಾವ್
ಸಿ) ಸಿ. ರಂಗಾಚಾರ್ಲು ಡಿ) ಕೆ. ಶೇಷಾದ್ರಿ ಅಯ್ಯರ್
ಉತ್ತರ:- ಸಿ

22) ಯಾರು 1882ರಲ್ಲಿ ಬೆಂಗಳೂರು-ಮೈಸೂರು ರೈಲು ಮಾರ್ಗವನ್ನು ಆರಂಭಿಸಿದರು?
ಎ) ಮಾಧವರಾವ್ ಬಿ) ಸಿ. ರಂಗಾಚಾರ್ಲು
ಸಿ) ಸರ್ ಎಂ. ವಿಶ್ವೇಶ್ವರಯ್ಯ ಡಿ) ಕಾಂತರಾಜೆ ಅರಸ
ಉತ್ತರ:- ಬಿ

23) 1883ರಲ್ಲಿ ರಂಗಾಚಾರ್ಲು ಕಾಲವಾದ ನಂತರ ದಿವಾನರಾದರು ಯಾರು?
ಎ) ಕೆ. ಶೇಷಾದ್ರಿ ಅಯ್ಯರ್ ಬಿ) ಸರ್ ಎಂ. ವಿಶ್ವೇಶ್ವರಯ್ಯ
ಸಿ) ಕಾಂತರಾಜೆ ಅರಸ ಡಿ) ಮೇಲಿನ ಯಾರೂ ಅಲ್ಲ
ಉತ್ತರ:- ಎ

24) ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಆರಂಭಿಸಿದರು ಯಾರು?
ಎ) ಕೆ. ಶೇಷಾದ್ರಿ ಅಯ್ಯರ್ ಬಿ) ಎನ್ ಮಾಧವ ರಾವ್
ಸಿ) ಕಾಂತರಾಜೆ ಅರಸ ಡಿ) ಸರ್ ಎಂ. ವಿಶ್ವೇಶ್ವರಯ್ಯ
ಉತ್ತರ:- ಎ

25) ....ರವರು ಮೈಸೂರಿಗೆ ಬಂದಿದ್ದ ಸ್ವಾಮಿ ವಿವೇಕಾನಂದರಿಗೆ ಆಶ್ರಯ ನೀಡಿ ಅವರು ಚಿಕಾಗೋ ಸರ್ವಧರ್ಮ ಸಮ್ಮೇಳನಕ್ಕೆ ಹೋಗಲು ಸಹಾಯ ಮಾಡಿದರು.
ಎ) ಚಾಮರಾಜೇಂದ್ರ ಒಡೆಯರ್
ಬಿ) ರಾಜ ಒಡೆಯರ್ ಸಿ) ಕೃಷ್ಣರಾಜ ಒಡೆಯರ್
ಡಿ) ಮೇಲಿನ ಯಾರೂ ಅಲ್ಲ
ಉತ್ತರ:- ಎ

26) ಮೈಸೂರಿನಲ್ಲಿ ಮಹಾರಾಣಿ ಬಾಲಿಕಾ ಪ್ರೌಢಶಾಲೆಯನ್ನು ಸ್ಥಾಪಿಸಿದರು ಯಾರು?
ಎ) ಕಾಂತರಾಜೆ ಅರಸ ಬಿ) ಸರ್ ಎಂ. ವಿಶ್ವೇಶ್ವರಯ್ಯ
ಸಿ) ಕೆ. ಶೇಷಾದ್ರಿ ಅಯ್ಯರ್ ಡಿ) ಎನ್ ಮಾಧವ ರಾವ್
ಉತ್ತರ:- ಸಿ

27) ಅನೇಕ ಕೃತಿಗಳನ್ನು ರಚಿಸಿ "ಅಭಿನವ ಕಾಳಿದಾಸ" ಎನಿಸಿಕೊಂಡರು ಯಾರು?
ಎ) ಬಸಪ್ಪಶಾಸ್ತ್ರಿ ಬಿ) ಸಂಚಿಹೊನ್ನಮ್ಮ
ಸಿ) ಕುಮಾರವ್ಯಾಸ ಡಿ) ಲಿಂಗಪ್ಪ
ಉತ್ತರ:- ಎ

28) ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿಯೂ ಶಿಕ್ಷಣ ಶುಲ್ಕವನ್ನು ರದ್ದು ಮಾಡಲಾಯಿತು. ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಏಳಿಗೆಗೆ ನೆರವು ಸಿಕ್ಕಿತು. ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿಸಲಾಯಿತು.. ವಿದೇಶ ವಿದ್ಯಾಭ್ಯಾಸಕ್ಕೆ ಹೋಗುವವರಿಗೆ ವಿದ್ಯಾರ್ಥಿ ವೇತನ ನೀಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು 1905ರಲ್ಲಿ ಟಾಟಾರವರ ಬೆಂಬಲದಿಂದ ಸ್ಥಾಪಿಸಲಾಯಿತು.
ಮೇಲಿನ ಟಿಪ್ಪಣಿ ಯಾರಿಗೆ ಸರಿ ಹೊಂದುತ್ತದೆ?
ಎ) ನಾಲ್ವಡಿ ಕೃಷ್ಣರಾಜ ಒಡೆಯರು
ಬಿ) ಜಯಚಾಮರಾಜ ಒಡೆಯರ್
ಸಿ) ರಾಜ ಒಡೆಯರ್ ಡಿ) ಮೇಲಿನ ಯಾರೂ ಅಲ್ಲ
ಉತ್ತರ:- ಎ

30. ಪ್ರಸಿದ್ಧ ವಿದ್ವಾಂಸರುಗಳಾದ ಶ್ಯಾಮಾಶಾಸ್ತ್ರಿ, ಎಂ. ಹಿರಿಯಣ್ಣ, ವೀಣೆ ಶೇಷಣ್ಣ, ಸಾಂಬಯ್ಯ, ಬಿಡಾರಂ ಕೃಷ್ಣಪ್ಪ, ಮುತ್ತಯ್ಯ ಭಾಗವತರ್, ವಾಸುದೇವಾಚಾರ್ಯ, ಟಿ. ಚೌಡಯ್ಯ, ಮುಂತಾದವರು....................ಅವರ ಪ್ರೋತ್ಸಾಹ ಪಡೆದರು.
ಎ) ಜಯಚಾಮರಾಜ ಒಡೆಯರ್
ಬಿ) ನಾಲ್ವಡಿ ಕೃಷ್ಣರಾಜ ಒಡೆಯ
ಸಿ) ಯದುರಾಜ ಒಡೆಯರು ಡಿ) ಮೇಲಿನ ಯಾರೂ ಅಲ್ಲ
ಉತ್ತರ:- ಬಿ

31) ನಾಲ್ವಡಿ ಕೃಷ್ಣರಾಜ ಒಡೆಯರ ಅವರ ಆಡಳಿತದಿಂದಾಗಿ ಮೈಸೂರು 'ಮಾದರಿ ರಾಜ್ಯ' ಎಂಬ ಹೆಸರನ್ನು ಪಡೆಯಿತು ಹೀಗಾಗಿ ಇವರನ್ನು 'ರಾಜರ್ಷಿ' ಎಂದು ಕರೆಯಲಾಗಿತ್ತು, ಹೀಗೆ ಕರೆದರು ಯಾರು?
ಎ) ಸ್ವಾಮಿ ವಿವೇಕಾನಂದ ಬಿ) ರಾಮಕೃಷ್ಣ ಪರಮ ಹಂಸ
ಸಿ) ದಯಾನಂದ ಸರಸ್ವತಿ ಡಿ) ಮಹಾತ್ಮ ಗಾಂಧಿ
ಉತ್ತರ:- ಡಿ

32) ಕೆಳಗಿನ ಟಿಪ್ಪಣಿ ಗಮನಿಸಿ
ಟಿಪ್ಪುವಿನ ಸೈನ್ಯದಲ್ಲಿದ್ದ ಅತೃಪ್ತ ಸೈನಿಕರು, ಅಧಿಕಾರದಿಂದ ಮುಕ್ತಗೊಳಿಸಲ್ಪಟ್ಟ ಪಾಳೇಯಗಾರರು ಮೊದಲಾದವರನ್ನು ಸಂಘಟಿಸಿ ಒಂದು ಸೈನ್ಯವನ್ನು ಸುಸಜ್ಜಿತಗೊಳಿಸಿ ಬಂಡಾಯದ ಬಾವುಟವನ್ನು ಹಾರಿಸಿದನು. ಶಿವಮೊಗ್ಗ ಮತ್ತು ಬಿದನೂರಿನ ಕೋಟೆಗಳನ್ನು ವಶಪಡಿಸಿಕೊಂಡನು. ಚಿತ್ರದುರ್ಗದ ಕೋಟೆಯನ್ನು ವಶಪಡಿಸಿಕೊಳ್ಳಲು ವಿಫಲ ಪ್ರಯತ್ನಗಳನ್ನು ನಡೆಸಿದನು. ಗವರ್ನರ್ ಜನರಲ್‌ನಾಗಿದ್ದ ಲಾರ್ಡ್ ವೆಲ್ಲೆಸ್ಲಿ ಇತನ ಬಂಡಾಯವನ್ನು ಹತ್ತಿಕ್ಕಲು ಪ್ರಾರಂಭಿಸಿದನು. ಶಿವಮೊಗ್ಗ, ಹೊನ್ನಾಳಿ, ಹರಿಹರ ಮೊದಲಾದವುಗಳ ಮೇಲೆ ಆಕ್ರಮಣ ನಡೆಸಿ ಈತನ ನಿಯಂತ್ರಣದಲ್ಲಿದ್ದ ಪ್ರದೇಶಗಳನ್ನು ಮುಕ್ತಗೊಳಿಸಲಾಯಿತು. ಆಗ ಈತ ತನ್ನ ನೆಲೆಯನ್ನು ಕಳೆದುಕೊಂಡನು. ಶಿಕಾರಿಪುರವನ್ನು ಬ್ರಿಟಿಷರು ವಶಪಡಿಸಿಕೊಂಡ ತರುವಾಯ ಈತ ನಿಜಾಮನ ಹತೋಟಿಯಲ್ಲಿದ್ದ ಗುತ್ತಿಯ ಕಡೆಗೆ ಪಲಾಯನಗೈದನು. ಆಗ ನಿಜಾಮನು ಗುತ್ತಿಯನ್ನು ಮುತ್ತಿಗೆ ಹಾಕಿದನು ತಕ್ಷಣ ಈತ ಮರಾಠರ ಪ್ರದೇಶಕ್ಕೆ ಓಡಿಹೋದನು.
ಈ ಮೇಲಿನ ಟಿಪ್ಪಣಿ ಯಾರ ಕುರಿತಾದದ್ದು?
ಎ) ಸುರಪುರದ ವೆಂಕಟಪ್ಪ ನಾಯಕ
ಬಿ) ಸಂಗೊಳ್ಳಿ ರಾಯಣ್ಣ ಸಿ) ಧೋಂಡಿಯಾ ವಾಘ್
ಡಿ) ಮೇಲಿನ ಯಾರೂ ಅಲ್ಲ
ಉತ್ತರ:- ಸಿ

33) ಕಿತ್ತೂರು ರಾಣಿ ಚೆನ್ನಮ್ಮ ಯಾವುದರ ವಿರುದ್ಧ ಹೋರಾಡಿದಳು?
ಎ) ಖಾಯಂ ಜಮಿನುದಾರಿ ಪದ್ಧತಿ(ಮುಂದುವರಿಯುವುದು)

II PUC - MATHEMATICS


ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

APPLICATIONS OF DERIVATIVES
MAXIMA AND MINIMA

3. Show that the height of the cylinder of the greatest volume inscribed in a sphere of radius a is $\frac{2a}{\sqrt{3}}$

Soln:- Let 2h be the height & r be the radius of the base of the cylinder. OA=h, AB= r & OB= a



Since the cylinder is inscribed in the sphere, we have $OA^2 + AB^2 = OB^2$

i.e., $h^2 + r^2 = a^2$, if V is the volume of the cylinder then $V = 2\pi r^2 h$

Since, $r^2 = a^2 - h^2, V = 2\pi h(a^2 - h^2)$

$\therefore V = 2\pi(a^2 h - h^3)$........(i)

differentiating w.r.t 'h', we get

$$\frac{dV}{dh} = 2\pi(a^2 - 3h^2)$$

differentiating again w.r.t 'h', we get

$$\frac{d^2V}{dh^2} = 2\pi(0 - 6h) = -12\pi h$$

$$\frac{dV}{dh} = 0 \Rightarrow 2\pi(a^2 - 3h^2) = 0;$$

$$\therefore h^2 = \frac{a^2}{3} \Rightarrow h = \frac{a}{\sqrt{3}}$$

when, $h = \frac{a}{\sqrt{3}}; \frac{d^2V}{dh^2} = -12\pi . \frac{a}{\sqrt{3}} < 0$

hence, V attains maximum when $h = \frac{a}{\sqrt{3}}$.

$\therefore$ volume of the cylinder is maximum when the height $2h = \frac{2a}{\sqrt{3}}$

4. The sum of the four sides of a rectangle is constant. Show that the area of the rectangle is maximum only when it is a square.

Ans :– Let x and y be the dimensions of the rectangle.

If l is the perimeter then $2x + 2y = l$, where l is given to be constant.

Let A be the area of the rectangle.

$$\text{Hence, } A = xy = x\left(\frac{l - 2x}{2}\right) \quad \left(\text{since } y = \frac{l - 2x}{2}\right)$$

$$A = \frac{1}{2}(lx - 2x^2)$$

differentiating w.r.t x, $\frac{dA}{dx} = \frac{1}{2}(l - 4x)$

and $\frac{d^2A}{dx^2} = \frac{1}{2}(0 - 4) = -2$

Now $\frac{dA}{dx} = 0 \Rightarrow \frac{1}{2}(l - 4x) = 0 \Rightarrow x = \frac{l}{4}$

Also $\frac{d^2A}{dx^2} = -2 < 0$

$\therefore$ A attains its maximum when $x = \frac{l}{4}$

If $x = \frac{l}{4}$ then $y = \frac{l - 2.\frac{l}{4}}{2} = \frac{l}{4}$

$\therefore x = y$

Hence, rectangle with a given perimeter must be a square.

5. Find the absolute maximum and absolute minimum values of -

$$f(x) = \left(\frac{1}{2} - x\right)^2 + x^3 \text{ in } [-2, 2.5]$$

Soln :– Consider $f(x) = \left(\frac{1}{2} - x\right)^2 + x^3$

$\Rightarrow f'(x) = 2\left(\frac{1}{2} - x\right)(-1) + 3x^2$

$= 3x^2 + 2x - 1 = (x + 1)(3x - 1) = 0$

$\Rightarrow x = -1, \frac{1}{3}$

Now find the value of f(x) at $-2, -1, \frac{1}{3}, 2.5$

$f(-2) = \left(\frac{1}{2} + 2\right)^2 + (-2)^3 = \frac{25}{4} - 8 = \frac{-7}{4}$

$f(-1) = \left(\frac{1}{2} + 1\right)^2 + (-1)^3 = \frac{9}{4} - 1 = \frac{5}{4}$

$f\left(\frac{1}{3}\right) = \left(\frac{1}{2} - \frac{1}{3}\right)^2 + \left(\frac{1}{3}\right)^3 = \frac{1}{36} + \frac{1}{27} = \frac{7}{108}$

$f(2.5) = \left(\frac{1}{2} - 2.5\right)^2 + (2.5)^3 = 4 + 15.625$

$= 19.625$

6. Find the absolute maximum value and the absolute minimum value of $f(x) = 4x - \frac{x^2}{2}$ in (-2, 4.5)

Soln :– Consider $f(x) = 4x - \frac{x^2}{2}$

$\Rightarrow f'(x) = 4 - x$ exists for all x on $D_f = [-2, 4.5]$

$\Rightarrow f'(x) = 0 \Rightarrow 4 - x = 0$

$\Rightarrow x = 4 \in [-2, 4.5]$

$f(-2) = 4(-2) - \frac{(-2)^2}{2} = 8 - 2 = -10$

$f(4) = 4(4) - \frac{(4)^2}{2} = 16 - 8 = 8$

$f(4.5) = 4(4.5) - \frac{(4.5)^2}{2} = 18 - \frac{81}{8}$

$= \frac{144 - 81}{8} = \frac{63}{8}$

Therefore the maximum value = 8 at x = 4 and absolute minimum value = (-10) at x = - 2.

ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಸೂಚನೆ

ಪುಸ್ತಕಗಳಿಗೆ ಗುಣಮಟ್ಟದ ಮುಚ್ಚಳಿಕೆ

• ವರುಣ ಹೆಗಡೆ



ರಾಜ್ಯ ಕೇಂದ್ರ ಗ್ರಂಥಾಲಯ

ಬೆಂಗಳೂರು: ಏಕಗವಾಕ್ಷಿ ಯೋಜನೆಯಡಿ ಆಯ್ಕೆಯಾದ 2020ರ ಪುಸ್ತಕಗಳ ಖರೀದಿ ಪ್ರಕ್ರಿಯೆಯನ್ನು ಈವರೆಗೂ ಪೂರ್ಣಗೊಳಿಸದ ಸಾರ್ವಜನಿಕ ಗ್ರಂಥಾಲಯ ಇಲಾಖೆ, ಪುಸ್ತಕಗಳ ಪ್ರತಿಗಳು ಗೋದಾಮಿಗೆ ಸರಬರಾಜಾಗಿ ಹಲವು ತಿಂಗಳು ಕಳೆದ ಬಳಿಕ ಅವುಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ 'ಅಫಿಡವಿಟ್' (ಪ್ರಮಾಣಪತ್ರ) ಸಲ್ಲಿಸಲು ಸೂಚಿಸಿದೆ.

ಪುಸ್ತಕಗಳ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡು ಎರಡು ವರ್ಷಗಳು ಕಳೆದರೂ ಅನುದಾನದ ಕೊರತೆಯಿಂದ ಖರೀದಿ ಪ್ರಕ್ರಿಯೆ ಪೂರ್ಣ ಪ್ರಮಾಣದಲ್ಲಿ ನಡೆದಿಲ್ಲ. ಈ ವರ್ಷಾರಂಭದಲ್ಲಿ ಲಭ್ಯವಿದ್ದ ₹8.5 ಕೋಟಿ ಅನುದಾನದಲ್ಲಿ ಪುಸ್ತಕಗಳ ಖರೀದಿ ನಡೆಸಿದ್ದ ಇಲಾಖೆ, ಅರ್ಧಕ್ಕೂ ಅಧಿಕ ಪುಸ್ತಕಗಳ ಪ್ರತಿಗಳನ್ನು ಕಳೆದ ಮಾರ್ಚ್‌ನಿಂದ ತನ್ನ ಗೋದಾಮಿನಲ್ಲಿಯೇ ಇರಿಸಿಕೊಂಡಿದೆ. ಈಗ ಆ ಪುಸ್ತಕಗಳನ್ನು ₹13.5 ಕೋಟಿಯಲ್ಲಿ ಖರೀದಿಗೆ ಮುಂದಾಗಿದ್ದು, ಪುಸ್ತಕಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಪ್ರಕಾಶಕರಿಗೆ ₹100 ಮೊತ್ತದ ಸ್ಟ್ಯಾಂಪ್ ಪೇಪರ್‌ನಲ್ಲಿ ಮುಚ್ಚಳಿಕೆ ಸಲ್ಲಿಸಲು ಸೂಚಿಸಿದೆ. ಈಗಾಗಲೇ ಕೆಲವು ಪುಸ್ತಕಗಳ ಖರೀದಿ ನಡೆದಿದ್ದು, ಇನ್ನೊಂದು ಹಂತದ ಖರೀದಿಯ ಹಣ ಪಾವತಿಗೆ ಈ ಪ್ರಕ್ರಿಯೆ ಅನುಸರಿಸುತ್ತಿರುವುದು ಪ್ರಕಾಶಕರ ವಲಯದಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ.

2020ನೇ ಸಾಲಿನ ಪುಸ್ತಕ ಖರೀದಿಗೆ 4,791 ಶೀರ್ಷಿಕೆಗಳು ಆಯ್ಕೆಯಾಗಿದ್ದವು. ಇಷ್ಟು ಪುಸ್ತಕಗಳ ತಲಾ 300 ಪ್ರತಿಗಳನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆ ಖರೀದಿಸಿ, ರಾಜ್ಯದ ಗ್ರಂಥಾಲಯಗಳಿಗೆ ಪೂರೈಕೆ ಮಾಡಬೇಕಾಗಿತ್ತು. ಆದರೆ, ಖರೀದಿ ಪ್ರಕ್ರಿಯೆ ಸಮರ್ಪಕವಾಗಿ ನಡೆಯದಿದ್ದರಿಂದ ಇನ್ನೂ 2020ರ ಪುಸ್ತಕಗಳು ಗ್ರಂಥಾಲಯಗಳಿಗೆ ಪೂರೈಕೆಯಾಗಿಲ್ಲ.

ಇನ್ನಷ್ಟು ವಿಳಂಬ: ಯೋಜನೆಯಡಿ ಆಯ್ಕೆಯಾದ ಪುಸ್ತಕಗಳನ್ನು ಸ್ವೀಕರಿಸುವ ವೇಳೆ ಇಲಾಖೆಯು ಸಂಬಂಧಿಸಿದ ಪ್ರಕಾಶಕರಿಗೆ ಆಯ್ಕೆಯಾದ ಪುಸ್ತಕಗಳ ಪಟ್ಟಿಯೊಂದಿಗೆ ಆದೇಶ ಪ್ರತಿ ವಿತರಿಸಿ, ಪುಸ್ತಕ ಪರಿಶೀಲನೆ ಬಳಿಕ ಸ್ವೀಕೃತಿ ಪತ್ರವನ್ನು ಇಷ್ಟು ವರ್ಷ ಒದಗಿಸುತ್ತಿತ್ತು. 2020ರ ಮೊದಲ ಹಂತದ ಖರೀದಿಯಲ್ಲಿಯೂ ಇದೇ ಪ್ರಕ್ರಿಯೆಯನ್ನು ಅನುಸರಿಸಿತ್ತು. ಆದರೆ, ಈ ಹಿಂದೆ ಸರಬರಾಜದ ಕೆಲವು ಪುಸ್ತಕಗಳು ಮಾನದಂಡದ ಅನುಸಾರ ನಿಗದಿತ ಗುಣಮಟ್ಟ ಇರಲಿಲ್ಲ ಎಂಬ ಕಾರಣಕ್ಕೆ ಪ್ರಕಾಶಕರನ್ನೇ ಹೊಣೆಯಾಗಿಸಿ, ಸ್ಟ್ಯಾಂಪ್ ಪೇಪರ್‌ನಲ್ಲಿ ಮುಚ್ಚಳಿಕೆ ಬರೆಸಿಕೊಳ್ಳಲಾಗುತ್ತಿದೆ. ಇದರಿಂದ ಬಾಕಿ ಹಣ ಪಾವತಿ ಇನ್ನಷ್ಟು ವಿಳಂಬವಾಗಿದೆ.

ಈ ಯೋಜನೆಯಡಿ ಸಾಹಿತಿ ದೊಡ್ಡರಂಗೇಗೌಡ ಅವರ ಅಧ್ಯಕ್ಷತೆಯ ಈ ಹಿಂದಿನ ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿ 2022ರಲ್ಲಿಯೇ 2020ರ ಪುಸ್ತಕಗಳ ಪಟ್ಟಿಯನ್ನು ಸಿದ್ಧಪಡಿಸಿತ್ತು. ಆದರೆ, ಅದಕ್ಕೆ ಸರ್ಕಾರದ ಅನುಮೋದನೆ ದೊರೆತಿರಲಿಲ್ಲ. ಬಳಿಕ ಬಂದ ಕಾಂಗ್ರೆಸ್ ಸರ್ಕಾರ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯನ್ನು ಪುನರ್ ರಚಿಸಿತ್ತು. ಸಾಹಿತಿ ಕರೀಗೌಡ ಬೀಚನಹಳ್ಳಿ ಅವರ ಅಧ್ಯಕ್ಷತೆಯ ನೂತನ ಸಮಿತಿಯು ಇಲಾಖೆಯ ಸೂಚನೆ ಮೇರೆಗೆ ಅಂತಿಮಗೊಂಡಿದ್ದ ಪುಸ್ತಕಗಳ ಪಟ್ಟಿಯನ್ನು ಮರುಪರಿಶೀಲನೆ ನಡೆಸಿತ್ತು. ಈ ಪಟ್ಟಿಗೆ 2023ರ ನವೆಂಬರ್‌ನಲ್ಲಿ ಸರ್ಕಾರ ಅನುಮೋದನೆ ನೀಡಿತ್ತು. ಆದರೆ, ಅಗತ್ಯ ಅನುದಾನ ನೀಡದಿದ್ದರಿಂದ ಖರೀದಿ ನಡೆದಿರಲಿಲ್ಲ.

'ಈಗಾಗಲೇ ಹಣ ಪಾವತಿ ವಿಳಂಬವಾಗಿದ್ದು, ಪ್ರಕಾಶಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅನಗತ್ಯವಾಗಿ ಈಗ 'ಅಫಿಡವಿಟ್' ಸಲ್ಲಿಸಲು ಸೂಚಿಸುವ ಮೂಲಕ ಇನ್ನಷ್ಟು ವಿಳಂಬ ಮಾಡಲಾಗುತ್ತಿದೆ' ಎಂದು ಪ್ರಕಾಶಕರು ಅಸಮಾಧಾನ ವ್ಯಕ್ತಪಡಿಸಿದರು.

ಪುಸ್ತಕ ಆಯ್ಕೆ, ಖರೀದಿಗೆ ಹಿನ್ನಡೆ

ರಾಜ್ಯದಲ್ಲಿ ಸುಮಾರು 500 ಪ್ರಕಾಶನ ಸಂಸ್ಥೆಗಳಿವೆ. ಕೆಲವು ಲೇಖಕರು ಕೂಡ ಪ್ರಕಾಶನ ಕಾರ್ಯದಲ್ಲಿ ನಿರತರಾಗಿದ್ದಾರೆ. ಪ್ರತಿ ವರ್ಷ ಸುಮಾರು 8 ಸಾವಿರ ಪುಸ್ತಕಗಳು ಪ್ರಕಟವಾಗುತ್ತಿವೆ. ಬಹುತೇಕ ಪ್ರಕಾಶಕರು ಗ್ರಂಥಾಲಯ ಇಲಾಖೆಯ ಸಗಟು ಖರೀದಿಯನ್ನೇ ಅವಲಂಬಿಸಿದ್ದಾರೆ. ಆದರೆ, ನಿರ್ದಿಷ್ಟ ಬಜೆಟ್ ಘೋಷಿಸದಿರುವುದು, ಪುಸ್ತಕಗಳ ಖರೀದಿಗೆ ಅಗತ್ಯವಿರುವ ಅನುದಾನಕ್ಕೆ ಅನುಮೋದನೆ ದೊರೆಯದಿರುವುದು ಸೇರಿ ವಿವಿಧ ಕಾರಣದಿಂದ ಪುಸ್ತಕೋದ್ಯಮ ಹಿನ್ನಡೆ ಅನುಭವಿಸಿದೆ. 2020ರ ಖರೀದಿ ವಿಳಂಬವಾದ್ದರಿಂದ ಮುಂದಿನ ವರ್ಷಗಳ ಆಯ್ಕೆ ಮತ್ತು ಖರೀದಿಯೂ ಸಮಸ್ಯೆಯಾಗಿದೆ. 2021ರ ಪುಸ್ತಕಗಳ ಪಟ್ಟಿ ಕಳೆದ ತಿಂಗಳು ಪ್ರಕಟವಾಗಿದೆ.

ಸರಬರಾಜಾದ ಪುಸ್ತಕಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಪ್ರಮಾಣಪತ್ರ ಸಲ್ಲಿಸಬೇಕೆಂಬುದು ಸರ್ಕಾರಿ ಆದೇಶದಲ್ಲಿಯೇ ಇದೆ. ಅದನ್ನು ಈಗ ಅನುಷ್ಠಾನ ಮಾಡಲಾಗಿದೆ

ಎಂ. ಕನಗವಲ್ಲಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ ಆಯುಕ್ತೆ

ಪುಸ್ತಕೋದ್ಯಮ ನೂರಾರು ಸಮಸ್ಯೆ ಎದುರಿಸುತ್ತಿದೆ. ಅವುಗಳನ್ನು ನಿವಾರಿಸುವ ಬದಲು, ಪ್ರಮಾಣಪತ್ರ ಸಲ್ಲಿಕೆಗೆ ಸೂಚಿಸುವ ಮೂಲಕ ಪುಸ್ತಕ ಖರೀದಿ ಇನ್ನಷ್ಟು ವಿಳಂಬ ಮಾಡಲಾಗುತ್ತಿದೆ

ಸೃಷ್ಟಿ ನಾಗೇಶ್, ಪ್ರಕಾಶಕ

ಪುಸ್ತಕಗಳು ಸರಬರಾಜದ ಮೇಲೆ ಪ್ರಮಾಣಪತ್ರ ಪಡೆಯುವ ಬದಲು, ಸ್ವೀಕರಿಸುವಾಗಲೇ ಪ್ರಮಾಣಪತ್ರ ಪಡೆಯಲಿ. ಇದರಿಂದ ಪ್ರಕಾಶಕರಿಗೂ ಅನುಕೂಲವಾಗಲಿದೆ

ಅಕ್ಷತಾ ಹುಂಚದಕಟ್ಟೆ, ಪ್ರಕಾಶಕಿ

ತಾರಾನಾಥ, ಶರಣಬಸಪ್ಪಗೆ ಪ್ರಶಸ್ತಿ

ಧಾರವಾಡ: ನಗರದ ಡಾ.ಎಂ.ಎಂ.ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನ ನೀಡುವ 'ಡಾ.ಎಂ.ಎಂ.ಕಲಬುರ್ಗಿ ಸಂಶೋಧನಾ ಪ್ರಶಸ್ತಿ'ಗೆ ಮೈಸೂರಿನ ಸಂಶೋಧಕ ಎನ್.ಎಸ್.ತಾರಾನಾಥ ಹಾಗೂ 'ಡಾ.ಎಂ.ಎಂ.ಕಲಬುರ್ಗಿ ವಚನ ಸಂಗೀತ ಪ್ರಶಸ್ತಿ'ಗೆ ಧಾರವಾಡದ ಸಂಗೀತ ಉಪನ್ಯಾಸಕ ಶರಣಬಸಪ್ಪ ಮೇಡೆದಾರ ಆಯ್ಕೆಯಾಗಿದ್ದಾರೆ.

ನಗರದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ನವೆಂಬರ್ 28ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಸಾಹಿತಿ ಗೊರುಚ ಅವರು ಪ್ರಶಸ್ತಿ ಪ್ರದಾನ ಮಾಡುವರು. ಎರಡೂ ಪ್ರಶಸ್ತಿಗಳು ತಲಾ ₹ 25 ಸಾವಿರ ನಗದು, ಸ್ಮರಣಿಕೆ ಒಳಗೊಂಡಿವೆ ಎಂದು ಪ್ರಕಟಣೆ ತಿಳಿಸಿದೆ.



ಭರತನಾಟ್ಯ

ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ ಆಯೋಜಿಸಿದ್ದ 'ವಸುಂಧರೋತ್ಸವ' ಅಂಗವಾಗಿ ಭಾನುವಾರ ನಡೆದ 'ಮೈಸೂರು ಕಲಾ ದಿವಸ್' ಕಾರ್ಯಕ್ರಮದಲ್ಲಿ ವಿದುಷಿ ವಸುಂಧರಾ ದೊರೆಸ್ವಾಮಿ ಶಿಷ್ಯೆಯರು ಸಾಮೂಹಿಕ ಭರತನಾಟ್ಯ ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ಕೃತ್ಯ ನಡೆದ ಸ್ಥಳದಲ್ಲಿ ದರ್ಶನ್ ಇದ್ದ ಫೋಟೊ: ಸಚಿವ

ದರ್ಶನ್ ಜಾಮೀನು ರದ್ದತಿಗೆ ಮನವಿ

ಪ್ರಜಾವಾಣಿ ವಾರ್ತೆ



ಜಿ.ಪರಮೇಶ್ವರ್

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ನಡೆದ ಸ್ಥಳದಲ್ಲಿ ನಟ ದರ್ಶನ್ ಇದ್ದ ಬಗ್ಗೆ ಫೋಟೊ ಸಾಕ್ಷ್ಯ ದೊರೆತಿರುವ ಕಾರಣ ಅವರಿಗೆ ನೀಡಿರುವ ಜಾಮೀನು ರದ್ದತಿಗೆ ಕ್ರಮ ಜರುಗಿಸಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, 'ಕೃತ್ಯ ನಡೆದ ಸ್ಥಳದಲ್ಲಿ ದರ್ಶನ್ ಜತೆಗಿದ್ದ ಇತರೆ ಆರೋಪಿಗಳ ಮೊಬೈಲ್ ಫೋನ್‌ಗಳನ್ನು ಪೊಲೀಸರು ವಶಪಡಿಸಿಕೊಂಡು ಹೈದಾರಾಬಾದ್‌ನ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಪರೀಕ್ಷೆಗಾಗಿ ಕಳುಹಿಸಿದ್ದರು. ಕೊಲೆ ನಡೆದ ಸ್ಥಳದಲ್ಲಿ ದರ್ಶನ್ ಇರುವ ಫೋಟೋಗಳು ಲಭ್ಯವಾಗಿವೆ. ಮೇಲ್ನೋಟಕ್ಕೆ ದರ್ಶನ್ ಪಾತ್ರ ದೊಡ್ಡದಾಗಿ ಕಾಣುತ್ತಿದೆ. ಹೀಗಾಗಿ ದರ್ಶನ್‌ಗೆ ಮಂಜೂರು ಮಾಡಿರುವ ಜಾಮೀನು ರದ್ದು ಮಾಡುವಂತೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಲಾಗುವುದು' ಎಂದರು. ನಟನ ಜೊತೆಯಲ್ಲಿದ್ದ ವ್ಯಕ್ತಿಯೊಬ್ಬರು ವಿಡಿಯೊ ಮಾಡಿಕೊಂಡಿದ್ದರು.

ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಜಾಮೀನು ರದ್ದುಪಡಿಸುವಂತೆ ಕೋರಲಾಗುವುದು. ಮುಂದಿನ ಕ್ರಮ ಕೈಗೊಳ್ಳಲು ಪ್ರಕ್ರಿಯೆ ಆರಂಭವಾಗಿದೆ ಎಂದು ತಿಳಿಸಿದರು.

'ಬೆನ್ನು ನೋವಿಗೆ ಸಂಬಂಧಿಸಿದಂತೆ ದರ್ಶನ್ ಇನ್ನೂ ಶಸ್ತ್ರಚಿಕಿತ್ಸೆಗೆ ಒಳಗಾಗಿಲ್ಲ. ಹಾಗೆಯೇ ಕಾಲ ಕಳೆಯುತ್ತಿದ್ದಾರೆ. ಅವರಿಗೆ ಶಸ್ತ್ರಚಿಕಿತ್ಸೆ ಅಗತ್ಯವಿಲ್ಲ ಎಂದು ಗೊತ್ತಾಗಿದೆ. ಆಪರೇಷನ್ ಮಾಡದಿದ್ದರೆ ಬೆನ್ನುಮೂಳೆ ಮುರಿದು ಹೋಗುತ್ತದೆ ಎಂದು ಹೇಳಿದ್ದರು. ಜಾಮೀನು ದೊರೆತು ವಾರಗಳು ಕಳೆದರೂ ಆಪರೇಷನ್ ಆಗಿಲ್ಲ. ಇವೆಲ್ಲವನ್ನೂ ನ್ಯಾಯಾಲಯದ ಗಮನಕ್ಕೆ ತರಲಾಗುವುದು. ನ್ಯಾಯಾಂಗ ವ್ಯವಸ್ಥೆಯಲ್ಲಿ ನ್ಯಾಯಾಲಯ ತೀರ್ಮಾನ ಕೊಡಬೇಕು' ಎಂದು ಹೇಳಿದರು.

ದೂರವಾಣಿ ಕರೆಗಳ ಮಾಹಿತಿ ಸಲ್ಲಿಕೆ

ನಟ ದರ್ಶನ್ ಹಾಗೂ ಇತರೆ ಆರೋಪಿಗಳ ವಿರುದ್ಧ ಸುಮಾರು 1,300 ಪುಟಗಳ ಹೆಚ್ಚುವರಿ ಆರೋಪ ಪಟ್ಟಿಯನ್ನು ನಗರದ 57ನೇ ಸಿಸಿಎಚ್ ನ್ಯಾಯಾಲಯಕ್ಕೆ ಸಲ್ಲಿಸಿರುವ ಪೊಲೀಸರು, ಆರೋಪಿಗಳು ಕೊಲೆಯಲ್ಲಿ ಭಾಗಿಯಾಗಿದ್ದಕ್ಕೆ ಡಿಜಿಟಲ್ ಸಾಕ್ಷ್ಯಾಧಾರಗಳು, ವಿಧಿವಿಜ್ಞಾನ ಪ್ರಯೋಗಾಲಯದ ವರದಿ, ಕರೆಗಳ ವಿವರ (ಸಿಡಿಆರ್) ಸೇರಿದಂತೆ ಹಲವು ದಾಖಲೆಗಳನ್ನು ನೀಡಿದ್ದಾರೆ.

ಕೊಲೆ ಮಾಡಿದ ಬಳಿಕ ಚಿತ್ರದುರ್ಗದ ಅನುಕುಮಾರ್, ದರ್ಶನ್ ಹಾಗೂ ಇನ್ನಿಬ್ಬರು ಶೆಡ್‌ನಿಂದ ಹೊರ ಹೋಗಿದ್ದರು. ಈ ಫೋಟೊಗಳನ್ನು ಶೆಡ್‌ನ ಭದ್ರತಾ ಸಿಬ್ಬಂದಿ ಮೊಬೈಲ್‌ನಲ್ಲಿ ತೆಗೆದಿದ್ದರು. ಎಫ್‌ಎಸ್‌ಎಲ್‌ನಲ್ಲಿ ಈ ಫೋಟೊಗಳನ್ನು ಮರು ಸಂಗ್ರಹಿಸಲಾಗಿದೆ. ಅಲ್ಲದೇ ಆರೋಪಿಗಳ ದೂರವಾಣಿ ಕರೆಗಳ ಮಾಹಿತಿಯನ್ನು ಉಲ್ಲೇಖಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆ-ಸೆಟ್, ರಾಯಚೂರು ವಿವಿ ಪರೀಕ್ಷೆ ಸುಗಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ 'ಕೆ-ಸೆಟ್' ಮತ್ತು ರಾಯಚೂರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನೇಮಕಾತಿ ಪರೀಕ್ಷೆ ಯಾವುದೇ ಗೊಂದಲ ಇಲ್ಲದೆ ಭಾನುವಾರ ನಡೆಯಿತು.

ಕೆ- ಸೆಟ್ ಪರೀಕ್ಷೆಗೆ ಶೇ 84ರಷ್ಟು ಹಾಗೂ ರಾಯಚೂರು ವಿಶ್ವವಿದ್ಯಾಲಯದ ಪರೀಕ್ಷೆಗೆ ಶೇ 64ರಷ್ಟು ಅಭ್ಯರ್ಥಿಗಳು ಹಾಜರಾಗಿದ್ದರು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಬೆಂಗಳೂರು, ಬೆಳಗಾವಿ, ಬಳ್ಳಾರಿ, ಬೀದರ್, ದಾವಣಗೆರೆ, ಧಾರವಾಡ, ಕಲಬುರಗಿ, ಮೈಸೂರು, ಶಿವಮೊಗ್ಗ, ತುಮಕೂರು, ಉಡುಪಿ ಮತ್ತು ವಿಜಯಪುರ ಜಿಲ್ಲೆಗಳ ಒಟ್ಟು 252 ಕೇಂದ್ರಗಳಲ್ಲಿ ಕೆ-ಸೆಟ್ ಪರೀಕ್ಷೆ ನಡೆಯಿತು. ರಾಯಚೂರು ವಿಶ್ವವಿದ್ಯಾಲಯದ ನೇಮಕಾತಿಗೆ ಪರೀಕ್ಷೆ ಬೆಂಗಳೂರು ನಗರದಲ್ಲಿ ಮಾತ್ರ ನಡೆಯಿತು' ಎಂದೂ ಅವರು ವಿವರಿಸಿದ್ದಾರೆ.

ಸವದತ್ತಿ: ಬೆಂಕಿಗೆ ಆಹುತಿಯಾದ 15 ಎಕರೆ ಕಬ್ಬು

ಪ್ರಜಾವಾಣಿ ವಾರ್ತೆ

ಸವದತ್ತಿ (ಬೆಳಗಾವಿ ಜಿಲ್ಲೆ): ಪಟ್ಟಣದ ಹೊರವಲಯದ ಟೋಲ್ ನಾಕಾ ಬಳಿ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡಿದ್ದರಿಂದ ರೈತ ಶಿವಪ್ಪ ಜಯಪ್ಪ ಮುತಗೊಂಡ ಅವರಿಗೆ ಸೇರಿದ ಸುಮಾರು 15 ಎಕರೆ ಕಬ್ಬಿನ ಬೆಳೆ ಭಾನುವಾರ ಬೆಂಕಿಗೆ ಆಹುತಿಯಾಗಿದೆ.

ಸುತ್ತಲಿನ ಪರಿಸರದಲ್ಲಿ ದಟ್ಟವಾದ ಹೊಗೆ ಆವರಿಸಿತ್ತು. ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಅಗ್ನಿಶಾಮಕ ಠಾಣೆ ಸಿಬ್ಬಂದಿ ಬೆಂಕಿ ನಂದಿಸಲು ಹರಸಾಹಸ ಪಟ್ಟರು.



'ಶಾರ್ಟ್ ಸರ್ಕಿಟ್‌ನಿಂದ ಕಬ್ಬಿನ ಬೆಳೆಗೆ ಬೆಂಕಿ ತಗುಲಿರಬಹುದು. ಅಂದಾಜು ₹32 ಲಕ್ಷ ಮೌಲ್ಯದ ಕಬ್ಬು ಬೆಳೆಯಲಾಗಿತ್ತು. ಈ ಪೈಕಿ ₹14–15 ಲಕ್ಷ ಮೌಲ್ಯದ ಬೆಳೆ ಬೆಂಕಿಗೆ ಆಹುತಿಯಾಗಿದೆ. ಮೂರು ತಾಸು ಕಾರ್ಯಾಚರಣೆ ನಡೆಸಿ ಉಳಿದ ಬೆಳೆ ಸುಟ್ಟುಹೋಗುವುದನ್ನು ತಡೆಯಲಾಗಿದೆ' ಎಂದು ಅಗ್ನಿಶಾಮಕ ಠಾಣೆ ಅಧಿಕಾರಿಗಳು ತಿಳಿಸಿದರು.

'ದುರುದ್ದೇಶದಿಂದ ಕಿಡಿಗೇಡಿಗಳು ನಾನು ಬೆಳೆದ ಕಬ್ಬಿನ ಬೆಳೆಗೆ ಬೆಂಕಿ ಹಚ್ಚಿದ್ದಾರೆ' ಎಂದು ರೈತ ಶಿವಪ್ಪ ಅವರ ಪುತ್ರ ಶ್ರೀಶೈಲ ಮುತಗೊಂಡ ಆರೋಪಿಸಿದ್ದಾರೆ.

ಸಾಹಿತ್ಯೋತ್ಸವದಲ್ಲಿ ನೀಡಿದ ಹೇಳಿಕೆಗೆ ಆಕ್ಷೇಪ, ವಾಗ್ವಾದ

ಆರ್‌ಎಸ್‌ಎಸ್ ಕುರಿತು ಬಿಳಿಮಲೆ ಟೀಕೆ

ಪ್ರಜಾವಾಣಿ ವಾರ್ತೆ



ಪುರುಷೋತ್ತಮ ಬಿಳಿಮಲೆ

ಕೊಪ್ಪಳ: ನಗರದಲ್ಲಿ ಭಾನುವಾರ ನಡೆದ ಕವಿ ದಿ.ಗವಿಸಿದ್ದ ಎನ್. ಬಳ್ಳಾರಿ ಸಾಹಿತ್ಯೋತ್ಸವ ಕಾರ್ಯಕ್ರಮದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಆರ್‌ಎಸ್‌ಎಸ್ ಕುರಿತು ಮಾಡಿದ ಟೀಕೆಗೆ ಆಕ್ಷೇಪ ವ್ಯಕ್ತವಾಗಿದ್ದು, ಇದು ವಾಗ್ವಾದಕ್ಕೂ ಕಾರಣವಾಯಿತು.

ಸಾಹಿತ್ಯೋತ್ಸವದಲ್ಲಿ ಬಿಳಿಮಲೆಯವರು '1924ರಲ್ಲಿ ಮಹಾತ್ಮ ಗಾಂಧೀಜಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ಅವರು ಅಧ್ಯಕ್ಷತೆ ವಹಿಸಿದ್ದ ಏಕೈಕ ಕಾಂಗ್ರೆಸ್ ಅಧಿವೇಶನಕ್ಕೆ ಈಗ 100 ವರ್ಷಗಳಾಗಿವೆ. ಕರ್ನಾಟಕ ಏಕೀಕರಣವೂ ನಮ್ಮಲ್ಲಿ ಮಹತ್ವದ ಘಟ್ಟವಾಗಿದೆ. ಇಂಥ ಪ್ರಮುಖ ವಿಷಯಗಳನ್ನೆಲ್ಲ ಸರ್ಕಾರವೇ ದಾಖಲಿಸಿ ಪುಸ್ತಕ ರೂಪದಲ್ಲಿ ಅತ್ಯಂತ ಕಡಿಮೆ ಬೆಲೆಗೆ ಜನರಿಗೆ ಕೊಡಬೇಕು. ಈ ಮೂಲಕ ಇತಿಹಾಸ ಉಳಿಸುವ ಕೆಲಸ ಮಾಡಬೇಕು. ಆದರೆ ವೈಭವೀಕರಿಸುವುದು ಬೇಡ. ವೈಭವೀಕರಿಸುವ ಕೆಲಸವನ್ನು ಆರ್‌ಎಸ್‌ಎಸ್‌ನವರು ಮಾಡುತ್ತಾರೆ' ಎಂದರು. ಇದಕ್ಕೂ ಮೊದಲು ಬೇರೆ ಬೇರೆ ಘಟನೆಗಳನ್ನು ಪ್ರಸ್ತಾಪಿಸಿ ಅವರು ಆರ್‌ಎಸ್‌ಎಸ್ ಬಗ್ಗೆ ಟೀಕೆ ಮಾಡಿದ್ದರು.

ಇದಕ್ಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕೆಲ ಸಾಹಿತ್ಯಾಸಕ್ತರು ವಿರೋಧ ವ್ಯಕ್ತಪಡಿಸಿ 'ಮೊದಲು ಆರ್‌ಎಸ್‌ಎಸ್‌ಅನ್ನು ಟೀಕಿಸುವುದು ಬಿಡಿ, ವಕ್ಫ್ ಬಗ್ಗೆ ಯಾಕೆ ಮಾತನಾಡುವುದಿಲ್ಲ? ಯಾರ ಬಗ್ಗೆ ಕಾರ್ಯಕ್ರಮ ಆಯೋಜಿಸಿದ್ದಾರೊ ಅವರ ಬಗ್ಗೆ ಮಾತನಾಡಿ' ಎಂದು ಏರುಧ್ವನಿಯಲ್ಲಿ ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಬಿಳಿಮಲೆ 'ಆರ್‌ಆರ್‌ಎಸ್ ಬಗ್ಗೆ ಮಾತನಾಡಲೇಬಾರದೆಂದು ಎಲ್ಲಿಯಾದರೂ ಕಾನೂನು ಇದೆಯೇ? ನನಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ. ಕಷ್ಟಪಟ್ಟಾದರೂ ಈ ಸ್ವಾತಂತ್ರ್ಯ ಉಳಿಸಿಕೊಳ್ಳೋಣ' ಎಂದರು.

ಇನ್ನು ಕೆಲವರು ಆಕ್ಷೇಪ ವ್ಯಕ್ತಪಡಿಸಿದವರನ್ನು ಸಮಾಧಾನಪಡಿಸಲು ಯತ್ನಿಸಿದರೆ, ಇನ್ನಷ್ಟು ಜನ ಕಾರ್ಯಕ್ರಮದಲ್ಲಿ ಇರುವುದಾದರೆ ಇರಿ; ಇಲ್ಲವಾದರೆ ಹೊರಗಡೆ ನಡೆಯಿರಿ ಎಂದಾಗ ಆಕ್ಷೇಪ ವ್ಯಕ್ತಪಡಿಸಿದವರು ಹೊರನಡೆದರು.

ಲಕ್ಕುಂಡಿ: ಗತವೈಭವಕ್ಕೆ ಮುನ್ನುಡಿ





ಲಕ್ಕುಂಡಿಯಲ್ಲಿ ನಡೆದ ಪ್ರಾಚ್ಯವಸ್ತು ಸಂಗ್ರಹ ಕಾರ್ಯಕ್ರಮದ ಮೆರವಣಿಗೆಯಲ್ಲಿ ಕಳಶ ಹೊತ್ತ ಮಹಿಳೆಯರು ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು (ಎಡಚಿತ್ರ) ಪ್ರವಾಸೋದ್ಯಮ ಇಲಾಖೆ ಸಚಿವ ಎಚ್‌.ಕೆ. ಪಾಟೀಲ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶಾಸಕರಾದ ಜಿ.ಎಸ್‌. ಪಾಟೀಲ, ಸಿ.ಸಿ. ಪಾಟೀಲ, ಗದಗ ಜಿಲ್ಲೆಯ ಕಾಂಗ್ರೆಸ್ ಘಟಕದ ಅಧ್ಯಕ್ಷ ವಾಸಣ್ಣ ಕುರುಡಗಿ ಉಪಸ್ಥಿತರಿದ್ದರು

• ಖಲೀಲಅಹ್ಮದ ಶೇಖ

ಲಕ್ಕುಂಡಿ (ಗದಗ ಜಿಲ್ಲೆ): ಒಂದೆಡೆ ಕಳಶ ಹೊತ್ತ ಮಹಿಳೆಯರ ಸಾಲು, ಮತ್ತೊಂದೆಡೆ ಡೊಳ್ಳು, ಮಂಗಳ ವಾದ್ಯಗಳ ಸಂಭ್ರಮದೊಂದಿಗೆ ಪಲ್ಲಕ್ಕಿಗಳ ಸಾಲು ಹಳ್ಳಿಯ ಮನೆ ಮನೆಗೆ ತೆರಳಿ ನಾಣ್ಯ, ಪ್ರಾಚ್ಯವಸ್ತುಗಳನ್ನು ಸಂಗ್ರಹಿಸುವ ಮೂಲಕ ಲಕ್ಕುಂಡಿ ಗತವೈಭವದ ಮರುಸ್ಥಾಪನೆಗೆ ಮುನ್ನುಡಿ ಬರೆಯಲಾಯಿತು.

ಗದಗ ಜಿಲ್ಲೆಯ ಲಕ್ಕುಂಡಿಯಲ್ಲಿ ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ 'ಲಕ್ಕುಂಡಿ ಪಾರಂಪರಿಕ ಪ್ರದೇಶ ವ್ಯಾಪ್ತಿಯ ಪ್ರಾಚ್ಯಾವಶೇಷಗಳ ಅನ್ವೇಷಣೆ ಕಾರ್ಯಕ್ರಮ'ವು ಹಬ್ಬದ ವಾತಾವರಣ ಸೃಷ್ಟಿಸಿತ್ತು.

ಶ್ರೀಮಂತ ಇತಿಹಾಸ, ಪರಂಪರೆಯನ್ನು ಹೊಂದಿರುವ ಲಕ್ಕುಂಡಿಯ ಗತವೈಭವವನ್ನು ಮರುಸ್ಥಾಪಿಸಲು ಹತ್ತು ದಿನಗಳಿಂದ ಈ ವ್ಯಾಪ್ತಿಯಲ್ಲಿರುವ ಐತಿಹಾಸಿಕ ಕುರುಹುಗಳು, ಸ್ಮಾರಕಗಳ ಪತ್ತೆಗಾಗಿ ಇತಿಹಾಸಕಾರರು ಹಾಗೂ ತಜ್ಞರ ನೇತೃತ್ವದಲ್ಲಿ ಹಲವಾರು ತಂಡಗಳನ್ನು ರಚಿಸಲಾಗಿತ್ತು.

ಭಾನುವಾರ ಲಕ್ಕುಂಡಿ ಗ್ರಾಮದ ವಿವಿಧ ಓಣಿಗಳಿಗೆ ತೆರಳಿದ ಪ್ರವಾಸೋದ್ಯಮ ಸಚಿವ ಎಚ್‌.ಕೆ. ಪಾಟೀಲ, ನರಗುಂದ ಶಾಸಕ ಸಿ.ಸಿ. ಪಾಟೀಲ ಅವರನ್ನು ಮಹಿಳೆಯರು ಆರತಿ ಬೆಳಗುವ ಮೂಲಕ ಸ್ವಾಗತಿಸಿದರು.

ಎಚ್‌.ಕೆ. ಪಾಟೀಲ ಅವರ ನೇತೃತ್ವದಲ್ಲಿ ಮನೆ ಮನೆಗೆ ತೆರಳಿ ಗ್ರಾಮಸ್ಥರ ಬಳಿ ಇದ್ದ ಶಿಲ್ಪಗಳು, ನಾಣ್ಯಗಳು, ಸ್ಮಾರಕಗಳು, ವೀರಗಲ್ಲುಗಳು, ತಾಮ್ರದ ಪತ್ರಗಳು, ತಾಳೆ ಗರಿಗಳನ್ನು ಪಡೆದುಕೊಳ್ಳಲಾಯಿತು. ಈ ವಸ್ತುಗಳನ್ನು ಜನ ಪಲ್ಲಕ್ಕಿಯಲ್ಲಿ ಹಾಕುವ ಮೂಲಕ ಹೃದಯ ವೈಶಾಲ್ಯತೆ ಮೆರೆದರು.

ಲಕ್ಕುಂಡಿ ಕಲ್ಮಠದ ಹತ್ತಿರದ ನಿವಾಸಿ ವೀರಯ್ಯ ಅವರು ತಮ್ಮ ಮನೆಯ 18 ಗುಂಟೆ ಜಾಗವನ್ನು ಪುರಾತತ್ವ ಇಲಾಖೆಗೆ ಹಸ್ತಾಂತರಿಸಿದರು.

ನಂತರ ಮಾತನಾಡಿದ ಪಾಟೀಲ, 'ಲಕ್ಕುಂಡಿಯನ್ನು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸಲು ಬೇಕಾದ ಎಲ್ಲಾ ದಾಖಲೆಗಳನ್ನು ಸಂಗ್ರಹಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ನವೆಂಬರ್ 22ರಿಂದ 24ರವರೆಗೆ ನಡೆದ ಈ ಪ್ರಾಚ್ಯಾವಶೇಷಗಳ ಅನ್ವೇಷಣೆಯಲ್ಲಿ 1,050 ಸ್ಮಾರಕಗಳು, 13 ಶಾಸನಗಳು, ಬಾದಾಮಿ ಚಾಲುಕ್ಯರ, ಕಳಚೂರರ, ವಿಜಯನಗರ ಸಾಮ್ರಾಜ್ಯ ಕಾಲದ ಸಾವಿರಾರು ನಾಣ್ಯಗಳು ಸಂಗ್ರಹಿಸಲಾಗಿದೆ. ಶಿಲಾಯುಗದ ಆಯುಧವೊಂದು ಪತ್ತೆಯಾಗಿದ್ದು, ಇವುಗಳನ್ನು ಲಕ್ಕುಂಡಿ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇರಿಸಲಾಗುವುದು' ಎಂದು ಮಾಹಿತಿ ನೀಡಿದರು.

'ಲಕ್ಕುಂಡಿಯನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಬೇಕಾದ ಅನುದಾನವನ್ನು ಮುಂದಿನ ವರ್ಷದ ಬಜೆಟ್‌ನಲ್ಲಿ ಘೋಷಣೆ ಮಾಡಲಾಗುವುದು. ಇಲ್ಲಿರುವ 101 ಬಾವಿಗಳು ಮತ್ತು ದೇವಸ್ಥಾನಗಳ ಅವಶೇಷಗಳು ಭೂಮಿಯಲ್ಲಿ ಹುದುಗಿ ಹೋಗಿದ್ದು, ಇವುಗಳನ್ನು ಪತ್ತೆಹಚ್ಚಲು ಡಿಸೆಂಬರ್ ಅಂತ್ಯದಲ್ಲಿ ಉತ್ಖನನ ಆರಂಭಿಸುವ ಚಿಂತನೆ ಇದ್ದು, ಈ ಕುರಿತು ತಜ್ಞರೊಂದಿಗೆ ಚರ್ಚಿಸಲಾಗುವುದು' ಎಂದರು.

ಅಂಕಿ ಅಂಶಗಳು

1,050 ಭಾನುವಾರ ದೊರೆತ ಪ್ರಾಚ್ಯಾವಶೇಷಗಳ ಸಂಖ್ಯೆ

13 ಶಾಸನಗಳು

1,500 ಅಭಿಯಾನದಲ್ಲಿ ಪಾಲ್ಗೊಂಡ ಜನರು

ಲಕ್ಕುಂಡಿಯಲ್ಲಿ ದೊರೆತಿರುವ ಬೃಹತ್ ಕಂಬಗಳು, ಸ್ಮಾರಕಗಳ ಅವಶೇಷಗಳನ್ನು ಬಳಸಿಕೊಂಡು ದೇವಸ್ಥಾನ ಮರುನಿರ್ಮಾಣ ಮಾಡಲಾಗುವುದು

ಎಚ್‌.ಕೆ. ಪಾಟೀಲ,
ಪ್ರವಾಸೋದ್ಯಮ ಸಚಿವ

ಗ್ರಾಮದ ಐತಿಹಾಸಿಕ ಪರಂಪರೆ ಬಿಂಬಿಸುವ ಕುರುಹುಗಳನ್ನು ಸಂರಕ್ಷಿಸಿ, ವಿಶ್ವ ಪಾರಂಪರಿಕ ತಾಣವನ್ನಾಗಿ ಮಾಡುವ ಕೆಲಸಕ್ಕೆ ಎಲ್ಲರೂ ಕೈಜೋಡಿಸಬೇಕು

ಸಿ.ಸಿ. ಪಾಟೀಲ,
ಶಾಸಕ

'ಗೃಹಲಕ್ಷ್ಮಿ ನಕಲು ಮಾಡಿ ಗೆಲುವು'

ಪ್ರಜಾವಾಣಿ ವಾರ್ತೆ

ಕನಕಪುರ (ರಾಮನಗರ): 'ಮಹಾರಾಷ್ಟ್ರದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ನೇತೃತ್ವದ ಸರ್ಕಾರ ನಮ್ಮ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿಯನ್ನು ನಕಲು ಮಾಡಿ, 'ಮಾಝಿ ಲಡಕಿ ಬಹೀನ್ ಯೋಜನಾ' ಹೆಸರಿನಲ್ಲಿ ₹1,500 ಕೊಟ್ಟಿತು. ಹಾಗಾಗಿ, ವಿಧಾನಸಭಾ ಚುನಾವಣೆಯಲ್ಲಿ ಮಹಾಯುತಿ ಮೈತ್ರಿಕೂಟ ಗೆಲುವು ಸಾಧಿಸಲು ಸಾಧ್ಯವಾಯಿತು' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.



ಡಿ.ಕೆ. ಶಿವಕುಮಾರ್

ಪಟ್ಟಣದಲ್ಲಿ ಭಾನುವಾರ ನಡೆದ ಕನಕಾಂಬರಿ ಮಹಿಳಾ ಒಕ್ಕೂಟದ ಮಹಿಳಾ ಜಾಗೃತಿ ಸಮಾವೇಶದಲ್ಲಿ ಮಾತನಾಡಿದ ಅವರು, 'ಚುನಾವಣೆ ಸಂದರ್ಭದಲ್ಲಿ ನಾವು ಸಹ ಮಹಾಲಕ್ಷ್ಮಿ ಯೋಜನೆ ಹೆಸರಿನಲ್ಲಿ ಮಹಿಳೆಯರಿಗೆ ₹3ಸಾವಿರ ಕೊಡುವ ಭರವಸೆ ನೀಡಿದ್ದೆವು. ಆದರೆ, ಅಲ್ಲಿನ ಸರ್ಕಾರ ಚುನಾವಣೆಗೆ ಆರು ತಿಂಗಳು ಮುಂಚಿತವಾಗಿ ಹಣ ನೀಡಿದ್ದರಿಂದ ನಮಗಿಂತ ಹೆಚ್ಚು ಮತಗಳು ಅವರಿಗೆ ಬಂದವು' ಎಂದರು.

ಕಳೆದುಕೊಂಡಲ್ಲೇ ಹುಡುಕುವೆ –ನಿಖಿಲ್

ಚನ್ನಪಟ್ಟಣ (ರಾಮನಗರ): 'ನಾನು ಎಲ್ಲಿ ಕಳೆದುಕೊಂಡಿದ್ದೇನೋ ಅಲ್ಲಿಯೇ ಹುಡುಕುತ್ತೇನೆ. ನನ್ನ ಮುಂದಿನ ರಾಜಕೀಯ ಇಲ್ಲಿಯೇ ಮುಂದುವರಿಸುತ್ತೇನೆ. ಕ್ಷೇತ್ರದಲ್ಲಿ ಪಕ್ಷದ ಮೇಲೆ ದೊಡ್ಡ ಮಟ್ಟದ ಅಭಿಮಾನವಿದೆ. ಪಕ್ಷದ ಕಾರ್ಯಕರ್ತರೊಂದಿಗೆ ನಾನು ಸದಾ ಇರುತ್ತೇನೆ' ಎಂದು ನಿಖಿಲ್ ಕುಮಾರಸ್ವಾಮಿ ಹೇಳಿದರು.



ತಮ್ಮ ಸೋಲಿನ ಆಘಾತದಿಂದ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ ತಾಲ್ಲೂಕಿನ ಶ್ರೀರಾಂಪುರ ಗ್ರಾಮದ ಮಂಜುನಾಥ್ ಮನೆಗೆ ಭಾನುವಾರ ಭೇಟಿ ನೀಡಿ ಆರೋಗ್ಯ ವಿಚಾರಿಸಿದ ಬಳಿಕ ಮಾಧ್ಯಮದವರ ಜತೆ ಮಾತನಾಡಿದರು.

'ಚುನಾವಣೆ ಎರಡು ದಿನ ಇದ್ದಾಗ ರಾಜ್ಯ ಸರ್ಕಾರ ಮಹಿಳೆಯರ ಬ್ಯಾಂಕ್ ಖಾತೆಗೆ ಗೃಹಲಕ್ಷ್ಮಿ ಹಣ ಪಾವತಿಸಿದೆ. ಇದನ್ನು ಚುನಾವಣಾ ಆಯೋಗ ಗಮನಿಸಬೇಕು. ಸರ್ಕಾರದ ಹಣವನ್ನು ಚುನಾವಣೆ ವೇಳೆ ಹಾಕುತ್ತಾರೆ. ಮುಂದೆ ಅವುಗಳನ್ನು ಆಧರಿಸಿ ಹೋರಾಡುತ್ತೇವೆ' ಎಂದರು.

'ಸೋತಿದ್ದೇನೆ ಎಂದು ಮನೆಯಲ್ಲಿ ಕೂರುವ ಜಾಯಮಾನ ನನ್ನದಲ್ಲ. ಚುನಾವಣೆ ಹೋರಾಟ ನನಗೆ ಹೊಸದಲ್ಲ. ನಮ್ಮ ಪಕ್ಷಕ್ಕಾಗಿ ಹೋರಾಡುವ ಕಿಚ್ಚನ್ನು ನಾನು ರೂಢಿಸಿಕೊಂಡಿದ್ದೇನೆ. ಕಾಂಗ್ರೆಸ್ ನಡವಳಿಕೆ ಸರ್ಕಾರದ ವೈಫಲ್ಯ ಬಗ್ಗೆ ಜನರಲ್ಲಿ ನಿರಂತರವಾಗಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಹೋರಾಟ ಮಾಡುತ್ತೇನೆ' ಎಂದರು.

'ಮುಸ್ಲಿಮರಿಗೆ ನಮ್ಮ ಅವಶ್ಯ ಇಲ್ಲವಾಗಿದೆ': 'ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿದ್ದಕ್ಕೆ ಮುಸ್ಲಿಮರ ಮತಗಳು ದೂರವಾದವೇ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ನಿಖಿಲ್, 'ಈ ಚುನಾವಣೆಯಲ್ಲಿ ಒಂದು ಸಮುದಾಯದ ಮತಗಳನ್ನು ಹೊರತುಪಡಿಸಿ ಉಳಿದಂತೆ ಹೆಚ್ಚಿನ ಮತಗಳು ಬಂದಿವೆ. ಮಾಜಿ ಪ್ರಧಾನಿ ಎಚ್‌.ಡಿ.ದೇವೇಗೌಡರು ನೀಡಿದ ಕೊಡುಗೆಯನ್ನು ಅವರು ನೆನಪಿಸಿಕೊಂಡಿಲ್ಲ. ನಮ್ಮ ಅವಶ್ಯ ಅವರಿಗೆ ಇಲ್ಲ ಅನಿಸುತ್ತದೆ. ಇನ್ನು ಮುಂದೆ ಅವರನ್ನು ಬಿಟ್ಟು ರಣತಂತ್ರ ಮಾಡಬೇಕಾಗುತ್ತದೆ' ಎಂದರು.

ಚಾಮುಂಡೇಶ್ವರಿಗೆ ಚಿನ್ನದ ರಥ: ಪ್ರಸ್ತಾವಕ್ಕೆ ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡದೇವಿ ಮೈಸೂರಿನ ಚಾಮುಂಡೇಶ್ವರಿಗೆ ಚಿನ್ನದ ರಥ ನಿರ್ಮಿಸುವ ಸಂಬಂಧ ಪರಿಶೀಲಿಸಿ, ತಕ್ಷಣ ಪ್ರಸ್ತಾವ ಸಲ್ಲಿಸುವಂತೆ ಕಂದಾಯ ಇಲಾಖೆಯ ಧಾರ್ಮಿಕ ದತ್ತಿ ವಿಭಾಗದ ಪ್ರಧಾನ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದಾರೆ.

ಚಿನ್ನದ ರಥ ನಿರ್ಮಿಸಬೇಕೆಂಬ ಭಕ್ತರ ಬೇಡಿಕೆ, ಸಂಕಲ್ಪದ ಕುರಿತು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದರು.

'ಚಾಮುಂಡೇಶ್ವರಿ ದೇವಿ ಕನ್ನಡ ನಾಡಿನ ಅಸ್ಮಿತೆ. ಕನ್ನಡಿಗರ ಧಾರ್ಮಿಕ ಪ್ರತಿನಿಧಿ. ಮೈಸೂರಿನ ಚಾಮುಂಡಿ ಬೆಟ್ಟಕ್ಕೆ, ದೇವಸ್ಥಾನಕ್ಕೆ, ದೇವಿಗೆ ಪೌರಾಣಿಕ, ಐತಿಹಾಸಿಕ ಹಿನ್ನೆಲೆಯಿದೆ. ನಾಡದೇವಿಯನ್ನು ಚಿನ್ನದ ರಥದಲ್ಲಿ ಕೂರಿಸಿ ಮೆರೆಸಬೇಕೆಂಬುದು ಭಕ್ತರ ಬೇಡಿಕೆ. ಚಿನ್ನದ ರಥ ನಿರ್ಮಾಣಕ್ಕೆ ಬೇಕಾದ ಅಂದಾಜು ವೆಚ್ಚದ ಪ್ರಸ್ತಾವವನ್ನು ಸರ್ಕಾರ ತಯಾರಿಸಬೇಕು. ಈ ಉದ್ದೇಶಕ್ಕೆ ದೇವಸ್ಥಾನದಲ್ಲಿ ಪ್ರತ್ಯೇಕ ಹುಂಡಿ ಇಡಬೇಕು. ಸಂಗ್ರಹವಾದ ಕಾಣಿಕೆಗಿಂತ ಹೆಚ್ಚಿಗೆ ಬೇಕಾಗುವ ಹಣವನ್ನು ಸರ್ಕಾರ ಭರಿಸಬೇಕು ಎಂದು ಮುಖ್ಯಮಂತ್ರಿಯನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದೆ. ಅದಕ್ಕೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದು ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

'ದೇವಸ್ಥಾನದಲ್ಲಿರುವ ಈಗಿನ ಮರದ ರಥವನ್ನು 1982ರಲ್ಲಿ ಕೊಯಮುತ್ತೂರಿನ ಭಕ್ತಾದಿಗಳು ಮಾಡಿಸಿದ್ದರು ಎನ್ನಲಾಗುತ್ತದೆ. ಹಾಲಿ ರಥವೂ ಶಿಥಿಲವಾಗುತ್ತ ಬಂದಿದೆ. ಹೀಗಾಗಿ, ಹೊಸ ಚಿನ್ನದ ರಥ ನಿರ್ಮಿಸಿ, ಚಾಮುಂಡಿ ದೇವಿಯ ರಥೋತ್ಸವ ಮಾಡಬೇಕು ಎಂಬುದು ಭಕ್ತರ ಸಂಕಲ್ಪ. ಹೊಸ ಚಿನ್ನದ ರಥ ನಿರ್ಮಿಸುವ ಪ್ರಸ್ತಾವ ಈ ಹಿಂದೆಯೇ ಬಂದಿತ್ತು. ಅದಕ್ಕೆ ಸುಮಾರು ₹100 ಕೋಟಿ ಬೇಕಾಗಬಹುದು ಎಂದೂ ಅಂದಾಜು ಮಾಡಲಾಗಿತ್ತು. ಆದರೆ, ವಿವಿಧ ಕಾರಣಗಳಿಂದ ಈಡೇರಿಲ್ಲ. ಮುಂದಿನ ದಸರಾದ ಒಳಗಡೆ ರಥ ನಿರ್ಮಿಸಿ, ರಥೋತ್ಸವ ಮಾಡಬೇಕು ಎಂಬುದು ಭಕ್ತರ ಬೇಡಿಕೆ ಎಂದು ಮನವಿಯಲ್ಲಿ ವಿವರಿಸಿದ್ದೆ' ಎಂದು ದಿನೇಶ್ ಅವರು ತಿಳಿಸಿದ್ದಾರೆ.

ಚುನಾವಣೆಯಲ್ಲಿ ಹಣ ಹಂಚಿಕೆ ಕುರಿತು ಬಿ.ಕೆ.ಹರಿಪ್ರಸಾದ್ ಹೇಳಿಕೆ

ಬಿಜೆಪಿಗೆ ಪೈಪೋಟಿ ನೀಡಿದ ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಮಂಗಳೂರು: 'ಕರ್ನಾಟಕದಲ್ಲಿ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿಯವರು ಯಾವ ರೀತಿ ಪೈಪೋಟಿ ನೀಡಿದ್ದಾರೋ ಅದಕ್ಕೆ ಸರಿಯಾದ ಪೈಪೋಟಿಯನ್ನು ನಾವೂ ನೀಡಿದ್ದೇವೆ. ಅದು ಹಣ, ಹೆಂಡ ಅಥವಾ ಇನ್ನಾವುದೇ ಬಗೆಯಲ್ಲೂ ಇರಬಹುದು' ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಇಲ್ಲಿ ಹೇಳಿದರು.



ಬಿ.ಕೆ. ಹರಿಪ್ರಸಾದ್

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, 'ಬಿಜೆಪಿಯವರು ಹಣದಲ್ಲಿ ನಮ್ಮನ್ನು ಸೋಲಿಸಲು ಪ್ರಯತ್ನಿಸಿದ್ದಾರೆ ಎಂದಾಗ ನಮ್ಮ ಆಡಳಿತ ಸುಮ್ಮನಿರಲಿಲ್ಲ. ಅವರು ಹಣ ಖರ್ಚು ಮಾಡಿದಾಗ ನಾವೇನು ಸತ್ಯಹರಿಶ್ಚಂದ್ರ, ಸನ್ಯಾಸಿಗಳಂತೆ ಇರಲಿಲ್ಲ. ನಾವು ನಾಟಕ, ಬೂಟಾಟಿಕೆ ಮಾಡುವ ಜನವೂ ಅಲ್ಲ. ಇದ್ದುದನ್ನು ಇದ್ದ ಹಾಗೆ ಹೇಳುತ್ತೇವೆ. ಅವರಿಗೆ ಸರಿಯಾದ ರೀತಿ ಪೈಪೋಟಿ, ಸರಿಯಾದ ಉತ್ತರ ನೀಡಿದ್ದೇವೆ. ಅಲ್ಪಸಂಖ್ಯಾತರು ಹೆಚ್ಚಾಗಿರುವ ಶಿಗ್ಗಾವಿ, ಚನ್ನಪಟ್ಟಣದಲ್ಲಿ ಹಾಗೂ ಆದಿವಾಸಿ ಸಮುದಾಯದವರು ಇರುವ ಸಂಡೂರಿನ ಜನ ಹಣಕ್ಕೆ ಒತ್ತು ನೀಡದೆ ಶಾಂತಿಗೆ ಆದ್ಯತೆ ನೀಡಿದ್ದಾರೆ' ಎಂದರು.

'ಈ ಬಾರಿ ನಡೆದ ಉಪಚುನಾವಣೆಗೆ ಕರ್ನಾಟಕದಲ್ಲೂ ಎಲ್ಲ ಪಕ್ಷದವರು ಪೈಪೋಟಿಗೆ ಬಿದ್ದು ಹಣ ಖರ್ಚು ಮಾಡಿದ್ದಾರೆ. ಆದರೆ, ಜನ ಅದನ್ನು ತಿರಸ್ಕರಿಸಿದ್ದಾರೆ. ಗ್ಯಾರಂಟಿಗಳನ್ನು ಅನುಷ್ಠಾನಕ್ಕೆ ತಂದು ಸಾಮಾಜಿಕ ಸುರಕ್ಷತೆ ನೀಡಿದ್ದರಿಂದ, ಕೋಮು ಗಲಭೆ, ವೈಷಮ್ಯ, ದ್ವೇಷ ಸಾಧನೆಗೆ ಅವಕಾಶ ನೀಡದೆ ಇದ್ದುದರಿಂದ ಕಾಂಗ್ರೆಸ್ ಪಕ್ಷವನ್ನು ಅವರು ಬೆಂಬಲಿಸಿದ್ದಾರೆ. ಈ ಮೂಲಕ ಬಿಜೆಪಿಯವರಿಗೆ ಸರಿಸಮಾನವಾಗಿ ನಾವೂ ಪೈಪೋಟಿ ನೀಡಿದ್ದೇವೆ' ಎಂದರು.

'ಮಹಾರಾಷ್ಟ್ರದ ಚುನಾವಣೆಗೆ ಕಂಟೈನರ್‌ನಲ್ಲಿ ಹಣ ಬಂದಿತ್ತು. ಯಂತ್ರದಲ್ಲಿ ಎಣಿಸಲಾಗದಷ್ಟು, ತೂಕ ಹಾಕಿ ಹಣವನ್ನು ತುಂಬಿಕೊಂಡು ಬಂದಿದ್ದಾರೆ. ಯಥೇಚ್ಛವಾಗಿ ಹಣದ ಹೊಳೆ ಹರಿಸಿದ್ದರಿಂದ ಹಿನ್ನಡೆ ಆಗಿದೆ. ದಲಿತ, ಮರಾಠ, ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಮಹಾರಾಷ್ಟ್ರದಲ್ಲಿ ಬಿಜೆಪಿ ಮೈತ್ರಿಕೂಟ ಗೆದ್ದಿರುವುದನ್ನು ನೋಡಿದರೆ ಸಂಶಯ ಬರುತ್ತದೆ' ಎಂದರು.

ಬಹಳಷ್ಟು ಕಡೆ ಇವಿಎಂ ತಿರುಚಲಾಗಿದೆ- ಪರಮೇಶ್ವರ

ಬೆಂಗಳೂರು: 'ಬಹಳಷ್ಟು ಕಡೆಗಳಲ್ಲಿ ವಿದ್ಯುನ್ಮಾನ ಮತ ಯಂತ್ರ (ಇವಿಎಂ) ತಿರುಚಲಾಗಿದೆ. ಯಾವ ಸಂದರ್ಭದಲ್ಲಿ, ಯಾವ ರಾಜ್ಯದಲ್ಲಿ ಮತ್ತು ಯಾವ ಕ್ಷೇತ್ರದಲ್ಲಿ ಇವಿಎಂ ತಿರುಚಬೇಕು ಎನ್ನುವುದನ್ನು ಬಿಜೆಪಿಯರು ಕಾರ್ಯಯೋಜನೆ ಮಾಡಿಕೊಂಡಿದ್ದಾರೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ದೂರಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಜಾರ್ಖಂಡ್‌ನಲ್ಲಿ ಇವಿಎಂ ಯಾಕೆ ತಿರುಚಿಲ್ಲವೆಂದರೆ, ಕೆಲವು ಕಡೆ ಬಿಟ್ಟು ಬಿಡುತ್ತಾರೆ. ಗೆದ್ದೇ ಗೆಲ್ಲುತ್ತೇವೆ ಎನ್ನುವ ಕ್ಷೇತ್ರಗಳನ್ನು ಬಿಟ್ಟು, ಬೇರೆ ಕ್ಷೇತ್ರಗಳಲ್ಲಿ ಈ ಕೃತ್ಯ ಮಾಡುತ್ತಾರೆ' ಎಂದು ಹೇಳಿದರು.

'ಹ್ಯಾಕ್ ಮಾಡುವುದರಲ್ಲಿ ಬಿಜೆಪಿಗರು ನಿಪುಣರು. ಜಾರ್ಖಂಡ್‌ನಲ್ಲಿ ಜೆಎಂಎಂ ಪಕ್ಷದಿಂದ ತಮಗೆ ಏನೂ ತೊಂದರೆ ಇಲ್ಲ ಎಂಬ ಕಾರಣದಿಂದ ಬಿಟ್ಟರು. ಕಾಂಗ್ರೆಸ್ ಅಧಿಕಾರಕ್ಕೆ ಬರುವಂತಿದ್ದರೆ ಅಲ್ಲೂ ತಿರುಚುತ್ತಿದ್ದರು' ಎಂದರು.

'ಬಹಳ ಬುದ್ಧಿ ಉಪಯೋಗಿಸಿ ಇವಿಎಂ ಹ್ಯಾಕ್ ಮಾಡುತ್ತಾರೆ. ನಮ್ಮ ರಾಜ್ಯದಲ್ಲಿ ಯಡಿಯೂರಪ್ಪ ಬಳಿಕ ಬಿಜೆಪಿಯಲ್ಲಿ ದೊಡ್ಡ ನಾಯಕತ್ವ ಇರಲಿಲ್ಲ. ಅದಕ್ಕೇ ತಿರುಚುವುದನ್ನು ಬಿಟ್ಟರು. ಒಂದು ರಾಜ್ಯ ಬಿಟ್ಟು ಬಿಡುತ್ತಾರೆ. ಆಗ ಇವಿಎಂ ಹ್ಯಾಕ್ ಮಾಡುವುದಿಲ್ಲವೆಂಬ ನಂಬಿಕೆ ಬರುತ್ತದೆ' ಎಂದು ಹೇಳಿದರು.

'ಕಳೆದ 15 ವರ್ಷಗಳಿಂದ ಇವಿಎಂ ಬೇಡ ಎನ್ನುತ್ತಿದ್ದೇವೆ. ಈ ಬಗ್ಗೆ ಚಿದಂಬರಂ, ಕಪಿಲ್ ಸಿಬಲ್, ಜೈರಾಂ ರಮೇಶ್ ನೇತೃತ್ವದ ಎಐಸಿಸಿ ಸಮಿತಿ ಚುನಾವಣೆ ಆಯೋಗಕ್ಕೆ ಮನವಿಯನ್ನೂ ಸಲ್ಲಿಸಿದೆ. ತಾಂತ್ರಿಕವಾಗಿ ಹ್ಯಾಕ್ ಮಾಡಲು ಸಾಧ್ಯವಿದೆ ಎಂಬುದನ್ನೂ ತೋರಿಸಲಾಗಿದೆ. ಅಮೆರಿಕ, ಯುರೋಪ್ ಸೇರಿದಂತೆ ಬೇರೆ ದೇಶಗಳಲ್ಲಿ ಮತ ಪತ್ರ ಬಳಸುತ್ತಿದ್ದಾರೆ. ಮತ ಪತ್ರ ಬಳಕೆಗೆ ತೊಂದರೆ ಏನು? ಎಲ್ಲಿವರೆಗೆ ನಮ್ಮ ದೇಶದಲ್ಲಿ ಇವಿಎಂ ಇರುತ್ತದೆಯೊ ಅಲ್ಲಿಯವರೆಗೆ ಕಾಂಗ್ರೆಸ್ ಅಥವಾ ಇತರ ಪಕ್ಷ ಅಧಿಕಾರಕ್ಕೆ ಬರುವುದು ಕಷ್ಟ ಎಂಬ ಮಾತು ಚರ್ಚೆಯಲ್ಲಿದೆ' ಎಂದರು.

ಕಿರು ಅರಣ್ಯ ಉತ್ಪತ್ತಿ ಸಂಗ್ರಹಣೆ ಬಿಟ್ಟು ಕೂಲಿ ಕೆಲಸಗಳತ್ತ ಚಿತ್ತ ಹರಿಸಿದ ಅಡವಿ ಮಕ್ಕಳು

ಮಲೆಕುಡಿಯರ ಶ್ರಮ, ವ್ಯಾಪಾರಿಗೆ ಲಾಭ

• ನವೀನ್ ಕುಮಾರ್ ಜಿ.

ಉಡುಪಿ: ಕಾಡಂಚಿನಲ್ಲಿ ಬದುಕು ಕಟ್ಟಿಕೊಂಡಿರುವ ಮಲೆಕುಡಿಯ ಸಮುದಾಯದವರು ಜೀವನಕ್ಕಾಗಿ ತಲೆತಲಾಂತರದಿಂದ ಕಿರು ಅರಣ್ಯ ಉತ್ಪತ್ತಿ ಸಂಗ್ರಹಣೆಯನ್ನು ಆಶ್ರಯಿಸಿದವರಾದರೂ ಅವರ ಶ್ರಮದ ಲಾಭ ವ್ಯಾಪಾರಿಗಳ ಪಾಲಾಗುತ್ತಿದೆ.

ರಾಮಪತ್ರೆ, ದಾಲ್ಚೀನಿ, ಮಂತುಹುಳಿ, ಕರಿಮೆಣಸು, ಜೇನು ಮೊದಲಾದವುಗಳನ್ನು ಸಂಗ್ರಹಿಸಬೇಕಾದರೆ ಮಲೆಕುಡಿಯರು ಬಹಳ ಶ್ರಮ ವಹಿಸಬೇಕಾಗುತ್ತದೆ. ಎತ್ತರದ ಮರಗಳಿಗೆ ಹತ್ತಿ ಜೀವ ಪಣಕ್ಕಿಟ್ಟು ಸಂಗ್ರಹಿಸುವ ಈ ಉತ್ಪನ್ನಗಳನ್ನು ಸ್ಥಳೀಯ ವ್ಯಾಪಾರಿಗಳಿಗೆ ಮಾರಿದರೆ ಅರ್ಧಕ್ಕರ್ಧ ಬೆಲೆ ಮಾತ್ರ ಸಿಗುತ್ತಿದೆ ಎಂಬುದು ಅವರ ಅಳಲು.

ನಕ್ಸಲ್ ನಾಯಕ ವಿಕ್ರಂ ಗೌಡ ಎನ್‌ಕೌಂಟರ್ ನಡೆದ ಹೆಬ್ರಿ ತಾಲ್ಲೂಕಿನ ನಾಡ್ಪಾಲು ಗ್ರಾಮದ ಪೀತುಬೈಲು ಪರಿಸರದಲ್ಲಿ ವಾಸಿಸುವ ಮಲೆಕುಡಿಯ ಸಮುದಾಯದವರಲ್ಲಿ ಈಗಲೂ ಕೆಲವರು ಕಿರು ಅರಣ್ಯ ಉತ್ಪತ್ತಿಯನ್ನು ನಂಬಿ ಜೀವನ ಸಾಗಿಸುತ್ತಿದ್ದಾರೆ. ಜೀವನ ನಿರ್ವಹಣೆ, ಮಕ್ಕಳ ಶಿಕ್ಷಣ ಸೇರಿದಂತೆ ಎಲ್ಲದಕ್ಕೂ ಈ ಸಮುದಾಯದವರು ಅರಣ್ಯ ಉತ್ಪನ್ನಗಳನ್ನು ಆಶ್ರಯಿಸಿದ್ದರು. ಕೆಲವರು ಬುಟ್ಟಿ ಹೆಣೆಯುವ ಕಾಯಕವನ್ನೂ ನಡೆಸುತ್ತಿದ್ದರು. ಇತ್ತೀಚೆಗೆ ಕೆಲವರಷ್ಟೇ ಅಲ್ಪ ಸ್ವಲ್ಪ ಕೃಷಿಯ ಕಡೆಗೆ ಹೊರಳಿದ್ದಾರೆ.

'ಹಿಂದೆ ಮಧ್ಯವರ್ತಿಗಳು ಮನೆ ಮನೆಗೆ ಬಂದು ಕಾಡುತ್ಪನ್ನಗಳನ್ನು ಸಂಗ್ರಹಿಸಿ ಹೋಗುತ್ತಿದ್ದರು, ಆಗ ಕಡಿಮೆ ದರ ಕೊಡುತ್ತಿದ್ದರು. ಅನಂತರ ನಾವೇ ವ್ಯಾಪಾರಿಗಳಿಗೆ ನೇರವಾಗಿ ಮಾರಾಟ ಮಾಡಲು ಆರಂಭಿಸಿದೆವು ಆದರೂ ನ್ಯಾಯಯುತ ಬೆಲೆ ನಮಗೆ ಸಿಗುತ್ತಿಲ್ಲ' ಎಂದು ಈ ಸಮುದಾಯದ ಕೆಲವು ಹಿರಿಯರು ಅಳಲು ತೋಡಿಕೊಳ್ಳುತ್ತಾರೆ.

> **ಮಲೆಕುಡಿಯರು ಸಂಗ್ರಹಿಸುವ ಕಿರು ಅರಣ್ಯ ಉತ್ಪನ್ನಗಳಿಗೆ ಸರಿಯಾದ ಬೆಲೆ ಸಿಗದ ಕಾರಣ ಹೆಚ್ಚಿನವರು ಈಗ ಅಡಿಕೆ ತೋಟಗಳಿಗೆ ಕೆಲಸಕ್ಕೆ ಹೋಗುತ್ತಾರೆ**
> **ಲಕ್ಷ್ಮಿನಾರಾಯಣ ಗೌಡ,** ಕುಚ್ಚೂರು ನಿವಾಸಿ

ಮಲೆಕುಡಿಯರಲ್ಲಿ ಕಾಡಂಚಿನಲ್ಲಿ ವಾಸಿಸುವವರು ಮಾತ್ರ ಈಗ ಕಾಡುತ್ಪತ್ತಿ ಸಂಗ್ರಹಿಸುವ ಕಾಯಕ ನಡೆ ಸುತ್ತಿದ್ದಾರೆ. ಉಳಿದಂತೆ ಹೆಬ್ರಿ ಪರಿಸರದಲ್ಲಿ ವಾಸಿಸುವ ಹೆಚ್ಚಿನವರು ಅಡಿಕೆ ತೋಟದ ಕೆಲಸವನ್ನೇ ನೆಚ್ಚಿಕೊಂಡಿದ್ದಾರೆ. ಈ ಕೆಲಸಕ್ಕಾಗಿ ದಿನನಿತ್ಯ ಆರೇಳು ಕಿ.ಮೀ. ನಡೆದು ಹೋಗುವವರೂ ಕಬ್ಬಿನಾಲೆ ಪ್ರದೇಶದಲ್ಲಿದ್ದಾರೆ.

'ನಕ್ಸಲರ ವಿಚಾರ ಬಂದಾಗ ಮಾತ್ರ ನಮ್ಮ ಸಂಕಷ್ಟಗಳ ಬಗ್ಗೆ ಚರ್ಚೆಯಾಗುತ್ತದೆ. ಬಳಿಕ ಎಲ್ಲರೂ ನಮ್ಮನ್ನು ಮರೆತು ಬಿಡುತ್ತಾರೆ. ನಮ್ಮ ಯಾವುದೇ ಬೇಡಿಕೆ ಈಡೇರಿಕೆ ಆಗಿಲ್ಲ' ಎನ್ನುತ್ತಾರೆ ಕುಚ್ಚೂರು ನಿವಾಸಿ ಲಕ್ಷ್ಮಿನಾರಾಯಣ ಗೌಡ.

'ನಮ್ಮವರು ಸಂಗ್ರಹಿಸುವ ಕಿರು ಅರಣ್ಯ ಉತ್ಪನ್ನಗಳನ್ನು ಸರ್ಕಾರವೇ ಬೆಂಬಲ ಬೆಲೆಯಲ್ಲಿ ಖರೀದಿಸುವ ಮೂಲಕ ಜನರಿಗೆ ಅನುಕೂಲ ಮಾಡಿಕೊಡಬೇಕು' ಎಂದು ಆಗ್ರಹಿಸುತ್ತಾರೆ ಉಡುಪಿ ಜಿಲ್ಲಾ ಮಲೆಕುಡಿಯ ಸಂಘದ ಅಧ್ಯಕ್ಷ ಗಂಗಾಧರ ಗೌಡ.

'ಅರಣ್ಯವಾಸಿಗಳು ಸಂಗ್ರಹಿಸುವ ಕಿರು ಅರಣ್ಯ ಉತ್ಪನ್ನಗಳಿಗೆ ಸರಿಯಾದ ಬೆಲೆ ಲಭಿಸುವುದಿಲ್ಲ. ಮೇ, ಜೂನ್, ಜುಲೈ ತಿಂಗಳಲ್ಲಿ ಮಾತ್ರ ಜೇನು ಸಿಗುತ್ತದೆ. ಜೂನ್, ಜುಲೈ ತಿಂಗಳಲ್ಲಿ ಘಾಟಿ ರಾಮಪತ್ರೆ ಸಂಗ್ರಹಿಸಿದರೆ, ಊರಿನ ರಾಮಪತ್ರೆಯನ್ನು ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಸಂಗ್ರಹಿಸ ಲಾಗುತ್ತದೆ' ಎನ್ನುತ್ತಾರೆ ಅವರು.

'ಮುಂಬೈ ಮತ್ತು ಗುಜರಾತ್‌ನಲ್ಲಿ ರಾಮಪತ್ರೆಗೆ ಕೆ.ಜಿ.ಗೆ ₹2,000ದವರೆಗೆ ದರ ಇದೆ. ನಮ್ಮಿಂದ ಕೆ.ಜಿ.ಗೆ ₹800ಕ್ಕೆ ಖರೀದಿಸುವ ವ್ಯಾಪಾರಿಗಳು ಅದನ್ನು ಅಲ್ಲಿಗೆ ಕಳುಹಿಸುತ್ತಾರೆ. ಜೇನು ತುಪ್ಪವನ್ನು ನಮ್ಮಿಂದ ಕೆ.ಜಿ.ಗೆ ₹500ಕ್ಕೆ ಖರೀದಿಸಲಾಗುತ್ತದೆ' ಎಂದೂ ಅವರು ವಿವರಿಸಿದರು.

'ನಮ್ಮಲ್ಲಿ ಉನ್ನತ ಶಿಕ್ಷಣ ಪಡೆದವರ ಸಂಖ್ಯೆ ಬಹಳ ಕಡಿಮೆ. ಕಲಿತವರಿಗೂ ಸರ್ಕಾರಿ ನೌಕರಿ ಸಿಗದಿರುವುದರಿಂದ ಕೆಲವರು ಕಲಿಕೆಯ ಕಡೆಗೆ ಆಸಕ್ತಿ ವಹಿಸಿಲ್ಲ. ರಸ್ತೆ ಸೇರಿದಂತೆ ಮೂಲ ಸೌಕರ್ಯಗಳು ಇಲ್ಲದ ಕಾರಣ ಹಲವರು ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿದ್ದಾರೆ. ಉಡುಪಿ ಜಿಲ್ಲೆಯಲ್ಲಿ ನಮ್ಮ ಸಮುದಾಯದವರಲ್ಲಿ ಪದವಿ ಪೂರ್ಣಗೊಳಿಸಿರುವವರು 20ರಿಂದ 25 ಮಂದಿ ಇರಬಹುದು ಅಷ್ಟೇ. ಸ್ನಾತಕೋತ್ತರ ಪದವಿ ಪಡೆದವರು 10 ಮಂದಿ ಇರಬಹುದು. ಜಿಲ್ಲೆಯಲ್ಲಿ ನಮ್ಮವರ ಜನಸಂಖ್ಯೆ ಅಂದಾಜು 2,500 ಇರಬಹುದು' ಎನ್ನುತ್ತಾರೆ ಗಂಗಾಧರ ಗೌಡ.

ಚಿಕಿತ್ಸೆಗೆ ಕಷ್ಟ: ಕಬ್ಬಿನಾಲೆ ಮತ್ತು ಹೆಬ್ರಿಯಲ್ಲಿ ಆಸ್ಪತ್ರೆಗಳಿದ್ದರೂ ಹೆಚ್ಚಿನ ಚಿಕಿತ್ಸೆಗೆ ಉಡುಪಿಯ ಜಿಲ್ಲಾ ಆಸ್ಪತ್ರೆಯನ್ನೇ ಆಶ್ರಯಿಸಬೇಕಾದ ಪರಿಸ್ಥಿತಿ ನಮ್ಮದು. ಆದ್ದರಿಂದ ಕಬ್ಬಿನಾಲೆ ಮತ್ತು ಹೆಬ್ರಿ ಯಲ್ಲಿರುವ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಬೇಕು ಎಂದು ಆಗ್ರಹಿಸುತ್ತಾರೆ ಲಕ್ಷ್ಮಿನಾರಾಯಣ ಗೌಡ.


ಪೀತುಬೈಲು ದಟ್ಟಾರಣ್ಯದ ನಡುವೆ ಇರುವ ಮಲೆಕುಡಿಯ ಸಮುದಾಯದವರ ಮನೆ

ದಟ್ಟಾರಣ್ಯದ ನಡುವೆ ಒಂಟಿ ಜೀವನ

ನಕ್ಸಲ್ ಎನ್‌ಕೌಂಟರ್ ನಡೆದಿರುವ ಪೀತುಬೈಲಿನ ಹಾದಿಯಲ್ಲಿ ದಟ್ಟ ಅರಣ್ಯದಿಂದ ಆವೃತವಾಗಿರುವ ತಿಂಗಳಮಕ್ಕಿ ಎಂಬಲ್ಲಿ ಅಂಗವಿಕಲರಾಗಿರುವ ಲಕ್ಷ್ಮಣ ಗೌಡ ಎಂಬುವವರು ಪುಟ್ಟ ಮನೆಯಲ್ಲಿ ಏಕಾಂಗಿ ಜೀವನ ನಡೆಸುತ್ತಿದ್ದಾರೆ.

'ಪೋಲಿಯೊ ಬಾಧಿಸಿ ನನ್ನ ಕಾಲುಗಳು ಬಲಹೀನವಾಗಿವೆ. ಅಂಗವಿಕಲನಾಗಿರುವ ಕಾರಣಕ್ಕೆ ಸರ್ಕಾರದಿಂದ ತಿಂಗಳಿಗೆ ₹1,400 ಬರುತ್ತದೆ. ಇದು ಜೀವನ ನಿರ್ವಹಣೆಗೆ ಸಾಕಾಗುವುದಿಲ್ಲ' ಎನ್ನುತ್ತಾರೆ ಲಕ್ಷ್ಮಣ ಗೌಡ.

'ಸರ್ಕಾರವು ಮನೆ ನಿರ್ಮಿಸಿ ಕೊಟ್ಟಿದೆ. ಸೋಲಾರ್ ವ್ಯವಸ್ಥೆ ಕೂಡ ಮಾಡಿಕೊಟ್ಟಿದೆ. ಇನ್ನಷ್ಟು ಸಹಾಯ ಲಭಿಸಿದರೆ ಅನುಕೂಲವಾಗ ಬಹುದು' ಎನ್ನುತ್ತಾರೆ ಅವರು.

'ನನಗೆ ಎಲ್ಲಿಗಾದರೂ ಹೋಗಬೇಕಾದರೆ ಅಣ್ಣನ ಮಕ್ಕಳು ಬಂದು ಬೈಕ್‌ನಲ್ಲಿ ಕರೆದುಕೊಂಡು ಹೋಗುತ್ತಾರೆ. ಮುಖ್ಯವಾಗಿ ಈ ಪ್ರದೇಶಕ್ಕೆ ಕಾಂಕ್ರಿಟ್ ರಸ್ತೆ ಮಾಡಿದರೆ ನಮ್ಮಂಥವರಿಗೆ ತುಂಬ ಅನುಕೂಲವಾಗಲಿದೆ' ಎಂದೂ ಹೇಳಿದರು.


ಲಕ್ಷ್ಮಣ ಗೌಡ

'ಗಂಗಾವತಿ ರೈಲುನಿಲ್ದಾಣಕ್ಕೆ ಅಂಜನಾದ್ರಿ ಹೆಸರು'

ಬೆಂಗಳೂರು: 'ಕೊಪ್ಪಳ ಜಿಲ್ಲೆಯ ಗಂಗಾವತಿ, ಮುನಿರಾಬಾದ್ ಮತ್ತು ಬಾನಾಪುರ ರೈಲ್ವೆ ನಿಲ್ದಾಣಗಳಿಗೆ ಕ್ರಮವಾಗಿ ಅಂಜನಾದ್ರಿ (ಕಿಷ್ಕಿಂಧಾ), ಹುಲಿಗೆಮ್ಮ ದೇವಿ ಮತ್ತು ಮಹಾತ್ಮ ಗಾಂಧಿ ರೈಲು ನಿಲ್ದಾಣ ಎಂದು ಮರುನಾಮಕರಣ ಮಾಡಬೇಕೆಂದು ಶಿಫಾರಸು ಮಾಡಲಾಗಿದೆ' ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಈ ಬಗ್ಗೆ ಭಾನುವಾರ ಪ್ರಕಟಣೆ ನೀಡಿರುವ ಅವರು, 'ಈ ಶಿಫಾರಸನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಳುಹಿಸಲಾಗಿದೆ. ಅವರ ಮೂಲಕ ಕೇಂದ್ರ ಗೃಹ ಸಚಿವಾಲಯಕ್ಕೆ ಕಳುಹಿಸಿ ಕೊಡಲಾಗುವುದು' ಎಂದಿದ್ದಾರೆ.

'ಕಲ್ಯಾಣ ಕರ್ನಾಟಕ ಭಾಗದಲ್ಲಿ ಬರುವ ಈ ಮೂರು ನಿಲ್ದಾಣಗಳಿಗೆ ಮರು ನಾಮಕರಣ ಮಾಡಿದರೆ ಜನರ ಭಾವನೆಗಳಿಗೆ ಮನ್ನಣೆ ನೀಡಿದಂತೆ ಆಗುತ್ತದೆ. ಅಂಜನಾದ್ರಿಯು ರಾಮಾಯಣದಲ್ಲಿ ಬರುವ ಆಂಜನೇಯನ ಜನ್ಮಸ್ಥಳವಾಗಿದ್ದು, ಹುಲಿಗೆಮ್ಮದೇವಿ ಈ ಭಾಗದ ಜನಪ್ರಿಯ ಜನಪದ ದೇವತೆ. ಮಹಾತ್ಮ ಗಾಂಧಿ ಅವರ ಹೆಸರಿಡುವುದರ ಹಿಂದೆ ಕೂಡ ಐತಿಹಾಸಿಕ ಕಾರಣವಿದೆ' ಎಂದು ಅವರು ಹೇಳಿದ್ದಾರೆ.

ವಿದ್ಯಾರ್ಥಿನಿಯರಿಂದ ಶೌಚಾಲಯ ಸ್ವಚ್ಛತೆ

ಪ್ರಜಾವಾಣಿ ವಾರ್ತೆ

ಮಾನ್ವಿ (ರಾಯಚೂರು ಜಿಲ್ಲೆ): ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಹಿಂದಿರುವ ಬಿಸಿಎಂ ಇಲಾಖೆಯ ಮೆಟ್ರಿಕ್ ನಂತರದ ಹಿಂದುಳಿದ ವರ್ಗಗಳ ಬಾಲಕಿಯರ ವಸತಿ ನಿಲಯದಲ್ಲಿ ವಿದ್ಯಾರ್ಥಿನಿಯರು ಶೌಚಾಲಯ ಸ್ವಚ್ಛಗೊಳಿಸಿದ್ದಾರೆ ಎಂದು ಹೇಳಲಾಗಿದೆ. ವಿದ್ಯಾರ್ಥಿನಿಯರು ಶೌಚಾಲಯ ಶುಚಿಗೊಳಿಸಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದು, ಸಾರ್ವಜನಿಕರ ಚರ್ಚೆಗೆ ಗ್ರಾಸವಾಗಿದೆ.

ಈ ಬೆನ್ನಲ್ಲೇ ಭಾನುವಾರ ತಾಲ್ಲೂಕು ಬಿಸಿಎಂ ಅಧಿಕಾರಿ ಸಂಗನಬಸಪ್ಪ ಬಿರಾದಾರ ವಸತಿ ನಿಲಯಕ್ಕೆ ಭೇಟಿ ನೀಡಿ ವಿದ್ಯಾರ್ಥಿನಿಯರಿಂದ ಮಾಹಿತಿ ಪಡೆದರು. ಎಂಟು ದಿನಗಳ ಹಿಂದೆ ವಸತಿ ನಿಲಯದ ಶೌಚಾಲಯ ಶುಚಿಗೊಳಿಸಿದ್ದಾಗಿ ವಿದ್ಯಾರ್ಥಿನಿಯರು ಅಧಿಕಾರಿಗೆ ಮಾಹಿತಿ ನೀಡಿದರು.

ವಾರ್ಡನ್ ಒತ್ತಾಯದ ಮೇರೆಗೆ ಎಂಟು ದಿನಗಳ ಹಿಂದೆ ಶೌಚಾಲಯ ಸಚ್ಛಗೊಳಿಸಿದ್ದಾಗಿ ವಿದ್ಯಾರ್ಥಿನಿಯರು ತಿಳಿಸಿದರು.

'ಶೌಚಾಲಯ ಸ್ವಚ್ಛತೆ, ಮೂಲಸೌಕರ್ಯ ಕೊರತೆ ಸೇರಿದಂತೆ ವಸತಿ ನಿಲಯದ ಸಮಸ್ಯೆಗಳ ಕುರಿತು ಮೇಲಧಿಕಾರಿಗಳಿಗೆ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ವಿದ್ಯಾರ್ಥಿನಿಯರು ಅಸಮಾಧಾನ ವ್ಯಕ್ತಪಡಿಸಿದರು.

ಪಹಣಿ: ವಕ್ಫ್ ಹೆಸರು ರದ್ದು

ದಾವಣಗೆರೆ: ಪಿ.ಜೆ. ಬಡಾವಣೆ ನಿವಾಸಿಗಳ ಆತಂಕ ದೂರ

ಪ್ರಜಾವಾಣಿ ವಾರ್ತೆ


ದಾವಣಗೆರೆ: ಇಲ್ಲಿನ ಪ್ರಿನ್ಸ್ ಜಯಚಾಮರಾಜೇಂದ್ರ (ಪಿ.ಜೆ) ಬಡಾವಣೆಯ ಪಹಣಿ ತಿದ್ದುಪಡಿ ಮಾಡಿರುವ ಕಂದಾಯ ಇಲಾಖೆ, 'ಖಬರಸ್ತಾನ್ ಸುನ್ನಿ ವಕ್ಫ್ ಸಂಸ್ಥೆ' ಎಂಬುದನ್ನು ಬದಲಾಯಿಸಿ 'ಸರ್ಕಾರಿ ಖರಾಬು' ಎಂಬುದಾಗಿ ಉಲ್ಲೇಖಿಸಿದೆ. ಸ್ಥಳೀಯರ ಆಕ್ರೋಶಕ್ಕೆ ಮಣಿದು ಭೂದಾಖಲೆಗಳನ್ನು ಸರಿಪಡಿಸಿದೆ.

ನಗರದ ಹೃದಯ ಭಾಗದ ಪಿ.ಜೆ ಬಡಾವಣೆಯ 4 ಎಕರೆ 13 ಗುಂಟೆ ಜಾಗ ಭೂದಾಖಲೆಗಳಲ್ಲಿ 'ಖಬರಸ್ತಾನ್ ಸುನ್ನಿ ವಕ್ಫ್ ಸಂಸ್ಥೆ' ಎಂಬ ಹೆಸರಿಗೆ ಸೇರಿತ್ತು. ವಕ್ಫ್ ಆಸ್ತಿಗೆ ಸಂಬಂಧಿಸಿದಂತೆ ರಾಜ್ಯದಾದ್ಯಂತ ವಿವಾದ ಸೃಷ್ಟಿಯಾದ ಬೆನ್ನಲ್ಲೇ ಬಹಿರಂಗಗೊಂಡ ಈ ದಾಖಲೆಗಳು ಸ್ಥಳೀಯರಲ್ಲಿ ಆತಂಕ ಮೂಡಿಸಿದ್ದವು.

ಪಿ.ಜೆ. ಬಡಾವಣೆಯ ಅಕ್ಕಮಹಾದೇವಿ ರಸ್ತೆಯ ಗುಂಡಿ ಮಹಾದೇವಪ್ಪ ಅವರ ಹಳೆಯ ಮನೆ, ಎ.ವಿ. ಕಮಲಮ್ಮ ಕಾಲೇಜು, ಚೇತನಾ ಹೋಟೆಲ್ ರಸ್ತೆ, ಹರಳೆಣ್ಣೆ ಕೊಟ್ರಬಸಪ್ಪ ವೃತ್ತ, ಶ್ರೀರಾಮ ಮಂದಿರ ಒಳಗೊಂಡ ಬಡಾವಣೆಯ ದಾಖಲೆಯಲ್ಲಿ ವಕ್ಫ್ ಆಸ್ತಿ ಎಂಬ ಉಲ್ಲೇಖ ಕಾಣಿಸಿಕೊಂಡಿತ್ತು. ಉಪವಿಭಾಗಾಧಿಕಾರಿ ನ್ಯಾಯಾಲಯದ ಆದೇಶದಂತೆ ದಾವಣಗೆರೆ ತಹಶೀಲ್ದಾರ್ 2015ರ ಮಾರ್ಚ್ 10ರಂದು ಖಾತೆ ತಿದ್ದುಪಡಿ ಮಾಡಿದ್ದರು. ಈ ವೇಳೆ ತಾಂತ್ರಿಕ ಸಮಸ್ಯೆಯಿಂದ ಪಹಣಿಯಲ್ಲಿ ಕಾಣಿಸಿಕೊಂಡ ದೋಷವನ್ನು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಸರಿಪಡಿಸಿದ್ದಾರೆ.

'ದಾವಣಗೆರೆ ಗ್ರಾಮದ ಕಸಬಾ ಹೋಬಳಿಯ ಸರ್ವೆ ಸಂಖ್ಯೆ-48 ಹಾಗೂ 53ರಲ್ಲಿದ್ದ 70 ಎಕರೆ ಜಾಗವನ್ನು ಬಡಾವಣೆ ಅಭಿವೃದ್ಧಿಗಾಗಿ 1955ರಲ್ಲಿ ಸರ್ಕಾರ ಸ್ವಾಧೀನಪಡಿಸಿಕೊಂಡಿತ್ತು. ಈ ಸಂದರ್ಭದಲ್ಲಿ ಸರ್ವೆ ನಂಬರ್- 53ರಲ್ಲಿದ್ದ 18 ಎಕರೆಯನ್ನು ಸರ್ವೆ ನಂಬರ್- 48ರ ಜೊತೆಗೆ ವಿಲೀನಗೊಳಿಸಲಾಗಿತ್ತು. ಸರ್ವೆ ನಂಬರ್‌ಗಳ ಕ್ರಮಾಂಕ ತಪ್ಪದಂತೆ ಗ್ರಾಮದ ಕೊನೆಯ ಸರ್ವೆ ನಂಬರ್- 162ರಲ್ಲಿದ್ದ 4 ಎಕರೆ 13 ಗುಂಟೆ ಭೂಮಿಯನ್ನು ಸರ್ವೆ ನಂಬರ್- 53 ಎಂಬುದಾಗಿ ತಿದ್ದುಪಡಿ ಮಾಡಲಾಗಿತ್ತು. ಆಗ 'ಖಬರಸ್ತಾನ್ ಸುನ್ನಿ ವಕ್ಫ್ ಸಂಸ್ಥೆ' ಆಸ್ತಿ ಸರ್ವೆ ನಂಬರ್- 53 ಎಂದು ಆಗಿತ್ತು. 2015ರಲ್ಲಿ ಭೂದಾಖಲೆ ತಿದ್ದುಪಡಿ ಮಾಡುವಾಗ ಬಡಾವಣೆಯ ಆಸ್ತಿಯೂ ವಕ್ಫ್ ಹೆಸರಿನಲ್ಲಿ ಕಣ್ತಪ್ಪಿನಿಂದ ನಮೂದಾಗಿತ್ತು' ಎಂದು ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ವಿವರಿಸಿದ್ದಾರೆ.

ಬಡಾವಣೆಯ ಪಹಣಿಯಲ್ಲಿ ವಕ್ಫ್ ಆಸ್ತಿ ಎಂಬುದಾಗಿ ಉಲ್ಲೇಖಗೊಂಡಿದ್ದರಿಂದ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದರು. ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಬಡಾವಣೆಗೆ ಭೇಟಿ ನೀಡಿ ಸರ್ಕಾರದ ವಿರುದ್ಧ ಹರಿಹಾಯ್ದಿದ್ದರು. ಇದರಿಂದ ಎಚ್ಚೆತ್ತುಕೊಂಡ ಅಧಿಕಾರಿಗಳು ಸ್ಥಳೀಯರೊಂದಿಗೆ ಸಮಾಲೋಚನಾ ಸಭೆ ನಡೆಸಿ ಪಹಣಿ ತಿದ್ದುಪಡಿ ಮಾಡುವ ಆಶ್ವಾಸನೆ ನೀಡಿದ್ದರು.


ದಾವಣಗೆರೆಯ ಪಿ.ಜೆ. ಬಡಾವಣೆ ಭೂಮಿಯ ಪಹಣಿಯಲ್ಲಿ ಕಾಣಿಸಿಕೊಂಡಿದ್ದ ದೋಷವನ್ನು ಸರಿಪಡಿಸಲಾಗಿದೆ

ನಕ್ಷೆ ತಿದ್ದುಪಡಿಗೆ ಪ್ರಸ್ತಾವ

ಭೂದಾಖಲೆಯನ್ನು ಡಿಜಿಟಲ್ ಸ್ವರೂಪದಲ್ಲಿ ನೀಡುವ ಕಂದಾಯ ಇಲಾಖೆಯ 'ದಿಶಾಂಕ್' ಆ್ಯಪ್‌ನಲ್ಲಿ ಪಿ.ಜೆ. ಬಡಾವಣೆಯ ಆಸ್ತಿಯ ವಿವರಗಳಲ್ಲಿ ಇನ್ನೂ 'ಖಬರಸ್ತಾನ್ ಸುನ್ನಿ ವಕ್ಫ್ ಸಂಸ್ಥೆ' ಎಂದೇ ಇದೆ. ನಕ್ಷೆ ತಿದ್ದುಪಡಿ ಮಾಡಿ ದಾಖಲೆ ಸರಿಪಡಿಸುವಂತೆ ಭೂದಾಖಲೆಗಳ ಆಯುಕ್ತರಿಗೆ ಕಂದಾಯ ಇಲಾಖೆ ಪ್ರಸ್ತಾವ ಸಲ್ಲಿಸಿದೆ.

'ದಿಶಾಂಕ್ ಆ್ಯಪ್‌ನಲ್ಲಿ ಕಾಣಿಸಿಕೊಳ್ಳುತ್ತಿರುವ ಲೋಪವನ್ನು ಸರಿಪಡಿಸುವಂತೆ ಪ್ರಸ್ತಾವ ಸಲ್ಲಿಸಲಾಗಿದೆ. ಒಂದು ವಾರದಲ್ಲಿ ಇದು ಕೂಡ ತಿದ್ದುಪಡಿಯಾಗುವ ಸಾಧ್ಯತೆ ಇದೆ' ಎಂದು ತಹಶೀಲ್ದಾರ್ ಎಂ.ಬಿ.ಅಶ್ವತ್ಥ್ ಮಾಹಿತಿ ನೀಡಿದ್ದಾರೆ.

ಬಿಜೆಪಿಯಿಂದ ಹೆಚ್ಚು ನೋಟಿಸ್

ಒಂದನೇ ಪುಟದಿಂದ...

2,865 ಎಕರೆ ವಿಸ್ತೀರ್ಣದ ಜಮೀನನ್ನು 'ವಕ್ಫ್ ಆಸ್ತಿ' ಎಂದು ಅಧಿಸೂಚನೆ ಹೊರಡಿಸಿದ ಬೆನ್ನಲ್ಲೇ, ಅವುಗಳ ಒತ್ತುವರಿ ತೆರವಿಗೆ ನೋಟಿಸ್ ನೀಡಲಾಗಿತ್ತು. ಬಿ.ಎಸ್. ಯಡಿಯೂರಪ್ಪ ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಅಧಿಸೂಚನೆ ಮಾಡಲಾಗಿದ್ದ 'ವಕ್ಫ್ ಆಸ್ತಿ'ಗಳಿಗೂ ಈ ಅವಧಿಯಲ್ಲಿ ನೋಟಿಸ್ ನೀಡಲಾಗಿತ್ತು.

ಬಿಜೆಪಿ ಸರ್ಕಾರವು 1,735 ರೈತರು ಮತ್ತು ಭೂಮಾಲೀಕರಿಗೆ ನೋಟಿಸ್ ನೀಡಿತ್ತು. ಇದರ ವಿರುದ್ಧ ಕೆಲ ರೈತರು ನ್ಯಾಯಾಲಯದ ಮೊರೆಹೋಗಿ ತಡೆಯಾಜ್ಞೆ ತಂದಿದ್ದರು. ಉಳಿದ ಪ್ರಕರಣಗಳಲ್ಲಿ ಪಹಣಿಯಲ್ಲಿ 'ವಕ್ಫ್ ಆಸ್ತಿ' ಎಂದು ನಮೂದಿಸಲು ಕ್ರಮ ತೆಗೆದುಕೊಳ್ಳುವಂತೆ ಸಮಿತಿಯು ಶಿಫಾರಸು ಮಾಡಿತ್ತು.

4,720 ಎಕರೆ ವಿಸ್ತೀರ್ಣದ ಜಮೀನು ವಕ್ಫ್ ಆಸ್ತಿ ಒತ್ತುವರಿಯಾಗಿದ್ದು, ಅವುಗಳು ಅಕ್ರಮ ಪರಭಾರೆ ಆಗಬಾರದು ಎಂದು ಪಹಣಿಯಲ್ಲಿ 'ಫ್ಲಾಗ್ ಆಫ್' (ಪಹಣಿಯ ಕಾಲಂ 11ರಲ್ಲಿ ವಕ್ಫ್ ಆಸ್ತಿ ಎಂದು ನಮೂದಿಸುವುದು) ಮಾಡಲಾಗಿತ್ತು. ವಕ್ಫ್ ಆಸ್ತಿಗಳ ದಾಖಲೆ, ಸ್ಥಿತಿಗತಿ ಮತ್ತು ಸಂರಕ್ಷಣೆ ಕಾರ್ಯಾಚರಣೆಗಳ ವಿವರವನ್ನು ಒಳಗೊಂಡ ವರದಿಗಳನ್ನು ಕುಮಾರ್ ಬಂಗಾರಪ್ಪ ಅವರು ವಿಧಾನಸಭೆಯಲ್ಲಿ ಮಂಡಿಸಿದ್ದರು. ಈ ವರದಿಗಳನ್ನು ಸದನವು ಅಂಗೀಕರಿಸಿತ್ತು.

2020ರ ಸೆಪ್ಟೆಂಬರ್ 10ರಂದು ವಿಧಾನಸಭೆಯಲ್ಲಿ ಮಂಡಿಸಿದ ವರದಿಯಲ್ಲಿ, 'ವಕ್ಫ್ ಆಸ್ತಿಗಳ ಒತ್ತುವರಿ, ಅಕ್ರಮ ಮಾರಾಟ ಅಥವಾ ಇತರೆ ಯಾವುದೇ ತೊಂದರೆ ಬಂದಲ್ಲಿ, ಅವುಗಳನ್ನು ತೆರವುಗೊಳಿಸಲು ವಕ್ಫ್ ಮಂಡಳಿಯು ಜಿಲ್ಲಾಧಿಕಾರಿಗಳಿಗೆ ಸೂಚಿಸಲು ಕಾಯ್ದೆಯಲ್ಲಿ ಅವಕಾಶವಿದೆ' ಎಂದು ಸಮಿತಿ ಹೇಳಿತ್ತು.

'ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದ ಕಂದಾಯ ದಾಖಲೆಗಳನ್ನು ಪರಿಶೀಲಿಸಬೇಕು. ದಾಖಲೆಗಳು ಇಲ್ಲದ ಆಸ್ತಿಗಳಿಗೆ ಸಂಬಂಧಿಸಿದ ಆಕಾರ್‌ಬಂದ್‌ಗಳ ಮಾಹಿತಿ ಪರಿಶೀಲಿಸಿ, ವಕ್ಫ್ ಆಸ್ತಿಗಳ ರಕ್ಷಣೆಗೆ ಕ್ರಮ ತೆಗೆದು ಕೊಳ್ಳಬೇಕು' ಎಂದು ಶಿಫಾರಸು ಮಾಡಿತ್ತು.

ಜತೆಗೆ, 'ಗೆಜೆಟ್ ಅಧಿಸೂಚನೆ ಹೊರಡಿಸಲಾಗಿರುವ ಆಸ್ತಿಗಳ ಮೂಲ ಕಂದಾಯ ದಾಖಲೆಗಳನ್ನು ಪರಿಶೀಲನೆ ಮಾಡಿ, ಕಂದಾಯ ಇಲಾಖೆಯ ತಂತ್ರಾಂಶದಲ್ಲಿ ನಮೂದಿಸಬೇಕು. ತಂತ್ರಾಂಶದಲ್ಲಿ ಆ ಆಸ್ತಿಗಳನ್ನು ಲಾಕ್ ಮಾಡಿಸುವ ಮೂಲಕ ಪರಭಾರೆ, ಒತ್ತುವರಿ ಮತ್ತು ಅಕ್ರಮ ಮಾರಾಟಕ್ಕೆ ಅವಕಾಶವಿರದಂತೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು' ಎಂದು ಸಮಿತಿ ಶಿಫಾರಸಿನಲ್ಲಿ ಹೇಳಿತ್ತು.

2022ರಲ್ಲಿ ಸಮಿತಿಯು ಮತ್ತೊಂದು ವರದಿಯನ್ನು ಸದನದಲ್ಲಿ ಮಂಡಿಸಿತ್ತು. 2020ರ ವರದಿಯಲ್ಲಿ ಮಾಡಿದ್ದ ಎಲ್ಲ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಲಾಗಿದೆ ಎಂಬುದನ್ನು ವರದಿಯಲ್ಲಿ ಉಲ್ಲೇಖಿಸಿದ್ದು, ಅದಕ್ಕೆ ಸಂಬಂಧಿಸಿದ ಸುಮಾರು 6,000 ಪುಟಗಳಷ್ಟು ದಾಖಲೆಗಳನ್ನು ವರದಿಯೊಂದಿಗೆ ಲಗತ್ತಿಸಲಾಗಿತ್ತು.

ಕೆ.ಆರ್.ಮಾರುಕಟ್ಟೆಯಂತೆ ಆದಾಯ

ಬೆಂಗಳೂರಿನ ಕೆ.ಆರ್.ಮಾರುಕಟ್ಟೆಯು ವಕ್ಫ್ ಆಸ್ತಿ ಎಂಬುದನ್ನು ಬಿಜೆಪಿ ಸರ್ಕಾರದ ಅವಧಿಯ ಸಮಿತಿ ವರದಿಯಲ್ಲಿ ಗುರುತಿಸಿದೆ. ಜತೆಗೆ ಈ ವರದಿಯನ್ನು ವಿಧಾನಸಭೆ ಅಂಗೀಕರಿಸಿದೆ.

'ಕೆ.ಆರ್. ಮಾರುಕಟ್ಟೆಯನ್ನು ಒಳಗೊಂಡಂತೆ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ವಕ್ಫ್ ಆಸ್ತಿಗಳಲ್ಲಿ ಆರ್ಥಿಕ ಚಟುವಟಿಕೆಗಳು ನಡೆಯುತ್ತಿವೆ. ಅವುಗಳ ಆದಾಯದಲ್ಲಿ ಶೇ 7ರಷ್ಟರ ಪಾಲಿನಂತೆ ವಕ್ಫ್ ಮಂಡಳಿಗೆ ವಾರ್ಷಿಕ ₹6 ಕೋಟಿ ಬರುತ್ತಿದೆ. ಆದರೆ, ಈ ರೀತಿ ಆರ್ಥಿಕ ಚಟುವಟಿಕೆ ನಡೆಯುತ್ತಿರುವ ಎಲ್ಲ ವಕ್ಫ್ ಆಸ್ತಿಗಳಿಂದ ಆದಾಯ ಬರುತ್ತಿಲ್ಲ' ಎಂದು ಸಮಿತಿಯು ವರದಿಯಲ್ಲಿ ಹೇಳಿತ್ತು.

'ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿರುವ ವಕ್ಫ್ ಆಸ್ತಿಗಳಿಗೆ ಯಾವುದೋ ಕಾಲದಲ್ಲಿ ಬಾಡಿಗೆ ಮತ್ತು ಭೋಗ್ಯ ನಿಗದಿ ಮಾಡಿದ್ದು, ಇದರಿಂದ ವಕ್ಫ್ ಮಂಡಳಿಗೆ ಮತ್ತು ಸರ್ಕಾರಕ್ಕೆ ತೀವ್ರ ನಷ್ಟವಾಗುತ್ತಿದೆ. ಅಂತಹ ಆಸ್ತಿಗಳಿಗೆ ಸಂಬಂಧಿಸಿದಂತೆ ಎಸ್.ಆರ್ (ಸ್ಥಿರಾಸ್ತಿ ಮಾರ್ಗಸೂಚಿ ದರ) ಮೌಲ್ಯದ ಪ್ರಕಾರ ಜಿಲ್ಲಾಧಿಕಾರಿಗಳು ಬಾಡಿಗೆ ಮತ್ತು ಭೋಗ್ಯ ಸಂಬಂಧಿಸಿದಂತೆ ಹೊಸ ಆದೇಶಗಳನ್ನು ಹೊರಡಿಸಬೇಕು. ಈ ಮೂಲಕ ಆದಾಯವನ್ನು ಹೆಚ್ಚಿಸಿಕೊಳ್ಳಬೇಕು' ಎಂದು ಸಮಿತಿ ಶಿಫಾರಸು ಮಾಡಿತ್ತು.

'ವಕ್ಫ್ ಆಸ್ತಿ ಎಂದು ನಮೂದಿಸಿ'

ಒಂದನೇ ಪುಟದಿಂದ...

ವಕ್ಫ್ ಆಸ್ತಿಗಳ ಮುಂದೆ ಆಯಾ ವಕ್ಫ್ ಸಂಸ್ಥೆಗಳ ಹೆಸರನ್ನೂ ನಮೂದಿಸಬೇಕು. ಆ ಮೂಲಕ ವಕ್ಫ್ ಆಸ್ತಿಗಳನ್ನು ಸಂರಕ್ಷಿಸಿಕೊಳ್ಳಿ ಎಂದು ಸಮಿತಿ ಶಿಫಾರಸು ಮಾಡಿತ್ತು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಒಬ್ಬ ವ್ಯಕ್ತಿಯ ಪ್ರತಿಭೆಯನ್ನು ಯಾರಿಂದಲೂ ಬಚ್ಚಿಡಲು ಸಾಧ್ಯವಿಲ್ಲ.

-ಸ್ವಾಮಿ ವಿವೇಕಾನಂದ

ಮಹಾರಾಷ್ಟ್ರದಲ್ಲಿ ಮಹಾಯುತಿ ಅಬ್ಬರ 'ಇಂಡಿಯಾ'ಕ್ಕೆ ಜಾರ್ಖಂಡ್ ಸಮಾಧಾನಕರ

ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ 'ಮಹಾಯುತಿ'ಯು ಜಯಭೇರಿ ಬಾರಿಸಿದೆ. ಹಾಗೆಯೇ ಜಾರ್ಖಂಡ್‌ನಲ್ಲಿ ಜೆಎಂಎಂ ನೇತೃತ್ವದ 'ಇಂಡಿಯಾ' ಮೈತ್ರಿಕೂಟವು ನಿರ್ಣಾಯಕ ಗೆಲುವು ಪಡೆದಿದೆ. ಆದರೆ, ಈ ಎರಡು ಗೆಲುವುಗಳ ನಡುವೆ ರಾಜಕೀಯವಾದ ಹೋಲಿಕೆ ಇಲ್ಲ. ಮಹಾಯುತಿಯ ಪ್ರಚಂಡ ಗೆಲುವು ಬಿಜೆಪಿಗೆ ಮತ್ತು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ರಾಷ್ಟ್ರ ಮಟ್ಟದಲ್ಲಿ ಬಹುದೊಡ್ಡ ಉತ್ತೇಜನವನ್ನು ನೀಡಲಿದೆ. ಆದರೆ, ಜಾರ್ಖಂಡ್‌ನ ಗೆಲುವು ವಿರೋಧ ಪಕ್ಷಗಳಿಗೆ ಒಂದು ಸಣ್ಣ ಸಮಾಧಾನ ಮಾತ್ರ. ಹರಿಯಾಣದಲ್ಲಿನ ಮಹತ್ವಪೂರ್ಣ ಗೆಲುವಿನ ಬಳಿಕ ದೇಶದ ಅತ್ಯಂತ ಶ್ರೀಮಂತ ರಾಜ್ಯವಾದ ಮಹಾರಾಷ್ಟ್ರದಲ್ಲಿಯೂ ಈ ಪ್ರಮಾಣದ ಗೆಲುವು ಎನ್‌ಡಿಎ ದುರ್ಬಲವಾಗಿದೆ ಎಂಬ ಭಾವನೆಯನ್ನು ತೊಡೆದುಹಾಕಿದೆ. ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಗೆದ್ದ ಕ್ಷೇತ್ರಗಳ ಸಂಖ್ಯೆ ಕಡಿಮೆಯಾಗಿ, ಸ್ವಂತವಾಗಿ ಸರಳ ಬಹುಮತ ಪಡೆದುಕೊಳ್ಳಲು ಸಾಧ್ಯವಾಗದ ಕಾರಣ ಬಿಜೆಪಿ ದುರ್ಬಲವಾಗಿದೆ ಎಂಬ ಭಾವನೆ ಸೃಷ್ಟಿಯಾಗಿತ್ತು. ಈಗಿನ ಗೆಲುವು, ಸಂಸತ್ತಿನೊಳಗೆ ಶಾಸನ ರೂಪಿಸುವಿಕೆ ಮತ್ತು ಹೊರಗಿನ ಆಳ್ವಿಕೆಯ ಕಾರ್ಯಸೂಚಿಯನ್ನು ಸರ್ಕಾರವು ವಿರೋಧ ಪಕ್ಷಗಳ ಅಭಿಪ್ರಾಯಗಳನ್ನು ಲೆಕ್ಕಿಸದೆಯೇ ಜಾರಿಗೆ ತರಲು ಬಲ ತುಂಬಲಿದೆ.



ದೇಶದ ಅತ್ಯಂತ ಶ್ರೀಮಂತ ರಾಜ್ಯವಾದ ಮಹಾರಾಷ್ಟ್ರದಲ್ಲಿ ಎನ್‌ಡಿಎಗೆ ಸಿಕ್ಕಿರುವ ಈ ಪ್ರಮಾಣದ ಗೆಲುವು, ಬಿಜೆಪಿಗೆ ದೊಡ್ಡ ಮಟ್ಟದಲ್ಲಿ ಬಲ ತುಂಬಿದೆ

ಮಹಾರಾಷ್ಟ್ರದಲ್ಲಿ ಬಿಜೆಪಿಗೆ ಸಿಕ್ಕಿದ್ದು ಬಹಳ ಅಬ್ಬರದ ಗೆಲುವು. ವಿಧಾನಸಭೆಯಲ್ಲಿ ಸರಳ ಬಹುಮತದ ಹತ್ತಿರಕ್ಕೆ ಬಿಜೆಪಿ ಬಂದಿದೆ. ಇದಕ್ಕಾಗಿ ಬಿಜೆಪಿ ಕಠಿಣವಾಗಿ ಶ್ರಮಪಟ್ಟಿದೆ. ಹಲವು ವರ್ಷಗಳಿಂದ ವಿಧಾನಸಭೆಯಲ್ಲಿನ ತನ್ನ ಬಲವನ್ನು ಸ್ಥಿರವಾಗಿ ಏರಿಸಿಕೊಂಡು ಬಂದಿದೆ ಮತ್ತು ರಾಜಕೀಯ ಶಕ್ತಿಯನ್ನು ಹೆಚ್ಚಿಸಿಕೊಂಡಿದೆ. ತಂತ್ರಗಾರಿಕೆ ತೋರಿ ಶಿವಸೇನಾ ಮತ್ತು ಎನ್‌ಸಿಪಿಯನ್ನು ಒಡೆದು ತನ್ನೊಂದಿಗೆ ಕರೆದೊಯ್ದಿದೆ. ಜಾತಿಗಳು ಮತ್ತು ಗುಂಪುಗಳನ್ನು ಒಗ್ಗೂಡಿಸಿ, ಗೆಲುವಿನ ಸಂಯೋಜನೆ ರೂಪಿಸಿ ಪರಿಣಾಮಕಾರಿಯಾದ ಚುನಾವಣಾ ಕಾರ್ಯತಂತ್ರ ಹೆಣೆದಿದೆ. ಎಲ್ಲಕ್ಕಿಂತ ಮುಖ್ಯವಾಗಿ ಮತದಾರರಿಗೆ ಉಚಿತ ಕೊಡುಗೆಗಳ ಸುರಿಮಳೆಗೈದಿದೆ. ಲಡ್ಕಿ ಬಹೀಣ್‌ನಂತಹ ಯೋಜನೆಯ ಮೂಲಕ ನೀಡಿದ ನಗದು ಕೊಡುಗೆ ಮಹಿಳೆಯರ ಮೇಲೆ ಪ್ರಭಾವ ಬೀರಿದೆ. ಈ ಬಾರಿಯ ಚುನಾವಣೆಯಲ್ಲಿ ಮಹಿಳೆಯರ ಮತದಾನದ ಪ್ರಮಾಣವು ಶೇ 7ರಷ್ಟು ಏರಿಕೆಯಾಗಿದೆ. ಇದರಿಂದ ಮಹಾಯುತಿಗೆ ಮಾತ್ರ ಅನುಕೂಲ ಆಗಿರಲು ಸಾಧ್ಯ. ಮಹಾಯುತಿಯ ಭಾಗವಾಗಿದ್ದ ಶಿವಸೇನಾ ಮತ್ತು ಎನ್‌ಸಿಪಿ ನಾಯಕರೇ ಆ ಪಕ್ಷಗಳ ನೈಜ ವಾರಸುದಾರರು ಎಂದು ಕೂಡ ಮತದಾರರು ಭಾವಿಸಿದಂತಿದೆ. ಮಹಾಯುತಿ ಮೈತ್ರಿಕೂಟದ ಚುನಾವಣಾ ಪ್ರಚಾರವು ಹೆಚ್ಚು ಪರಿಣಾಮಕಾರಿಯಾಗಿತ್ತು. ಅದರ ಸಂದೇಶವು ರಾಜ್ಯದ ಎಲ್ಲ ಭಾಗಗಳು ಮತ್ತು ಎಲ್ಲ ಸಾಮಾಜಿಕ ವರ್ಗಗಳ ಮತದಾರರಿಗೆ ಸ್ಪಷ್ಟವಾಗಿ ತಲುಪಿದೆ. ಮಹಾವಿಕಾಸ ಆಘಾಡಿಯ (ಎಂವಿಎ) ಚುನಾವಣಾ ಪ್ರಚಾರವು ಪೇಲವವಾಗಿತ್ತು. ಮತದಾರರಿಗೆ ನೀಡಲು ಎಂವಿಎ ಬಳಿ ಸ್ಪಷ್ಟವಾದ ಸಂದೇಶ ಇರಲಿಲ್ಲ, ಮೈತ್ರಿಕೂಟದ ಭಾಗವಾಗಿದ್ದ ಪಕ್ಷಗಳ ನಡುವೆ ಸಮನ್ವಯ ಇರಲಿಲ್ಲ. ಚುನಾವಣಾ ಪ್ರಚಾರವು ಮತದಾರರನ್ನು ಮನವೊಲಿಸುವ ರೀತಿಯಲ್ಲಿ ಇರಲಿಲ್ಲ.

ಜಾರ್ಖಂಡ್‌ನಲ್ಲಿನ ಚಿತ್ರಣವು ಸಂಪೂರ್ಣವಾಗಿ ಭಿನ್ನವಾಗಿತ್ತು. ಅಲ್ಲಿ ಜೆಎಂಎಂ ನೇತೃತ್ವದ ಸರ್ಕಾರ ಇತ್ತು ಮತ್ತು ಆ ಪಕ್ಷವು ಆಯ್ದುಕೊಂಡಿದ್ದ ಚುನಾವಣಾ ವಿಚಾರಗಳು, ಕಟ್ಟಿದ ಸಂಕಥನ ಮತ್ತು ಪ್ರಚಾರವು ಬಿಜೆಪಿಯ ಚುನಾವಣಾ ತಂತ್ರಗಾರಿಕೆಗಿಂತ ಶಕ್ತಿಶಾಲಿಯಾಗಿದ್ದವು. ಜಾರ್ಖಂಡ್ ಸರ್ಕಾರ ಆರಂಭಿಸಿದ್ದ ಮಹಿಳೆಯರಿಗೆ ನಗದು ಕೊಡುಗೆ ನೀಡುವ ಯೋಜನೆಯು ಜೆಎಂಎಂಗೆ ಅನುಕೂಲಕರವಾಗಿ ಪರಿಣಮಿಸಿದೆ. ಆಡಳಿತಾರೂಢ ಮೈತ್ರಿಕೂಟದ ಪ್ರಬಲ ಬೆಂಬಲ ನೆಲೆ ಬುಡಕಟ್ಟು ಸಮುದಾಯವೇ ಆದರೂ ಇತರ ವರ್ಗಗಳಿಂದಲೂ ಬೆಂಬಲ ದೊರೆತಿದೆ. ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರನ್ನು ಜಾರಿ ನಿರ್ದೇಶನಾಲಯವು ಬಂಧಿಸಿ ಜೈಲಿಗಟ್ಟಿದ್ದರಿಂದ ಅವರ ಪರವಾಗಿ ಅನುಕಂಪ ವ್ಯಕ್ತವಾಗಿದೆ. ಮಾತ್ರವಲ್ಲ, ಈ ಅನುಕಂಪವು ಮತಗಳಾಗಿಯೂ ಪರಿವರ್ತನೆ ಆಗಿದೆ. ಬಾಂಗ್ಲಾದೇಶೀಯರ ಒಳನುಸುಳುವಿಕೆಯನ್ನೇ ಕೇಂದ್ರೀಕರಿಸಿದ್ದ ಬಿಜೆಪಿಯ ಪ್ರಚಾರವು ಮತದಾರರ ಮನಮುಟ್ಟುವಲ್ಲಿ ಯಶಸ್ವಿಯಾಗಲಿಲ್ಲ. ಆಡಳಿತವಿರೋಧಿ ಅಲೆಯನ್ನು ಮೆಟ್ಟಿನಿಂತು ಜಾರ್ಖಂಡ್‌ನಲ್ಲಿ 'ಇಂಡಿಯಾ' ಮೈತ್ರಿಕೂಟ ಸಾಧಿಸಿದ ದೊಡ್ಡ ಗೆಲುವು ಪರಿಣಾಮಕಾರಿಯೇ ಹೌದು. ಆದರೆ, ಮಹಾರಾಷ್ಟ್ರದಲ್ಲಿ ಮಹಾಯುತಿ ಪಡೆದ ಗೆಲುವಿಗೆ ಇರುವಷ್ಟು ಪ್ರಭೆ ಇದಕ್ಕಿಲ್ಲ.

ಗಾಂಧೀಜಿಯ 'ಹೊಸ ಶಿಕ್ಷಣ'ದ ಪುನರವಲೋಕನ ಇಂದಿನ ತುರ್ತು ಅಗತ್ಯ

ಗಾಂಧೀಜಿ ಮತ್ತು ಸುಸಂಗತ ಶಿಕ್ಷಣ



ವಿಶ್ಲೇಷಣೆ

ನಿರಂಜನಾರಾಧ್ಯ ವಿ. ಪಿ.

ಇಂದಿನ ಶಿಕ್ಷಣ ವ್ಯವಸ್ಥೆಯು ಮಕ್ಕಳಲ್ಲಿ ಸೃಜನಶೀಲ ಮನೋಭಾವವನ್ನು ಉದ್ದೀಪಿಸಿ ಅವರನ್ನು ಸ್ವಾವಲಂಬಿಗಳನ್ನಾಗಿಸಿ, ಉತ್ತಮ ನಾಗರಿಕರಾಗಿ ಬದುಕಲು ಅಣಿಗೊಳಿಸುವಲ್ಲಿ ಸೋತಿದೆ ಎಂಬುದನ್ನು ಬಹುತೇಕರು ಒಪ್ಪುತ್ತಾರೆ. ಶಿಕ್ಷಣವು ಮಕ್ಕಳ ಪಾಲಿಗೆ ಸಂತಸದಾಯಕವಾದ ಅರ್ಥಪೂರ್ಣ ಕಲಿಕೆಯಾಗುವ ಬದಲು ಕಂಠಪಾಠ ಒಪ್ಪಿಸುವ ಶಿಕ್ಷೆಯಾಗಿದೆ ಎಂಬುದು ಹೆಚ್ಚಿನವರ ಅಭಿಮತ. ಸಂಶೋಧನೆಗಳು ಸಹ ಇದನ್ನು ದೃಢಪಡಿಸಿವೆ.

ಈ ಬಗೆಗಿನ ಚರ್ಚೆ, ಅಭಿಪ್ರಾಯಗಳು ಹೊಸವೇನಲ್ಲ. ಭಾರತದಲ್ಲಿನ ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಶಿಕ್ಷಣ ವ್ಯವಸ್ಥೆಯ ಸಾಧಕ- ಬಾಧಕಗಳ ಬಗ್ಗೆ ವ್ಯಾಪಕ ಚರ್ಚೆಗಳು ನಡೆಯುತ್ತಲೇ ಬಂದಿವೆ. ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ದೈಹಿಕ ಕೆಲಸ ಮತ್ತು ಜ್ಞಾನದ ನಡುವೆ ಕೃತಕವಾಗಿ ಸೃಷ್ಟಿಸಲಾಗಿರುವ ಇಬ್ಬಗೆಯ ತತ್ವದ ಮೇಲೆ ಸ್ಥಾಪಿಸಲ್ಪಟ್ಟಿದೆ. ಇದು, ನಮ್ಮ ಸಮಾಜದಲ್ಲಿ ಶಾಲೆ ಮತ್ತು ಸಮಾಜದ ನಡುವೆ ಇರುವ ಅಂತರವನ್ನು ಸಹ ಪ್ರತಿಫಲಿಸುತ್ತದೆ. ಸಾಮಾಜಿಕ- ಆರ್ಥಿಕ ಮತ್ತು ಸಾಂಸ್ಕೃತಿಕವಾದ ನೈಜ ಸ್ಥಿತಿಗಳನ್ನು ಬಹುತೇಕ ಕಡೆಗಣಿಸಿರುವ ಈ ದ್ವಂದ್ವ ನಿಲುವಿನ ತತ್ವವು ದೈಹಿಕ ಶ್ರಮದಿಂದ ಕೆಲಸ ಮಾಡಿ ಸಂಪತ್ತನ್ನು ಉತ್ಪಾದಿಸುವ ಬಹುಜನರಿಗೆ ಉನ್ನತ ಹಾಗೂ ಪರಿಪೂರ್ಣ ಶಿಕ್ಷಣದ ಅವಕಾಶಗಳನ್ನು ನಿರಾಕರಿಸುತ್ತದೆ. ಶಿಕ್ಷಣವನ್ನು ಒಂದು ಸಾರ್ವತ್ರಿಕ ಹಕ್ಕನ್ನಾಗಿಸುವ ಬದಲು ಕೆಲವೇ ಜನರ ಸವಲತ್ತನ್ನಾಗಿ ಪರಿಗಣಿಸುತ್ತದೆ. ಹಾಗೊಮ್ಮೆ ಶಿಕ್ಷಣ ನೀಡಿದರೂ ಆಳುವ ವರ್ಗದ ಅಡಿಯಾಳಾಗಿ ಬದುಕಲು ಅಗತ್ಯವಿರುವ ಸಾಕ್ಷರತೆಯ ಶಿಕ್ಷಣವನ್ನು ಮಾತ್ರ ಒದಗಿಸುವ ಆಶಯವನ್ನು ಹೊಂದಿದೆ. ಮತ್ತೊಂದೆಡೆ, ದೈಹಿಕ ಕೆಲಸವನ್ನು ನಿರಾಕರಿಸುವ ರೀತಿಯಲ್ಲಿ ಔಪಚಾರಿಕ ಶಿಕ್ಷಣವನ್ನು ನೀಡಲಾಗುತ್ತಿದೆ. ಶಿಕ್ಷಣದ ಈ ರಾಜಕೀಯ ಅರ್ಥಶಾಸ್ತ್ರವು ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ.

ಭಾರತೀಯ ಶಿಕ್ಷಣ ವ್ಯವಸ್ಥೆಯ ಈ ದ್ವಂದ್ವ ನಿಲುವು ಶಿಕ್ಷಣದ ಮೇಲೆ ಗಂಭೀರ ಪರಿಣಾಮಗಳನ್ನು ಬೀರಿದೆ. 2006ರಲ್ಲಿ ಎನ್‌ಸಿಇಆರ್‌ಟಿ ಹೊರತಂದ ಗುಂಪು ಚರ್ಚೆಯ 21 ಪ್ರಬಂಧಗಳು, ಅದರಲ್ಲೂ ವಿಶೇಷವಾಗಿ ಕೆಲಸ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಪ್ರಬಂಧಗಳು ಕೆಲಸಕೇಂದ್ರಿತ ಶಿಕ್ಷಣದ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲುತ್ತವೆ. ಮೇಲು-ಕೀಳು, ಮೇಲ್ವರ್ಗ- ಕೆಳವರ್ಗ, ಉತ್ತಮ- ಅಧಮ, ಶ್ರೇಷ್ಠ- ಕನಿಷ್ಠ, ಯಜಮಾನ- ಗುಲಾಮ, ಅಧಿಕಾರಿ- ಗುಮಾಸ್ತ... ಹೀಗೆ ದ್ವಿವಿಭಜನೆಯ ಕಲ್ಪನೆಯಲ್ಲಿ ಬೇರೂರಿ ಬೆಳೆದಿರುವ ಈ ಶಿಕ್ಷಣ ವ್ಯವಸ್ಥೆಯು ಕ್ರಮೇಣ ಸಾಂಸ್ಥೀಕರಣಗೊಂಡು, ಪ್ರಬಲ ವರ್ಗ- ಜಾತಿ- ಸಂಸ್ಕೃತಿ- ಭಾಷೆಯನ್ನು ಪ್ರತಿನಿಧಿಸುವ ಜ್ಞಾನ ವ್ಯವಸ್ಥೆಯಲ್ಲಿ ಬೇರೂರಿದೆ. ಪುರುಷ ಅಥವಾ ಮಹಿಳೆ ಎಂಬ ಅಂಶವು ಈ ಪ್ರತಿ ವರ್ಗದಲ್ಲಿ ಪ್ರಬಲ ಪಾತ್ರವನ್ನು ವಹಿಸುತ್ತದೆ. ಇಂದಿನ ಶಿಕ್ಷಣ ವ್ಯವಸ್ಥೆಯು ಈ ಬಗೆಯ ಜ್ಞಾನದ ರೂಪವನ್ನು ಮಾತ್ರ 'ಮಾನ್ಯ' ರೂಪವೆಂದು 'ಪ್ರಮಾಣೀಕರಿಸಲು' ಒಲವು ತೋರುತ್ತದೆ.

ಈ ಪ್ರಕ್ರಿಯೆಯಲ್ಲಿ, ದೇಶದ ಅತಿ ದೊಡ್ಡ ಉತ್ಪಾದನಾ ಶಕ್ತಿಗಳಲ್ಲಿ ಅಂತರ್ಗತವಾಗಿರುವ ಜ್ಞಾನವನ್ನು ಮತ್ತು ಅದರ ಸಂಬಂಧಿತ ಮೌಲ್ಯಗಳು ಹಾಗೂ ಕೌಶಲಗಳನ್ನು ಶಾಲಾ ಪಠ್ಯಕ್ರಮದಿಂದ ಹೊರಗಿಡಲಾಗಿದೆ. ವಸಾಹತುಶಾಹಿ ತಮ್ಮ ರಾಜಕೀಯ ಉದ್ದೇಶಕ್ಕಾಗಿ ಸ್ಥಾಪಿಸಿದ ಶಿಕ್ಷಣ ವ್ಯವಸ್ಥೆಯನ್ನು ಯಥಾವತ್ತಾಗಿ ಮುಂದುವರಿಸುತ್ತಿರುವ ಕಾರಣ, ಅದು ಭಾರತದ ಉತ್ಪಾದಕ ಕೆಲಸ ಮತ್ತು ಅದರ ಸಾಮಾಜಿಕತೆಯಿಂದ ದೂರವಾಗಿದೆ.

ಗಾಂಧೀಜಿ ಪ್ರತಿಪಾದಿಸಿದಂತೆ 'ನಮ್ಮ ಶಿಕ್ಷಣದಲ್ಲಿ ಕ್ರಾಂತಿಯಾಗಬೇಕಿದೆ. ಕೈ ಕೆಲಸದ ಮೂಲಕ ಮೆದುಳಿಗೆ ಶಿಕ್ಷಣ ನೀಡಬೇಕು. ನಾನು ಕವಿಯಾಗಿದ್ದರೆ ಐದು ಬೆರಳುಗಳಿಂದ ಏನೆಲ್ಲ ಮಾಡಲು ಸಾಧ್ಯ ಎಂಬುದರ ಬಗ್ಗೆ ಕವನ ಬರೆಯಬಹುದಿತ್ತು. ಮೆದುಳೇ ಸರ್ವಸ್ವ, ಕೈಕಾಲು ಏನೂ ಅಲ್ಲ ಎಂದು ಏಕೆ ಭಾವಿಸಬೇಕು? ತಮ್ಮ ಕೈಗಳಿಗೆ ತರಬೇತಿ ನೀಡದೆ ಸಾಮಾನ್ಯ ಶಿಕ್ಷಣದ ಹಾದಿಯಲ್ಲಿ ಸಾಗುವವರು ಜೀವನದಲ್ಲಿ ಮಧುರ ಅನುಭವದ ಕೊರತೆಯನ್ನು ಎದುರಿಸುತ್ತಾರೆ. ಅವರ ಎಲ್ಲಾ ಸಾಮರ್ಥ್ಯಗಳು ತರಬೇತಿ ಪಡೆದಿರುವುದಿಲ್ಲ. ಪುಸ್ತಕದ ಜ್ಞಾನವಷ್ಟೇ ಮಗುವಿನಲ್ಲಿ ಆಸಕ್ತಿ ಹುಟ್ಟಿಸಿ ಅದರ ಗಮನವನ್ನು ಸಂಪೂರ್ಣವಾಗಿ ಹಿಡಿದಿಟ್ಟುಕೊಳ್ಳಲು ಸಾಧ್ಯವಿಲ್ಲ. ಬರೀ ಪದಗಳಿಂದ ಮೆದುಳು ಆಯಾಸಗೊಳ್ಳುತ್ತದೆ ಮತ್ತು ಮಗುವಿನ ಮನಸ್ಸು ಅಲೆದಾಡಲು ಪ್ರಾರಂಭಿಸುತ್ತದೆ. ಕೈ ಮಾಡಬಾರದ್ದನ್ನು ಮಾಡುತ್ತದೆ, ಕಣ್ಣು ನೋಡಬಾರದ್ದನ್ನು ನೋಡುತ್ತದೆ, ಕಿವಿ ಕೇಳಬಾರದ್ದನ್ನು ಕೇಳುತ್ತದೆ. ಹೀಗಾಗಿ, ಮಕ್ಕಳು ಮಾಡಬೇಕಾದುದನ್ನು ಕ್ರಮವಾಗಿ ಮಾಡುವುದಿಲ್ಲ, ನೋಡುವುದಿಲ್ಲ ಅಥವಾ ಕೇಳುವುದಿಲ್ಲ. ಸರಿಯಾದ ಆಯ್ಕೆ ಮಾಡುವುದನ್ನು ಅವರಿಗೆ ಕಲಿಸಲಾಗದ ಕಾರಣ, ಶಿಕ್ಷಣ ಅವರನ್ನು ನಿರುಪಯುಕ್ತರನ್ನಾಗಿಸುತ್ತದೆ. ಒಳ್ಳೆಯದು ಮತ್ತು ಕೆಟ್ಟದ್ದರ ನಡುವೆ ತಾರತಮ್ಯ ಮಾಡುವುದನ್ನು ಕಲಿಸದ, ಒಂದನ್ನು ಮೈಗೂಡಿಸಿಕೊಂಡು ಮತ್ತೊಂದನ್ನು ತ್ಯಜಿಸುವುದನ್ನು ಕಲಿಸದ ಶಿಕ್ಷಣವು ತಪ್ಪು ಶಿಕ್ಷಣ ಎನಿಸುತ್ತದೆ' (ಹರಿಜನ, 18 ಫೆಬ್ರುವರಿ 1939).

ಲಂಡನ್‌ನಲ್ಲಿ ನಡೆದ ದುಂಡುಮೇಜಿನ ಪರಿಷತ್ತಿನ ಸಭೆಯಲ್ಲಿ ಗಾಂಧೀಜಿ, ಭಾರತದ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ದೌರ್ಬಲ್ಯ ಮತ್ತು ಅಪ್ರಸ್ತುತತೆಯ ಕುರಿತು ಪ್ರಸ್ತಾಪಿಸಿದ್ದರು. ಶಿಕ್ಷಣದ ಸಾರ್ವತ್ರೀಕರಣದ ನಿಧಾನಗತಿಯ ದಯನೀಯ ಪರಿಸ್ಥಿತಿಗೆ ಅಂದಿನ ಬ್ರಿಟಿಷ್ ಸರ್ಕಾರವೇ ಹೊಣೆ ಎಂದಿದ್ದರು. ಶಿಕ್ಷಣ ವ್ಯವಸ್ಥೆಯ ಮುಖ್ಯ ದೋಷಗಳ ಬಗ್ಗೆ ವಿವರಿಸುತ್ತಾ 'ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ವ್ಯರ್ಥ ಮಾತ್ರವಲ್ಲ, ಅದು ಸಕಾರಾತ್ಮಕ ಎಂದು ತೋರಿಸಿಕೊಳ್ಳುತ್ತಲೇ ಮಕ್ಕಳಿಗೆ ಹಾನಿ ಉಂಟುಮಾಡುತ್ತದೆ ಎಂಬುದು ನನಗೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಈ ವ್ಯವಸ್ಥೆಯು ಇಂಗ್ಲಿಷ್ ಶಿಕ್ಷಣ ಪಡೆದ ಕೆಲವೇ ಕೆಲವರು ಮತ್ತು ಅಸಂಖ್ಯಾತ ಅಶಿಕ್ಷಿತರ ನಡುವೆ ಒಂದು ಶಾಶ್ವತ ತಡೆಗೋಡೆಯನ್ನು ಸೃಷ್ಟಿಸಿದೆ' ಎಂದಿದ್ದರು.



ಇದಕ್ಕೆ ಪರ್ಯಾಯವಾಗಿ, ಗಾಂಧೀಜಿ ನಯಿ ತಾಲಿಮ್‌ನ (ಹೊಸ ಶಿಕ್ಷಣ) ಪ್ರಸ್ತಾವವನ್ನು ಮುಂದಿಟ್ಟರು. ಇದು, ಪ್ರಾಚೀನ ಹಾಗೂ ವಸಾಹತುಶಾಹಿ ಮಾದರಿ ಶಿಕ್ಷಣ ವ್ಯವಸ್ಥೆಯಿಂದ ಪೂರ್ತಿ ಭಿನ್ನವಾದ ಶಿಕ್ಷಣ ಕ್ರಮವನ್ನು ಪ್ರತಿಪಾದಿಸುತ್ತದೆ. ಶಾಲಾ ಪಠ್ಯಕ್ರಮದಲ್ಲಿ ಉತ್ಪಾದಕ ಕೆಲಸವನ್ನು ಕೇಂದ್ರಬಿಂದುವಾಗಿಸುತ್ತದೆ. ಗಾಂಧೀಜಿಯ ದೃಷ್ಟಿಕೋನದಲ್ಲಿ, ನೈಜಜೀವನದ ಸನ್ನಿವೇಶದ ಹಲವು ಸಂದರ್ಭಗಳಲ್ಲಿ ಉತ್ಪಾದಕ ಕೆಲಸದಲ್ಲಿ ಭಾಗವಹಿಸುವಿಕೆಯು ಶಿಕ್ಷಣ- ಕಲಿಕೆಗೆ ನೇರವಾಗಿ ಸಂಬಂಧಿಸಿದ್ದು, ಏಕಕಾಲದಲ್ಲಿ ಜ್ಞಾನ ಸಂಪಾದನೆ, ಮೌಲ್ಯ ಮತ್ತು ಕೌಶಲ ಕಲಿಕೆಗೆ ಸಾಧನವಾಗುತ್ತದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಹಲವು ಸಂದರ್ಭಗಳಲ್ಲಿ ಸ್ಪಷ್ಟಪಡಿಸಿರುವಂತೆ, ನಯಿ ತಾಲಿಮ್ ಎಂದರೆ ವೃತ್ತಿಪರ ಶಿಕ್ಷಣವಲ್ಲ. ಬದಲಿಗೆ, ಕೆಲಸಕೇಂದ್ರಿತವಾದ ಸಂಪೂರ್ಣ ಹೊಸ ಬಗೆಯ ಶಿಕ್ಷಣ. ಈ ವಿಧಾನವು ಎಲ್ಲಾ ವಿಷಯಗಳನ್ನು ಸಮಾನವಾಗಿ ಕಲಿಸುವುದರ ಜೊತೆ ಜೊತೆಗೆ ಉತ್ಪಾದಕ ಕೆಲಸವನ್ನು ಮುಖ್ಯ ಸಾಧನವನ್ನಾಗಿ ಬಳಸುತ್ತದೆ. ಇದು ತಲೆ (ಜ್ಞಾನ), ಹೃದಯ (ಅಂತಃಕರಣ) ಮತ್ತು ಕೈಗಳ (ಕೌಶಲ) ಸುಸಂಗತ ಬೆಳವಣಿಗೆಗೆ ಕಾರಣವಾಗುತ್ತದೆ.

ಕೆಲಸದ ಮೂಲಕ ಕಟ್ಟಿಕೊಳ್ಳುವ ಜ್ಞಾನವು ಸಮಗ್ರವಾಗಿ, ಅಂದರೆ ತಲೆ, ಹೃದಯ ಮತ್ತು ಕೈಗಳ ನಡುವೆ ಸಮನ್ವಯವನ್ನು ಸಂಯೋಜಿಸುವ ಮೂಲಕ ಬಹುಆಯಾಮದ ಕಲಿಕೆಯ ಗುಣಲಕ್ಷಣಗಳನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ. ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಓದು, ಬರಹ ಮತ್ತು ಲೆಕ್ಕಾಚಾರಗಳಿಗೆ ಮಾತ್ರ ಒತ್ತು ನೀಡಿದ್ದು, ದೈಹಿಕ ಶ್ರಮದ ಕೆಲಸಕ್ಕೆ ಮಕ್ಕಳನ್ನು ಅಣಿಗೊಳಿಸುವ, ಜ್ಞಾನ ಹಾಗೂ ದೈಹಿಕ ದುಡಿಮೆಯನ್ನು ಸಮಾನವಾಗಿ ಗೌರವಿಸುವ ಗುಣಲಕ್ಷಣಗಳು ಕಾಣೆಯಾಗಿವೆ. ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸುವ ಬಹುಪಾಲು ಮಕ್ಕಳಲ್ಲಿ ಎಲ್ಲಾ ಬಗೆಯ ಅಸಾಮರ್ಥ್ಯ (ವಿಷಯ ಜ್ಞಾನವನ್ನೂ ಒಳಗೊಂಡಂತೆ) ಕಂಡುಬರುವುದನ್ನು ಹಲವಾರು ಅಧ್ಯಯನಗಳು ಬಹಿರಂಗಪಡಿಸಿವೆ.

ಈ ಅರ್ಥದಲ್ಲಿ, ಪಠ್ಯಕ್ರಮ ಮತ್ತು ಕಲಿಕೆಯ ಕೇಂದ್ರದಲ್ಲಿ ಉತ್ಪಾದಕ ಕೆಲಸವನ್ನು ಇರಿಸುವುದು ಶಾಲಾ ಶಿಕ್ಷಣದ ಗತಿಯನ್ನು ಪೂರ್ಣವಾಗಿ ಬದಲಿಸುತ್ತದೆ. ಉತ್ಪಾದನೆ ಕೇಂದ್ರಿತ ಕಲಿಕೆಯ ಅನುಭವವು ಬಾಲ್ಯ ಮತ್ತು ಹದಿಹರೆಯದ ವಿವಿಧ ಹಂತಗಳಲ್ಲಿ ಪರಿಣಾಮಕಾರಿ ಹಾಗೂ ನಿರ್ಣಾಯಕ ಬೆಳವಣಿಗೆಯ ಸಾಧನವಾಗುತ್ತದೆ. ಆ ಮೂಲಕ, ಜಾತ್ಯತೀತ, ಸಮಾನತೆ, ಸಹಕಾರ, ಸಹಬಾಳ್ವೆ ಮತ್ತು ಪ್ರಜಾಪ್ರಭುತ್ವ ಸಮಾಜದ ಕಡೆಗೆ ಚಲಿಸುತ್ತದೆ. ಗಾಂಧೀಜಿಯ ಮೂಲ ಶಿಕ್ಷಣ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳುವ ಕೆಲಸ ಇಂದಿನ ತುರ್ತು ಅಗತ್ಯವಾಗಿದೆ. ಕಾಲಮಿತಿಯೊಳಗೆ ಇದನ್ನು ಸಾರ್ವತ್ರಿಕವಾಗಿ ಜಾರಿಗೊಳಿಸುವ ದಿಸೆಯಲ್ಲಿ ನಾವು ಗಂಭೀರವಾಗಿ ಚಿಂತಿಸಬೇಕಿದೆ.

ಚುರುಮುರಿ



ಮತದಾರರ ಉದ್ಧಾರ

● ಸುಮಂಗಲಾ

'ಕಣ್ಣೀರ ಧಾರೆ ಇದೇಕೆ, ಇದೇಕೆ, ಚನ್ನಪಟ್ಟಣದಾ ಗೊಂಬೆ ಈ ಶೋಕವೇಕೆ?' ಬೆಕ್ಕಣ್ಣ ಹಾಡುತ್ತ ಕಣ್ಣೀರು ಒರೆಸಿಕೊಂಡಿತು.

'ಯಾಕಲೆ, ಅಷ್ಟ್ ದುಃಖಿಸಲಾಕೆ ಹತ್ತೀ?' ಎಂದೆ ಕರ್ಚೀಪು ಕೊಡುತ್ತ. 'ಪಾಪ, ನಿಖಿಲಣ್ಣ...' ಎಂದು ಮತ್ತೆ ಸೊರ್‌ಸೊರ್‌ಗುಟ್ಟಿತು.

'ಹೋಗ್ಲಿಬಿಡಲೇ, ಕೆಲವು ಸಲ ಅದೃಷ್ಟ ಕೈಕೊಡತೈತಿ' ಎಂದು ಸಂತೈಸಿದೆ.

'ದೇಗೌ ಅಜ್ಜಾರಿಂದ ಹಿಡಿದು ಕುಮಾರಣ್ಣನವರೆಗೆ ಎಲ್ಲಾರೂ ಎಷ್ಟ್ ಪ್ರಚಾರ ಮಾಡಿದ್ರು. ಚನ್ನಪಟ್ಟಣ ಉದ್ಧಾರ ಮಾಡತೀವಿ ಅಂದಿದ್ರು. ಒಟ್ನು ಮತದಾರ್ರಿಗೆ ಉದ್ಧಾರ ಆಗೂದು ಬ್ಯಾಡಾಗೈತಿ' ಅಂತ ನಿಟ್ಟುಸಿರಿಟ್ಟಿತು.

'ಇನ್ನಾ ನಿಖಿಲಣ್ಣಂಗೆ ಮನಾರ ವಯಸೈತಿ, ಮತದಾರ್ರಿನ ಉದ್ಧಾರ ಮಾಡಾಕೆ ಭಾಳ ಅವಕಾಶ ಅದಾವೇಳು. ಇಲ್ಲಿ ಹೋಗಲಿ, ಬ್ಯಾರೆ ಎರಡು ಕಡೆನೂ ಮತದಾರ್ರು ಕಮಲಕ್ಕಂಗೆ ಹಿಂಗೆ ಕೈಕೊಡೂದೇನು'.

'ಕೈ ಪಾಳಯದೋರು ಕೈಬಿಚ್ಚಿ ಹಣದ ಹೊಳೆ ಹರಿಸ್ಯಾರೆ, ಅದಕ್ಕೇ ಗೆದ್ದಾರೇಳು' ಎಂದು ಮೂತಿ ತಿರುವಿತು.

'ಆದ್ರೂ ಚನ್ನಪಟ್ಟಣದಾಗೆ ಕಮಲ- ದಳ ದೋಸ್ತಿನೂ ಹಿಂಗೆ ಕೈಕೊಟ್ಟಿತಲ್ಲ'.

'ಇಲ್ಲಿ ಮತದಾರ್ರು ಕೈಕೊಟ್ಟರೇನಾತು, ಮಹಾರಾಷ್ಟ್ರದಾಗೆ ಎಷ್ಟು ಭರ್ಜರಿಯಾಗಿ ಮಹಾಯುತಿನ ಕೈಹಿಡಿದಾರೆ' ಎಂದು ಮೀಸೆ ತಿರುವಿತು.

'ಅಲ್ಲೂ ಈಗ ಸಿಎಂ ಕುರ್ಚಿಗಿ ರೇಸ್ ನಡದೈತಿ. ಫಡಣವೀಸ್ ಮಾತೋಶ್ರೀಯವರು ನನ್ನ ಮಗನೇ ಸಿಎಂ ಎಂದಾರೆ. ಅಜಿತ್ ಪವಾರ್ ಪತ್ನಿಯವರು ನಮ್ಮ ಪತಿರಾಯರೇ ಸಿಎಂ ಎಂದಾರೆ. ಶಿಂದೇ ಸಾಹೇಬ್ರು, ಯಾರ ಏನರೆ ಹೇಳಲಿ ನಾನೇ ಸಿಎಂ ಅಂದಾರೆ'.

'ಕುರ್ಚಿಗೆ ಯಾರೇ ಟುವಾಲ್ ಹಾಕಿರಲಿ, ಕೊನಿಗೆ ದೆಹಲಿ ಹೈಕಮಾಂಡ್ ಹೇಳಿದವರೇ ಸಿಎಂ! ಈಗ ಮತದಾರರು ಯಾರ ಕೈಹಿಡಿದರೇನು, ಯಾರ ಕೈಬಿಟ್ಟರೇನು, ಒಟ್ರಾಶಿ ಆಮೇಲೆ ಮುಂದಿನ ಚುನಾವಣೆವರೆಗೆ ಗೆದ್ದವರು, ಸೋತವರು ಇಬ್ಬರೂ ಮತದಾರರ ಕೈಬಿಟ್ಟಿರತಾರೆ ಅಷ್ಟೆ!' ಎಂದು ಬೆಕ್ಕಣ್ಣ ಕಣಿ ಹೇಳಿತು.

ದಿನದ ಟ್ವೀಟ್

ಕಳವಳದ ಸಂಗತಿ

ಹವಾಮಾನ ಬದಲಾವಣೆಯು ಮುಂದಿನ 10 ವರ್ಷಗಳಲ್ಲಿ 10 ಕೋಟಿಗೂ ಹೆಚ್ಚು ಜನರನ್ನು ಬಡತನಕ್ಕೆ ತಳ್ಳುತ್ತದೆ ಎಂದು ವಿಶ್ವಬ್ಯಾಂಕ್ ಅಂದಾಜು ಮಾಡಿದೆ.



ಕುಲದೀಪ್ ಸೂರಿ

ಕಿಡಿನುಡಿ

ಪಶ್ಚಿಮ ಬಂಗಾಳ ರಾಜ್ಯಪಾಲ ಸಿ.ವಿ. ಆನಂದ ಅವರು ರಾಜಭವನದಲ್ಲಿ ತಮ್ಮ ಪುತ್ಥಳಿಯನ್ನು ಸ್ವತಃ ಅನಾವರಣ ಮಾಡಿಕೊಳ್ಳುವ ಮೂಲಕ ರಾಜಕೀಯ ಟೀಕೆಗಳಿಗೆ ಗುರಿಯಾಗಿದ್ದಾರೆ. ಅವರದು ಅತ್ಯಂತ ಮೂರ್ಖತನದ ನಡೆ...



ಜವಾಹರ್ ಸರ್ಕಾರ್, ನಿವೃತ್ತ ಐಎಎಸ್ ಅಧಿಕಾರಿ

25 ವರ್ಷಗಳ ಹಿಂದೆ

ಗುರುವಾರ, 25-11-1999

● **ಆನೆಗಳ ಆಟ: ರೈತರ ಸಂಕಟ, ಮಂದಿಗೆ ರಂಜನೆ**

ಬೆಂಗಳೂರು, ನ. 24– ಕಾಡಾನೆಗಳ ಹಿಂಡು ಬನ್ನೇರುಘಟ್ಟ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ನಿನ್ನೆ ರಾತ್ರಿಯಿಂದ ನಸುಕಿನವರೆಗೆ ಎಬ್ಬಿಸಿದ ಹಾವಳಿಯಿಂದ ಅಪಾರ ಪ್ರಮಾಣದ ಬೆಳೆಹಾನಿ ಸಂಭವಿಸಿದೆ.

ಆನೆಗಳು ಪದೇ ಪದೇ ಈ ಭಾಗದಲ್ಲಿ ನಡೆಸುತ್ತಿರುವ ಹಾವಳಿಯನ್ನು ಸಮರ್ಪಕವಾಗಿ ನಿಗ್ರಹಿಸಿಲ್ಲ ಎಂದು ರೊಚ್ಚಿಗೆದ್ದ ಗ್ರಾಮಸ್ಥರು ಇಂದು ಬೆಳಿಗ್ಗೆ ಅರಣ್ಯ ಇಲಾಖೆ ಸಿಬ್ಬಂದಿಯ ಮೇಲೆ ಹಲ್ಲೆ ನಡೆಸಿದರು.

● **ಅಶುದ್ಧತೆ: ಬೆಂಗಳೂರು ಸೇರಿ ಐದು ನಗರಗಳಿಗೆ ಕೋರ್ಟ್ ಛೀಮಾರಿ**

ನವದೆಹಲಿ, ನ. 24 (ಪಿಟಿಐ)– ಪೌರಕಾರ್ಮಿಕರು ಸಾಕಷ್ಟು ಸಂಖ್ಯೆಯಲ್ಲಿದ್ದರೂ ಶುದ್ಧತೆಯ ಕುರಿತು ಹೆಚ್ಚಿನ ಕಾಳಜಿ ವಹಿಸದ ಬೆಂಗಳೂರು ಸೇರಿದಂತೆ ರಾಷ್ಟ್ರದ ಐದು ನಗರಗಳಿಗೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದೆ. ದೆಹಲಿ, ಮುಂಬೈ, ಚೆನ್ನೈ ಮತ್ತು ಕಲ್ಕತ್ತವು ಕೋರ್ಟಿನ ವಕ್ರದೃಷ್ಟಿಗೆ ಬಿದ್ದ ಉಳಿದ ನಾಲ್ಕು ನಗರಗಳು.

50 ವರ್ಷಗಳ ಹಿಂದೆ

ಸೋಮವಾರ, 25-11-1974

● **ಮಾಸ್ತಿಗೆ ಅಕಾಡೆಮಿ ಫೆಲೋಷಿಪ್**

ಬೆಂಗಳೂರು, ನ. 24– ಕೇಂದ್ರ ಸಾಹಿತ್ಯ ಅಕಾಡೆಮಿಯು ರಾಜಕೀಯ ಪ್ರಭಾವದಿಂದ ಮುಕ್ತವಾಗಿರಲೆಂದು ಹಿರಿಯ ಸಾಹಿತಿ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಇಂದು ಇಲ್ಲಿ ಆಶಿಸಿದರು.

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ನಡೆದ ಸಮಾರಂಭದಲ್ಲಿ ಅಕಾಡೆಮಿಯ 'ಫೆಲೋ' ಗೌರವ ಸ್ವೀಕರಿಸಿ ಮಾತನಾಡಿದ ಅವರು, ಅಕಾಡೆಮಿ ಸೂತ್ರಗಳನ್ನು ಹಿಡಿದಿರುವವರಿಗೆ ಇತರ ಮೂರು ಜವಾಬ್ದಾರಿಗಳನ್ನು ಹೊರಿಸಿದರು.

ಅಕಾಡೆಮಿಯು ಶ್ರೇಷ್ಠ ಗ್ರಂಥಗಳಿಗೆ ನೀಡುವ ಐದು ಸಾವಿರ ರೂ.ಗಳ ಬಹುಮಾನವನ್ನು 25 ಸಾವಿರ ರೂ.ಗಳಿಗೆ ಏರಿಸಬೇಕು. ಭಾರತದ ವಿವಿಧ ಭಾಷೆಗಳಲ್ಲಿರುವ ಉತ್ತಮ ಗ್ರಂಥಗಳನ್ನು ಇಂಗ್ಲಿಷ್ ಅಥವಾ ಹಿಂದಿಗೆ ಭಾಷಾಂತರ ಮಾಡಿಸಬೇಕು. ರಾಷ್ಟ್ರಮಟ್ಟದ ವಿಮರ್ಶೆ 'ಕೊರತೆ ನಿವಾರಣೆಯಾಗಲಿ' ಎಂದು ಆಶಿಸಿದರು.

● **ಉದ್ಯೋಗಕ್ಕೆ ಪದವಿ ಅನಗತ್ಯ**

ನವದೆಹಲಿ, ನ. 24– ಉದ್ಯೋಗಕ್ಕೆ ವಿಶ್ವವಿದ್ಯಾಲಯ ಪದವಿ ಅನಗತ್ಯವೆಂಬ ಹಾಗೂ ಹೈಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ಅನುತ್ತೀರ್ಣಗೊಳಿಸುವ ಪದ್ಧತಿ ತ್ಯಜಿಸಿ 'ಗ್ರೇಡ್ ಷೀಟು' ಪದ್ಧತಿ ಜಾರಿಗೆ ತರಬೇಕೆಂಬ ಶಿಕ್ಷಣ ಸುಧಾರಣೆಯ ಕ್ರಾಂತಿಕಾರಕ ಶಿಫಾರಸುಗಳನ್ನು ರಾಷ್ಟ್ರದ ಖ್ಯಾತ ಶಿಕ್ಷಣವೇತ್ತರು ಸ್ವಾಗತಿಸಿದ್ದಾರೆ. ಈ ಸಲಹೆಗಳನ್ನು ಶಿಕ್ಷಣ ಕುರಿತ ಕೇಂದ್ರ ಸಲಹಾ ಮಂಡಳಿ ಮಾಡಿತ್ತು. ಈ ಬಗ್ಗೆ ಯು.ಎನ್.ಐ. ನಡೆಸಿದ ಸಮೀಕ್ಷೆಯೊಂದು ಈ ಅಂಶವನ್ನು ಸ್ಪಷ್ಟಪಡಿಸಿದೆ.

ಯುನೆಸ್ಕೊದ ಮಾಜಿ ಡೆಪ್ಯುಟಿ ಡೈರೆಕ್ಟರ್ ಜನರಲ್ ಡಾ. ಮಾಲ್ಕೋಮ್ ಆದಿಶೇಷಯ್ಯ ಅವರು ಹೇಳಿರುವ ಮಾತು ಅನೇಕ ಶಿಕ್ಷಣ ತಜ್ಞರ ಅಭಿಪ್ರಾಯಗಳನ್ನು ಪ್ರತಿನಿಧಿಸುತ್ತದೆ. ಅವರು ಹೀಗೆನ್ನುತ್ತಾರೆ: ಉದ್ಯೋಗಕ್ಕೆ ಪದವಿ ಅನಗತ್ಯವಾದರೆ, ವಿಶ್ವವಿದ್ಯಾಲಯಗಳಿಗೆ ಮತ್ತು ಕಾಲೇಜುಗಳಿಗೆ ಈಗಿರುವ ಹುಚ್ಚಾಪಟ್ಟೆ ನೂಕುನುಗ್ಗಲು ಬಹಳ ಕಡಿಮೆಯಾಗುತ್ತದೆ. ಉನ್ನತ ಶಿಕ್ಷಣದ ಶೈಕ್ಷಣಿಕ ಮಟ್ಟ ಹೆಚ್ಚುತ್ತದೆ.

ಅಲ್ಲದೆ ಐಎಎಸ್ ಮತ್ತು ಐಎಫ್‌ಎ ಮುಂತಾದ ಅಖಿಲ ಭಾರತ ಸೇವಾ ವರ್ಗಗಳ ಆಯ್ಕೆಗೂ ಈಗಿರುವ ಪದವಿ ಮಿತಿಯ ಬದಲು ಹೈಸ್ಕೂಲು ಶಿಕ್ಷಣದ ಮಿತಿಯನ್ನು ನಿಗದಿಪಡಿಸಿದರೆ ಸಾಕು. ಆನಂತರ ಆ ವರ್ಗಗಳಲ್ಲಿ ಹೇಗಿದ್ದರೂ ಉದ್ಯೋಗಕ್ಕೆ ಅವಶ್ಯಕವಾದ ಉನ್ನತ ಶಿಕ್ಷಣ ಮತ್ತು ತರಬೇತಿಯನ್ನು ಅವರು ಪಡೆಯುತ್ತಾರೆ.

ಚರ್ಚೆ

ದುಡಿಯಿರಿ, ಉಳಿಸಿರಿ, ಉಳಿಯಿರಿ

ದುಡಿಮೆಯ ಅವಧಿಯನ್ನು ಹೆಚ್ಚಿಸುವುದಕ್ಕಿಂತ, ಯುವಕರು ತಮ್ಮ ಕೆಲಸಕ್ಕೆ ಬೇಕಾಗುವ ಕೌಶಲ ಹೆಚ್ಚಿಸಿಕೊಳ್ಳುವುದಕ್ಕೆ ಪ್ರೋತ್ಸಾಹ ನೀಡುವುದು ಅವಶ್ಯ

● ಮಲ್ಲಿಕಾರ್ಜುನ ಹೆಗ್ಗಳಗಿ

ಫಿನ್ಲೆಂಡ್ ದೇಶದ ಪ್ರಧಾನಮಂತ್ರಿಯಾಗಿ ಸನ್ನಾ ಮರಿನ್ ಅವರು 2019ರಲ್ಲಿ ಅಧಿಕಾರಕ್ಕೆ ಬಂದ ಹೊಸದರಲ್ಲಿ, ವಾರದ ದುಡಿಮೆಯ ದಿನಗಳನ್ನು 6ರಿಂದ 5ಕ್ಕೆ ಇಳಿಸಿದ್ದರು. 'ನಾನು, ಇಬ್ಬರು ಮಕ್ಕಳ ತಾಯಿಯಾಗಿ ಹೇಳುತ್ತೇನೆ, ಜನ ತಮ್ಮ ಕುಟುಂಬದ ಸದಸ್ಯರು ಮತ್ತು ಆತ್ಮೀಯರೊಂದಿಗೆ ಹೆಚ್ಚು ಸಮಯ ಕಳೆಯಲು ಇಚ್ಛಿಸುತ್ತಾರೆ. ಇದು ನೆಮ್ಮದಿಯ ಬದುಕಿನ ದಾರಿ. ಸಾಹಿತ್ಯ, ಕಲೆ, ಸಂಸ್ಕೃತಿ, ಹವ್ಯಾಸಗಳಿಗೆ ಹೆಚ್ಚಿನ ಸಮಯ ಬೇಕಾಗುತ್ತದೆ. ಸಂತೋಷದಾಯಕ ಬದುಕಿಗೆ ಇವೆಲ್ಲ ಮುಖ್ಯ' ಎಂದು ಅವರು ಈ ಸಂದರ್ಭದಲ್ಲಿ ಹೇಳಿದ್ದರು. ವಿಶ್ವದ ಸಂತೋಷಭರಿತ ದೇಶಗಳ ಸೂಚ್ಯಂಕದಲ್ಲಿ ಫಿನ್ಲೆಂಡ್ ಸತತವಾಗಿ 6 ಬಾರಿ ಪ್ರಥಮ ಸ್ಥಾನ ಪಡೆದಿದೆ.

ಯುವಜನ ವಾರದಲ್ಲಿ 70 ತಾಸು ಕೆಲಸ ಮಾಡಬೇಕು ಎಂದು ಇನ್ಫೊಸಿಸ್ ಸಹ ಸಂಸ್ಥಾಪಕ ಎನ್.ಆರ್.ನಾರಾಯಣ ಮೂರ್ತಿ ಅವರು ನೀಡಿರುವ ಹೇಳಿಕೆ ಕುರಿತು ಚರ್ಚೆ ನಡೆಯುತ್ತಿರುವ ಈ ಸಂದರ್ಭದಲ್ಲಿ, ಸನ್ನಾ ಮರಿನ್ ಅವರು ಕೆಲಸದ ದಿನಗಳನ್ನು ಕಡಿಮೆ ಮಾಡಿದ ಮಹತ್ವದ ಸಂಗತಿ ನೆನಪಾಯಿತು.


ದುಡಿಮೆಯ ಅವಧಿಯನ್ನು ಹೆಚ್ಚಿಸುವುದಕ್ಕಿಂತ ಯುವಜನ ತಮ್ಮ ಕೆಲಸಕ್ಕೆ ಬೇಕಾಗುವ ಕೌಶಲ ಹೆಚ್ಚಿಸಿಕೊಳ್ಳುವುದಕ್ಕೆ ಪ್ರೋತ್ಸಾಹ ನೀಡುವುದು ಬಹಳ ಅವಶ್ಯ. ಹಾಗೆಯೇ ಕೆಲಸದ ಬಗ್ಗೆ ಪ್ರೀತಿ ಮತ್ತು ಶ್ರದ್ಧೆ ಬೆಳೆಸಿಕೊಳ್ಳುವುದಕ್ಕೆ ಮಾರ್ಗದರ್ಶನ ಮಾಡಬೇಕು. ಸಾಮಾನ್ಯ ಕೆಲಸಗಾರ 8 ತಾಸುಗಳಲ್ಲಿ ಮಾಡಬಹುದಾದ ಕೆಲಸವನ್ನು ಕುಶಲ ಕೆಲಸಗಾರ ಎರಡು–ಮೂರು ತಾಸಿನಲ್ಲಿ ಮಾಡಿ ಮುಗಿಸುತ್ತಾನೆ. ಅದರ ಗುಣಮಟ್ಟ ಕೂಡ ಉತ್ತಮವಾಗಿರುತ್ತದೆ. ಕೆಲಸಗಾರ ಎಷ್ಟು ತಾಸು ಕೆಲಸ ಮಾಡಿದ ಎನ್ನುವುದು ಮುಖ್ಯವಲ್ಲ. ಕೆಲಸದ ಗುಣಮಟ್ಟ ಮತ್ತು ಅದಕ್ಕೆ ತಗಲುವ ವೆಚ್ಚದ ನಿಯಂತ್ರಣ ಬಹಳ ಮುಖ್ಯ.

ಈಚೆಗೆ ನಮ್ಮ ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್‌ಗೇಟ್ ಮುರಿದುಬಿದ್ದು ದೊಡ್ಡ ಆತಂಕ ತಲೆದೋರಿದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಈ ಸಂಬಂಧ ಇಡೀ ಆಡಳಿತವೇ ದಿಕ್ಕು ತೋಚದಂತಾಗಿ ಕುಳಿತಾಗ, ಹಿರಿಯ ತಂತ್ರಜ್ಞ ಕನ್ನಯ್ಯ ನಾಯ್ಡು ಅವರ ನೇತೃತ್ವದ ತಂಡ ಆಗಮಿಸಿತು. ಇವರೆಲ್ಲ ಜಾಣ್ಮೆಯಿಂದ ಕೆಲವೇ ಗಂಟೆಗಳಲ್ಲಿ ಗೇಟ್ ಅಳವಡಿಸುವ ಕೆಲಸವನ್ನು ಯಶಸ್ವಿಯಾಗಿ ನೆರವೇರಿಸಿದರು. ರಾಜ್ಯದ ಜನರ ಆತಂಕ ದೂರವಾಯಿತು.

ಉತ್ಪಾದಕ ಉದ್ದೇಶಗಳಿಗೆ ಬಳಕೆಯಾಗುವ ಎಲ್ಲ ಭೌತಿಕ ಮತ್ತು ಬೌದ್ಧಿಕ ಯತ್ನಗಳಿಗೆ 'ಶ್ರಮ' ಎಂದು ಕರೆಯುತ್ತೇವೆ. ಇದು ಉಲ್ಲಾಸದಿಂದ ಬಳಕೆಯಾಗಬೇಕಾದ ಶಕ್ತಿ. ಶ್ರಮಶಕ್ತಿಯನ್ನು ಒತ್ತಾಯಪೂರ್ವಕ ಅಥವಾ ಒತ್ತಡಕ್ಕೆ ಒಳಪಡಿಸಿ ದುಡಿಸುವುದರಿಂದ ದೇಹ ಮತ್ತು ಮನಸ್ಸು ಬಳಲುತ್ತವೆ. ಇದರಿಂದ ಹಲವು ದೈಹಿಕ ತೊಂದರೆಗಳು ಉಂಟಾಗುತ್ತವೆ.

ಜೀವನವು ದುಡಿಮೆ ಮತ್ತು ಹಣ ಗಳಿಕೆಗೆ ಮಾತ್ರ ಸೀಮಿತವಾಗಿಲ್ಲ. ಬದುಕಿನ ಭಿತ್ತಿಯು ವೃತ್ತಿಯ ಆಚೆಗೂ ಹರಡಿಕೊಂಡಿದೆ. ಕುಟುಂಬ, ಸ್ನೇಹಿತರು ಹಾಗೂ ಸಮಾಜದ ಮಧ್ಯೆ ನೆಮ್ಮದಿಯಿಂದ ಬದುಕುವುದಕ್ಕೆ ಸಮಯ ಕೊಡಬೇಕಾಗುತ್ತದೆ. ಮನುಷ್ಯರ ಶ್ರಮಶಕ್ತಿಗೂ ಒಂದು ಮಿತಿ ಇದೆ. ಅದನ್ನು ಮೀರಿ ಕೆಲಸಕ್ಕೆ ನಿಂತರೆ ಅದು ಕಾಟಾಚಾರದ ದುಡಿಮೆಯಾಗುತ್ತದೆ.

ದೇಶದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಲ್ಲಿ ಶೇಕಡ 70ರಷ್ಟು ಮಂದಿ ಅಸಂಘಟಿತ ವಲಯಕ್ಕೆ ಸೇರಿದವರಾಗಿದ್ದಾರೆ. ಇವರು ಸಣ್ಣ ಕೈಗಾರಿಕೆ, ಹೋಟೆಲ್, ಗ್ಯಾರೇಜ್, ವ್ಯಾಪಾರ ಮಳಿಗೆಗಳು, ಖಾಸಗಿ ಮತ್ತು ಸಹಕಾರಿ ಸಂಸ್ಥೆಗಳು, ಗಣಿ ಮತ್ತು ರಸ್ತೆ ನಿರ್ಮಾಣದ ವಲಯಗಳಲ್ಲಿ ಕೆಲಸ ಮಾಡುತ್ತಾರೆ. ಇವರನ್ನು ಪ್ರತಿದಿನ 14- 15 ಗಂಟೆ ದುಡಿಸಿಕೊಳ್ಳಲಾಗುತ್ತದೆ. ಇಂಥ ಕಾರ್ಮಿಕರಿಗೆ ಸಾಮಾನ್ಯವಾಗಿ 50 ವರ್ಷ ವಯಸ್ಸಿಗೇ ಮುಪ್ಪು ಆವರಿಸುತ್ತದೆ. ಅನಾರೋಗ್ಯ ಉಂಟಾಗಿ ಇಡೀ ಕುಟುಂಬವೇ ಬಳಲಬೇಕಾಗುತ್ತದೆ.



ದಿನದ ದುಡಿಮೆಯ ಅವಧಿಯನ್ನು 8 ತಾಸಿಗೆ ಮಿತಿಗೊಳಿಸುವುದಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೋರಾಟಗಳು ನಡೆದಿವೆ. ಕಾರ್ಮಿಕರ ಬಲಿದಾನವೂ ಆಗಿದೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಪ್ರಯತ್ನದ ಫಲವಾಗಿ ಕೆಲಸದ ಅವಧಿಯನ್ನು 8 ಗಂಟೆಗೆ ನಿಗದಿಪಡಿಸಲು ಸಾಧ್ಯವಾಗಿದೆ. ಸ್ಪೇನ್ ದೇಶದಲ್ಲಿ ಇದು ಮೊದಲು ಜಾರಿಯಾಯಿತು. ಬ್ರಿಟಿಷ್ ಕಾರ್ಮಿಕ ಕೌನ್ಸಿಲ್ ಸದಸ್ಯರಾಗಿದ್ದ ಬಿ.ಆರ್.ಅಂಬೇಡ್ಕರ್, 8 ತಾಸು ಕೆಲಸದ ಅವಧಿಯನ್ನು ನಿಗದಿಪಡಿಸುವುದಕ್ಕೆ ಒತ್ತಾಯಪಡಿಸಿದ್ದರು. ಹೊಸದಾಗಿ ರಚನೆಯಾದ ಕಾರ್ಮಿಕ ಕಾನೂನಿನಲ್ಲಿ ದುಡಿಮೆಯ ಅವಧಿಯನ್ನು 8 ಗಂಟೆಗೆ ನಿಗದಿಪಡಿಸಲಾಯಿತು.

ಯಾಂತ್ರಿಕ ಬೆಳವಣಿಗೆ ಮತ್ತು ಹೊಸ ಆವಿಷ್ಕಾರಗಳಿಂದ ಮಾನವನ ದುಡಿಮೆಯ ಭಾರ ಕಡಿಮೆಯಾಗಬೇಕು. ಅದರ ಬದಲು ಅದನ್ನು ಹೆಚ್ಚಿಸುವುದಕ್ಕೆ ಪ್ರಯತ್ನಿಸುವುದು ಹಿಂದಕ್ಕೆ ಚಲಿಸುವ ಪ್ರಯತ್ನವಾಗುತ್ತದೆ.

'ಹೆಜ್ಜಾಲ' ಚದುರಂಗರ ಪ್ರಸಿದ್ಧ ಕಾದಂಬರಿ. ಇದರಲ್ಲಿ ಕಾಲೂರ ಎಂಬ ಯುವ ಕೂಲಿಕಾರನ ಚಿತ್ರಣವಿದೆ. ಕಾಲೂರ ಕಾಫಿ ತೋಟದ ಕಾರ್ಮಿಕನಾಗಿ ಹಗಲೂ ರಾತ್ರಿ ದುಡಿಯುವುದರಲ್ಲಿ ಅವಸಾನವಾಗಿ ಹೋಗುತ್ತಾನೆ. ಅವನಿಗೆ ಕುಟುಂಬ ಇದ್ದದ್ದೇ ನೆನಪಿರುವುದಿಲ್ಲ. ಊರಲ್ಲಿ ನಡೆಯುವ ಬಯಲಾಟ ನೋಡುವ, ಭಜನೆಯ ಪದ ಕೇಳುವ, ಊರ ದೇವರ ಜಾತ್ರೆಯ ತೇರು ಎಳೆಯುವ ಅವಕಾಶವೇ ಸಿಗುವುದಿಲ್ಲ.

ಕೆಲಸದ ಅವಧಿ ಹೆಚ್ಚಿಸುವುದರಿಂದ ಕೆಲಸಗಾರರು ಕಾಲೂರನ ಹಾಗೆ ಬದುಕಿನುದ್ದಕ್ಕೂ ದುಡಿಯುತ್ತಾ ಸರಿದುಹೋಗುವ ಹಿಂಸೆ ಅನುಭವಿಸಬೇಕಾಗುತ್ತದೆ ಎಂಬುದನ್ನು ಮರೆಯಬಾರದು.

ವಾಚಕರ ವಾಣಿ

ಫಲಿತಾಂಶವನ್ನು ವಿನಮ್ರವಾಗಿ ಸ್ವೀಕರಿಸಿ

ಜಾರ್ಖಂಡ್ ವಿಧಾನಸಭಾ ಚುನಾವಣೆ ಮತ್ತು ಕರ್ನಾಟಕದಲ್ಲಿನ ಉಪಚುನಾವಣೆಯ ಜಯವನ್ನು ಸಂಭ್ರಮಿಸಿರುವ 'ಇಂಡಿಯಾ' ಮೈತ್ರಿಕೂಟವು ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿನ ತನ್ನ ಸೋಲಿನ ಹೊಣೆಯನ್ನು ಇವಿಎಂ ಮೇಲೆ ಹೊರಿಸಿ, ಮೋಸ ನಡೆದಿರುವ ಗುಮಾನಿ ವ್ಯಕ್ತಪಡಿಸಿರುವುದು ಅತ್ಯಂತ ಕೆಟ್ಟ ರಾಜಕೀಯ ನಡೆ. ಪ್ರತಿ ಬಾರಿ ಗೆದ್ದಾಗ ಖುಷಿಪಡುವ ಇಂಡಿಯಾ ಮೈತ್ರಿಕೂಟ, ಸೋತಾಗ ಮಾತ್ರ ಇವಿಎಂ ಮೇಲೆ ದೋಷಾರೋಪ ಹೊರಿಸುವುದು ಸಲ್ಲದು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರ ಪ್ರಭುಗಳ ಜನಾದೇಶವನ್ನು ಗೌರವಪೂರ್ವಕವಾಗಿ ಸ್ವೀಕರಿಸಬೇಕು. ಜಗತ್ತಿನಲ್ಲಿಯೇ ಅತ್ಯಂತ ಹೆಚ್ಚು ಮತದಾರರನ್ನು ಹೊಂದಿರುವ ಭಾರತದಲ್ಲಿ ಚುನಾವಣಾ ಪ್ರಕ್ರಿಯೆಯನ್ನು ಚುನಾವಣಾ ಆಯೋಗ ವ್ಯವಸ್ಥಿತ ರೀತಿಯಲ್ಲಿ ನಡೆಸಿಕೊಡುತ್ತಿದೆ. ಇದು ಜಗತ್ತಿನ ಇತರ ರಾಷ್ಟ್ರಗಳ ಅಚ್ಚರಿಗೂ ಕಾರಣವಾಗಿರುವುದು ಸತ್ಯ. ಹೀಗಿರುವಾಗ, ಕ್ಷುಲ್ಲಕ ರಾಜಕೀಯಕ್ಕಾಗಿ ಮತಯಂತ್ರಗಳನ್ನು ದೂರದೆ, ಫಲಿತಾಂಶವನ್ನು ವಿನಮ್ರವಾಗಿ ಸ್ವೀಕರಿಸಬೇಕು.

ಲಕ್ಷ್ಮೀಕಾಂತ್ ಕೊಟ್ಟಾರ ಚೌಕಿ, ಮಂಗಳೂರು

ಪರಿಸರ ಪದವೀಧರರಿಗೆ ಸಿಗಲಿ ಆದ್ಯತೆ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಹುದ್ದೆಗೆ ಇದ್ದ ಅರ್ಹತಾ ಮಾನದಂಡಗಳಿಗೆ ತಿದ್ದುಪಡಿ ಮಾಡಿರುವ ಸರ್ಕಾರ, ಯಾವುದೇ ವಿಜ್ಞಾನ ಸ್ನಾತಕೋತ್ತರ ಅಥವಾ ಎಂಜಿನಿಯರಿಂಗ್ ಪದವೀಧರರು ಅರ್ಜಿ ಹಾಕಬಹುದು ಎಂದು ತಿಳಿಸಿರುವುದು ಕಳವಳಕಾರಿಯಾಗಿದೆ. ನಮ್ಮ ಇಂದಿನ ವಿದ್ಯಾಭ್ಯಾಸ ಹೇಗಿದೆಯೆಂದರೆ, ಪರಿಸರ ವಿಜ್ಞಾನವನ್ನು ಬೇರೆಯೇ ವಿಷಯವಾಗಿ ಬೋಧಿಸಲಾಗುತ್ತಿದೆ. ಮಿಕ್ಕೆಲ್ಲ ವಿಜ್ಞಾನ ವಿಭಾಗಗಳ ಬಹುತೇಕ ಪದವೀಧರರಿಗೆ ಪರಿಸರ ಮತ್ತು ಪರಿಸರ ಮಾಲಿನ್ಯದ ಬಗ್ಗೆ ಸಾಮಾನ್ಯ ತಿಳಿವಳಿಕೆ, ಕಳಕಳಿ, ಕುತೂಹಲ ಏನೂ ಇರುವುದಿಲ್ಲ. ಈ ಅಧ್ಯಕ್ಷ ಹುದ್ದೆಗೆ ಇದ್ದ ಅರ್ಹತೆಗಳಲ್ಲಿ ಪರಿಸರ ವಿಜ್ಞಾನದ ಪದವೀಧರರಾಗಿರಬೇಕು ಎಂಬುದೂ ಒಂದಾಗಿತ್ತು.

ರಾಜ್ಯ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಕೂಡ ಪರಿಸರ ಜ್ಞಾನ ಉಳ್ಳವರೇ ಈ ಹುದ್ದೆಗೆ ಬರಬೇಕೆಂಬ ಆಶಯ ವ್ಯಕ್ತಪಡಿಸಿವೆ. ಈ ಕುರಿತು ಮಂಡಳಿ ಈವರೆಗೆ ಹೊಂದಿದ್ದ ತತ್ವವನ್ನು ಮತ್ತು ನ್ಯಾಯಾಲಯಗಳ ಆಶಯವನ್ನು ಬದಿಗೊತ್ತಿ ಈ ಪ್ರಕಟಣೆ ಹೊರಡಿಸಿರುವುದು ಆತಂಕಕಾರಿಯಾಗಿದೆ. ಈ ಹುದ್ದೆಗೆ ಜೀವಜಾಲದ ಪರಿಕಲ್ಪನೆ ಇರದ ಪದವೀಧರ ಬಂದರೆ, ಈಗಾಗಲೇ ಮಾಲಿನ್ಯದಿಂದ ಬಸವಳಿದಿರುವ ಪರಿಸರಕ್ಕೆ ಎಷ್ಟರಮಟ್ಟಿಗೆ ನ್ಯಾಯ ಒದಗಿಸಬಲ್ಲರು ಎಂಬ ಆತಂಕ ಪರಿಸರಪ್ರಿಯರದ್ದಾಗಿದೆ. ಪರಿಸರ ವಿಜ್ಞಾನದ ಪದವೀಧರರಾಗಿದ್ದು, ಪರಿಸರದ ಬಗ್ಗೆ ಸರಿಯಾದ ಜ್ಞಾನ ಮತ್ತು ಕಾಳಜಿ ಇರುವವರೊಬ್ಬರು ಈ ಹುದ್ದೆಗೆ ಬರಲಿ ಎಂಬುದು ಪರಿಸರಪ್ರೇಮಿಗಳ ಆಶಯ.

ವಿಶಾಲಾಕ್ಷಿ ಶರ್ಮಾ, ಮಮತಾ ರೈ, ಶಾರದಾ ಗೋಪಾಲ, ಸರೋಜಾ, 'ಪರಿಸರಕ್ಕಾಗಿ ನಾವು' ವೇದಿಕೆ

ಸಂದೇಶ ರವಾನಿಸಬಹುದಿತ್ತು...

ರಾಜ್ಯದ ಉಪಚುನಾವಣೆಯಲ್ಲಿ ಬಿಜೆಪಿ– ಜೆಡಿಎಸ್ ಮುಗ್ಗರಿಸಿವೆ. ಸಂಡೂರಿನಲ್ಲಷ್ಟೇ ಕುಟುಂಬಕ್ಕೆ ಮಣೆಹಾಕಿದ ಮತದಾರ, ಉಳಿದ ಎರಡು ಕ್ಷೇತ್ರಗಳಲ್ಲಿ ಕುಟುಂಬ ರಾಜಕಾರಣಕ್ಕೆ ಸರಿಯಾದ ಪಾಠ ಕಲಿಸಿದ್ದಾನೆ. ಜೆಡಿಎಸ್ ಚನ್ನಪಟ್ಟಣದಲ್ಲಿ, ಬಿಜೆಪಿಯು ಶಿಗ್ಗಾವಿಯಲ್ಲಿ ಕಾರ್ಯಕರ್ತನಿಗೆ ಟಿಕೆಟ್ ಕೊಟ್ಟಿದ್ದರೆ, ಸೋತಿದ್ದರೂ ಅಷ್ಟರಮಟ್ಟಿಗೆ ಒಳ್ಳೆಯ ಸಂದೇಶವೊಂದು ರವಾನೆಯಾಗುತ್ತಿತ್ತು.

ಗುರು ಜಗಳೂರು, ಹರಿಹರ

ಮತದಾರರ ಮನಸ್ಸು ಅರಿಯಲಾಗದು

ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳಲ್ಲಿ ಪ್ರಕಟಗೊಳ್ಳುತ್ತಿರುವ ಮತಗಟ್ಟೆ ಸಮೀಕ್ಷೆಗಳಲ್ಲಿ ಹೆಚ್ಚಿನವು ನೈಜ ಫಲಿತಾಂಶಕ್ಕೆ ಸಮೀಪವೂ ಇರುವುದಿಲ್ಲ. ಇಂತಹ ಸಮೀಕ್ಷೆಗಳನ್ನೇ ನಂಬಿಕೊಂಡು ಕೆಲವರು ತಮ್ಮ ಹಣ, ಆಸ್ತಿ, ಚಿನ್ನ, ಬೆಳ್ಳಿ, ಹಸು–ಎಮ್ಮೆಗಳನ್ನು ಪಣಕ್ಕಿಟ್ಟು ಕಳೆದುಕೊಂಡಿದ್ದಾರೆ. ಮಹಾರಾಷ್ಟ್ರ, ಜಾರ್ಖಂಡ್ ವಿಧಾನಸಭಾ ಚುನಾವಣೆ ಮತ್ತು ಕರ್ನಾಟಕದ ಉಪಚುನಾವಣೆಯ ಫಲಿತಾಂಶಗಳು, ಮತದಾರರು ಮತಗಟ್ಟೆ ಸಮೀಕ್ಷೆಗಳ ಬಗ್ಗೆ ವಿಶ್ವಾಸವನ್ನೇ ಕಳೆದುಕೊಳ್ಳುವಂತೆ ಮಾಡಿವೆ. ಮತದಾರರ ಮನಸ್ಸನ್ನು ಯಾರೂ ಅರಿಯಲು ಸಾಧ್ಯವಿಲ್ಲ ಎಂಬುದಕ್ಕೆ ಈಗಿನ ಫಲಿತಾಂಶಗಳೇ ನಿದರ್ಶನಗಳಾಗಿವೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಸಂವಿಧಾನ ಬದಲಾವಣೆಗೆ ಕರೆ?!

'ಸ್ವಾತಂತ್ರ್ಯಪೂರ್ವದಲ್ಲಿ ಭಾರತವು ಹಿಂದೂ ರಾಷ್ಟ್ರವಾಗಿತ್ತು. ಸ್ವಾತಂತ್ರ್ಯ ಬಂದಮೇಲೆ ಜಾತ್ಯತೀತ ರಾಷ್ಟ್ರವಾಯಿತು. ಈಗ ನಮ್ಮನ್ನು ಗೌರವಿಸುವ ಸಂವಿಧಾನ ಬರಬೇಕು' ಎಂದು ಉಡುಪಿ ಪೇಜಾವರ ಮಠದ ಸ್ವಾಮೀಜಿ ಆಗ್ರಹಿಸಿದ್ದಾರೆ (ಪ್ರ.ವಾ., ನ. 24). ಹಾಗಾದರೆ ಸ್ವಾಮೀಜಿಗೆ, ಸ್ವಾತಂತ್ರ್ಯಪೂರ್ವದ ಬ್ರಿಟಿಷ್ ಆಡಳಿತ ಸರಿಯಾಗಿತ್ತೇ? ಭಾರತಕ್ಕೆ ಸ್ವಾತಂತ್ರ್ಯ ಬಂದದ್ದು, ಜಾತ್ಯತೀತ ರಾಷ್ಟ್ರವಾದದ್ದು ಇಷ್ಟವಿಲ್ಲವೇ? ಸ್ವಾತಂತ್ರ್ಯದ ಹೋರಾಟದಲ್ಲಿ ಬಲಿಯಾದ ಲಕ್ಷೋಪಲಕ್ಷ ಭಾರತೀಯರ ಹೋರಾಟದ ಶ್ರಮ ವ್ಯರ್ಥವಾಯಿತೇ? ಅಂಬೇಡ್ಕರ್ ಬರೆದ ಸಂವಿಧಾನವನ್ನು ಜಾರಿಗೆ ತಂದದ್ದು, ಭಾರತವನ್ನು ಸರ್ವತಂತ್ರ ಸ್ವತಂತ್ರ ಗಣರಾಜ್ಯವನ್ನಾಗಿ ಘೋಷಣೆ ಮಾಡಿದ್ದು ವ್ಯರ್ಥವೇ? 'ನಮ್ಮನ್ನು ಗೌರವಿಸುವ ಸಂವಿಧಾನ' ಬರಬೇಕೆಂದರೆ, ಈಗಿರುವ ಸಂವಿಧಾನ ಯಾರನ್ನು ಗೌರವಿಸುತ್ತಿಲ್ಲ? ಇದೇನು, ಸಂವಿಧಾನ ಬದಲಾವಣೆಗೆ ಸ್ವಾಮೀಜಿ ಪರೋಕ್ಷವಾಗಿ ಕರೆ ನೀಡಿದ್ದಾರೆಯೇ?

ಹಿಂದೂಗಳನ್ನು ಬೇರೆ ಧರ್ಮಕ್ಕೆ ಸೆಳೆಯುವ ಕೆಲಸ ಆಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿರುವ ಸ್ವಾಮೀಜಿ, ನಮ್ಮ ಸಮಾಜದಲ್ಲಿರುವ ಜಾತೀಯತೆ, ಮಡಿ ಮೈಲಿಗೆ, ಮೇಲು ಕೀಳಿನ ತಾರತಮ್ಯ ಹೋಗಲಾಡಿಸುವ ಹಾಗೂ ಎಲ್ಲರನ್ನೂ ಗೌರವಿಸುವ ಸಾಮಾಜಿಕ, ಆರ್ಥಿಕ ಸುಧಾರಣೆಗಳ ಬಗ್ಗೆ ಏಕೆ ಮಾತನಾಡುತ್ತಿಲ್ಲ?

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಗುಕೇಶ್ ಮುಡಿಗೇರುವುದೇ ವಿಶ್ವ ಕಿರೀಟ?

ಭಾರತದ ಪ್ರತಿಭಾವಂತ ಗುಕೇಶ್ ದೊಮ್ಮರಾಜು ಮತ್ತು ಹಾಲಿ ಚಾಂಪಿಯನ್, ಚೀನಾದ ಡಿಂಗ್ ಲಿರೆನ್ ನಡುವೆ ವಿಶ್ವ ಚಾಂಪಿಯನ್ ಕಿರೀಟಕ್ಕಾಗಿ 12 ಪಂದ್ಯಗಳ ಫೈನಲ್ ಸಿಂಗಪುರದ ಸೆಂಟೊಸಾ ದ್ವೀಪದಲ್ಲಿ ಇಂದು ಆರಂಭವಾಗಲಿದೆ. ಚೆಸ್ ಪರಿಣತರ ಪ್ರಕಾರ ಗುಕೇಶ್ ಫೇವರೀಟ್ ಆಗಿದ್ದಾರೆ. ಗುಕೇಶ್ ಚೆನ್ನೈನವರೇ ಆದ ವಿಶ್ವನಾಥನ್ ಆನಂದ್ ನಂತರ ಭಾರತದ ಎರಡನೇ ಹಾಗೂ ವಿಶ್ವದ ಅತಿ ಕಿರಿಯ ಚಾಂಪಿಯನ್ ಆಗುವರೇ ಎಂಬ ಕುತೂಹಲ ಮೂಡಿದೆ



ಗುಕೇಶ್ ದೊಮ್ಮರಾಜು
ಫಿಡೆ ರೇಟಿಂಗ್: **2783**
ವಿಶ್ವ ಕ್ರಮಾಂಕದಲ್ಲಿ ಸ್ಥಾನ: **5**



ಡಿಂಗ್ ಲಿರೆನ್
ಫಿಡೆ ರೇಟಿಂಗ್: **2728**
ವಿಶ್ವ ಕ್ರಮಾಂಕದಲ್ಲಿ ಸ್ಥಾನ: **23**

• ನಾಗೇಶ್ ಶೆಣೈ

ಅದು ಕಾನ್ಪುರದಲ್ಲಿ ನಡೆದ 2022ರ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್. 23 ಗ್ರ್ಯಾಂಡ್‌ಮಾಸ್ಟರ್‌ಗಳು ಮತ್ತು 30 ಇಂಟರ್‌ನ್ಯಾಷನಲ್ ಮಾಸ್ಟರ್‌ಗಳು ಭಾಗವಹಿಸಿದ್ದು, ಅತಿ ಪ್ರಬಲ ಕಣ ಎನಿಸಿತ್ತು. ಈ ಕೂಟದಲ್ಲಿ ಆಡಿದ್ದ ಇಬ್ಬರು ಪ್ರತಿಭಾನ್ವಿತರು ತಮ್ಮ ಮೊದಲ ಪ್ರಯತ್ನದಲ್ಲೇ ಕ್ರಮವಾಗಿ ಚಾಂಪಿಯನ್ ಮತ್ತು ರನ್ನರ್ ಅಪ್ ಆಗಿ ಹೊರಹೊಮ್ಮಿದರು. ಈಗ ಆ ಇಬ್ಬರು ಆಟಗಾರರು ಭಾರತದ ಚೆಸ್‌ನ ಮಿನುಗುತಾರೆಗಳಾಗಿದ್ದಾರೆ. ಅಲ್ಲಿ ಪ್ರಶಸ್ತಿ ಗೆದ್ದವರು ಅರ್ಜುನ್ ಇರಿಗೇಶಿ; ರನ್ನರ್ ಅಪ್ ಆದವರು ಗುಕೇಶ್ ದೊಮ್ಮರಾಜು.

ಒಂದೆಡೆ, ಅರ್ಜುನ್ ಅಲ್ಪ ಅವಧಿಯಲ್ಲೇ ಫಿಡೆ ವಿಶ್ವ ಕ್ರಮಾಂಕದಲ್ಲಿ ಮೇಲೇರುತ್ತಾ ಸದ್ಯ ನಾಲ್ಕನೇ ಸ್ಥಾನದಲ್ಲಿದ್ದಾರೆ. ಇನ್ನೊಂದೆಡೆ, ಗುಕೇಶ್ ಕೂಡ ದಾಪುಗಾಲಿಟ್ಟು ಕ್ರಮಾಂಕ ಪಟ್ಟಿಯಲ್ಲಿ ಐದನೇ ಸ್ಥಾನದಲ್ಲಿದ್ದಾರೆ. ಬುಡಾಪೆಸ್ಟ್ ಒಲಿಂಪಿಯಾಡ್‌ನಲ್ಲಿ ಮೊದಲ ಬಾರಿ ಭಾರತ ಐತಿಹಾಸಿಕ ಚಿನ್ನ ಗೆಲ್ಲಲು ಇವರಿಬ್ಬರ ಪಾತ್ರ ಪ್ರಮುಖವಾಗಿದ್ದು ಗೊತ್ತೇ ಇದೆ.

ಗುಕೇಶ್, ಈ ವರ್ಷದ ಏಪ್ರಿಲ್‌ನಲ್ಲಿ ಕೆನಡಾದ ಟೊರಾಂಟೊದಲ್ಲಿ ನಡೆದಿದ್ದ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಗೆದ್ದು ವಿಶ್ವ ಚಾಂಪಿಯನ್‌ಗೆ ಸವಾಲೊಡ್ಡುವ ಸ್ಪರ್ಧಿ (ಚಾಲೆಂಜರ್) ಆಗುವ ಅರ್ಹತೆ ಪಡೆದಿದ್ದರು. ಗುಕೇಶ್ ವಯಸ್ಸು ಆಗ 18 ವರ್ಷ ತುಂಬಿರಲಿಲ್ಲ. ಅತಿ ಕಿರಿಯ ಸ್ಪರ್ಧಿ ಎಂಬ ಹಿರಿಮೆಗೆ ಭಾಜನರಾದ ಗುಕೇಶ್, ಅತಿ ಕಿರಿಯ ವಿಶ್ವ ಚಾಂಪಿಯನ್ ಆಗುವರೇ ಎಂಬುದನ್ನು ನಿರ್ಧರಿಸುವ ಗಳಿಗೆ ಈಗ ಬಂದಿದೆ.

ಫೇವರೀಟ್: ಚೆಸ್ ಪರಿಣತರು, ವಿಶ್ಲೇಷಕರು ಗುಕೇಶ್ ಅವರು ಚಾಂಪಿಯನ್ ಪಟ್ಟಕ್ಕೆ ಫೇವರೀಟ್ ಎಂದು ಒಕ್ಕೊರಲಿನಿಂದ ಈಗಾಗಲೇ ಹೇಳಿದ್ದಾರೆ. ಇದಕ್ಕೆ ಕಾರಣ ನೀಡುವುದು ಅಷ್ಟೇನೂ ಕಷ್ಟವಲ್ಲ. ಈ ವರ್ಷ ಗುಕೇಶ್ ಅಮೋಘ ಫಾರ್ಮ್‌ನಲ್ಲಿದ್ದಾರೆ. 2023ರ ಏಪ್ರಿಲ್‌ನಲ್ಲಿ ವಿಶ್ವ ಚಾಂಪಿಯನ್ ಆದ ನಂತರ ಡಿಂಗ್ ಲಿರೆನ್ ಕೆಲಕಾಲ ಚೆಸ್‌ನಿಂದ ದೂರವಾಗಿದ್ದರು. ಈ ವರ್ಷ ತಮ್ಮ ಎಂದಿನ ಲಯ ಕಂಡುಕೊಳ್ಳಲು ಹೆಣಗಾಡುತ್ತಿದ್ದಾರೆ.

ಕ್ಯಾಂಡಿಡೇಟ್ಸ್ ಟೂರ್ನಿಗೆ ಗುಕೇಶ್ ಅರ್ಹತೆ ಪಡೆದಿದ್ದು ಕೂಡ ಅದೃಷ್ಟದ ಬಲದಿಂದ. ಅವರಿಗೆ ನೆರವಾಗಲು ಡಿಸೆಂಬರ್‌ನಲ್ಲಿ ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಟೂರ್ನಿ ಏರ್ಪಡಿಸಲಾಯಿತು. ಇದರಲ್ಲಿ ಅವರು ಚಾಂಪಿಯನ್ ಆಗಿದ್ದು ಕ್ಯಾಂಡಿಡೇಟ್ಸ್ ಟೂರ್ನಿಗೆ ಅವಕಾಶದ ಬಾಗಿಲನ್ನು ತೆರೆಯಿತು. ಅಲ್ಲಿ ಗೆದ್ದ ನಂತರ ಅವರು ಫಿಡೆ ಸರ್ಕಿಟ್‌ನಲ್ಲಿ ಕರುವಾನಾ ನಂತರ ಎರಡನೇ ಸ್ಥಾನದಲ್ಲಿದ್ದರು. ಆದರೆ, ವಿಶ್ವಕಪ್‌ನಲ್ಲಿ ಮೂರನೇ ಸ್ಥಾನ ಪಡೆದಿದ್ದರಿಂದ ಕರುವಾನಾ ಅವರಿಗೆ ಅದಕ್ಕೆ ಮೊದಲೇ ಕ್ಯಾಂಡಿಡೇಟ್ಸ್‌ಗೆ ಅರ್ಹತೆ ದೊರಕಿತ್ತು. ಹೀಗಾಗಿ ಗುಕೇಶ್ ಅವರಿಗೆ, ಎಂಟೇ ಆಟಗಾರರಿಗೆ ಅವಕಾಶವಿರುವ ಕ್ಯಾಂಡಿಡೇಟ್ಸ್ ಟೂರ್ನಿಯ ಬಾಗಿಲು ತೆರೆಯಿತು. ನಂತರದ್ದು ಇತಿಹಾಸ.



ಈ ವರ್ಷ ಗುಕೇಶ್ ಉತ್ತಮ ಲಯದಲ್ಲಿದ್ದಾರೆ. ವರ್ಷದ ಆರಂಭದಲ್ಲಿ ನೆದರ್ಲೆಂಡ್ಸ್‌ನ ವಿಯ್ಕ್ ಆನ್ ಝೀಯಲ್ಲಿ ನಡೆದ ಟಾಟಾ ಸ್ಟೀಲ್ ಚೆಸ್ ಟೂರ್ನಿಯಲ್ಲಿ ಅವರಿಗೆ ರನ್ನರ್ ಅಪ್ ಸ್ಥಾನ. ಏಪ್ರಿಲ್‌ನಲ್ಲಿ ಕ್ಯಾಂಡಿಡೇಟ್ಸ್ ಗೆಲುವು. ಸೆಪ್ಟೆಂಬರ್‌ನಲ್ಲಿ ಬುಡಾಪೆಸ್ಟ್ ಒಲಿಂಪಿಯಾಡ್‌ನಲ್ಲಿ ಮೊದಲ ಬೋರ್ಡ್‌ನಲ್ಲಿ ಅವರ ಪ್ರದರ್ಶನ ಮಟ್ಟ ಅಮೋಘವಾಗಿತ್ತು. ಒಲಿಂಪಿಯಾಡ್‌ನಲ್ಲಿ ಅರ್ಜುನ್ ಮತ್ತು ಗುಕೇಶ್ ಜೋಡಿ ಅಜೇಯವಾಗಿದ್ದು, ಭಾರತ ಮೊದಲ ಬಾರಿ ಚಿನ್ನ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿತು. ಗುಕೇಶ್ ಆಡಿದ 10 ಪಂದ್ಯಗಳಲ್ಲಿ ಎಂಟು ಗೆಲುವು, ಎರಡು ಡ್ರಾ ಮಾಡಿಕೊಂಡು 9 ಅಂಕಗಳೊಡನೆ ಅಜೇಯರಾಗುಳಿದರು. ಮೂರನೇ ಬೋರ್ಡ್‌ನಲ್ಲಿ ಅರ್ಜುನ್ 11 ಪಂದ್ಯಗಳಿಂದ 10 ಅಂಕ ಗಳಿಸಿದರು. ವಿಶ್ವದ ಎರಡನೇ ಕ್ರಮಾಂಕದ ಫ್ಯಾಬಿಯಾನೊ ಕರುವಾನಾ ಮೇಲೆ ಗಳಿಸಿದ ಗೆಲುವು ಇದರಲ್ಲಿ ಪ್ರಮುಖವಾದುದು. ಮಹಾಬಲಿಪುರಂನಲ್ಲಿ ನಡೆದ 2022ರ ಒಲಿಂಪಿಯಾಡ್‌ನಲ್ಲೂ ಅವರು ಅಮೆರಿಕದ ಕರುವಾನಾ ಮೇಲೆ ಜಯಗಳಿಸಿದ್ದರು.

ಕ್ಯಾಂಡಿಡೇಟ್ಸ್ ಟೂರ್ನಿ ಗೆದ್ದ ನಂತರ ಗುಕೇಶ್ ವಿಶ್ವ ಚಾಂಪಿಯನ್‌ಷಿಪ್‌ಗೆ ಸಿದ್ಧತೆ ಆರಂಭಿಸಿದ್ದು, ಅದಕ್ಕೆ ಪೂರಕ ಎಂಬಂತೆ ಒಲಿಂಪಿಯಾಡ್ ಪ್ರದರ್ಶನವೂ ಇತ್ತು.

ಲಿರೆನ್‌ಗೆ ಒತ್ತಡ: ಕಜಕಸ್ತಾನದ ಅಸ್ತಾನದಲ್ಲಿ 2023ರ ಏಪ್ರಿಲ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ರಷ್ಯಾದ ಇಯಾನ್ ನಿಪೊಮ್‌ನಿಷಿ ವಿರುದ್ಧ ಗೆದ್ದು ಕಿರೀಟ ಧರಿಸಿದ್ದ ಡಿಂಗ್ ಲಿರೆನ್ ನಂತರ ಅದೇ ಮಟ್ಟದಲ್ಲಿ ಆಡಲಿಲ್ಲ. ಹಾಗೆ ನೋಡಿದರೆ, ಅವರು ಆಡಿದ್ದೇ ಕಡಿಮೆ. ಈ ವರ್ಷವಂತೂ ಅವರು ಕ್ಲಾಸಿಕಲ್ (ಸಾಂಪ್ರದಾಯಿಕ) ಮಾದರಿಯ ಆಟದಲ್ಲಿ ಒಂದೂ ಪಂದ್ಯ ಗೆಲ್ಲಲು ಆಗಿಲ್ಲ. ಆಡಿದ ಕೆಲವೇ ಕೆಲವು ಟೂರ್ನಿಗಳಲ್ಲೂ ಅವರ ಪ್ರದರ್ಶನದ ಮಟ್ಟ ನಿರೀಕ್ಷೆಯಂತೆ ಇರಲಿಲ್ಲ. ಸ್ವತಃ ಲಿರೆನ್ ತಮ್ಮ ಆಟದ ಮಟ್ಟ ಕಡಿಮೆಯಾಗಿದೆ ಎಂದು ಎರಡು ಬಾರಿ ಹೇಳಿಕೆ ನೀಡಿದ್ದಾರೆ.

2017–18ರಲ್ಲಿ ಲಿರೆನ್ ಅಮೋಘ ಸಾಧನೆಯೊಡನೆ ಚೆಸ್ ಲೋಕದ ಗಮನಸೆಳೆದಿದ್ದರು. ಒಂದು ಹಂತದಲ್ಲಿ ಸತತವಾಗಿ 100 ಪಂದ್ಯಗಳಲ್ಲಿ ಅಜೇಯರಾಗಿದ್ದರು. ಅವರು 2018ರ ನವೆಂಬರ್‌ನಲ್ಲಿ 2816ರ ಜೀವನ ಶ್ರೇಷ್ಠ ರೇಟಿಂಗ್ ತಲುಪಿದ್ದರು. ಕಾರ್ಲ್‌ಸನ್ ನಂತರ ಎರಡನೇ ಸ್ಥಾನದಲ್ಲಿದ್ದರು.

ಕಳೆದ ವರ್ಷ ವಿಶ್ವ ಚಾಂಪಿಯನ್ ಆದ ನಂತರ ಮಾನಸಿಕ ದಣಿವು, ನಿದ್ರಾಹೀನತೆ ಲಿರೆನ್ ಅವರನ್ನು ಕಾಡಿತ್ತು. ಖಿನ್ನತೆಗೆ ಚಿಕಿತ್ಸೆ ಪಡೆದಿರುವುದಾಗಿಯೂ ಅವರು ಸಂದರ್ಶನವೊಂದರಲ್ಲಿ ಹೇಳಿದ್ದರು. ಈ ವರ್ಷ ಅವರು ಸ್ಪರ್ಧಾತ್ಮಕ ಚೆಸ್‌ಗೆ ಮರಳಿದರೂ ಯಶಸ್ಸು ಕಾಣುತ್ತಿಲ್ಲ. ಒಲಿಂಪಿಯಾಡ್‌ನಲ್ಲಿ ಗುಕೇಶ್ ಜೊತೆ ಅವರು ಮುಖಾಮುಖಿಯಾಗಲಿಲ್ಲ. ಕೊನೆಯ ಬಾರಿ, ಸಿಂಕ್ವೆಫೀಲ್ಡ್ ಟೂರ್ನಿಯಲ್ಲಿ (ಅಮೆರಿಕ) ಪರಸ್ಪರ ಎದುರಾದಾಗ ಆ ಪಂದ್ಯ 'ಡ್ರಾ' ಆಗಿತ್ತು.

ಈಗ ಗುಕೇಶ್ ಅವರಿಗೆ ವಿಶ್ವ ಚಾಂಪಿಯನ್ ಕಿರೀಟ ದಕ್ಕುವ ಅವಕಾಶ ಉಜ್ವಲವಾಗಿದೆ ಎಂದು ಮೇಲ್ನೋಟಕ್ಕೆ ಕಾಣುತ್ತಿದೆ. ಅನುಭವಿ ಲಿರೆನ್ ಲಯ ಕಂಡುಕೊಂಡರೆ ಮಾತ್ರ ಉತ್ತಮ ಪೈಪೋಟಿ ಏರ್ಪಡಬಹುದು.

ಉಳಿದವರು ಕಂಡಂತೆ....

'ಗುಕೇಶ್ ಅವರ ಲೆಕ್ಕಾಚಾರ ಆಳವಾಗಿರುತ್ತದೆ. ಅದು ಇತರ ಆಟಗಾರರ ಲೆಕ್ಕಾಚಾರಗಳಿಗಿಂತ ಹೆಚ್ಚೇ' ಎನ್ನುತ್ತಾರೆ ವಿಶ್ವದ ಅಗ್ರಮಾನ್ಯ ಆಟಗಾರ ಹಾಗೂ ಮಾಜಿ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್. ದೀರ್ಘ ಅವಧಿಯ ಕ್ಲಾಸಿಕಲ್ ಆಟದಲ್ಲಿ ಇಂಥ ಲೆಕ್ಕಾಚಾರದ ಸಾಮರ್ಥ್ಯ ತುಂಬಾ ಅನುಕೂಲಕರ ಎನ್ನುವುದು ಕಾರ್ಲ್‌ಸನ್ ಅನಿಸಿಕೆ.

'ನಾನು ಮತ್ತು ಪ್ರಗ್ಗು (ಪ್ರಜ್ಞಾನಂದ) ಬೋರ್ಡ್‌ನಲ್ಲಿನ ಸ್ಥಿತಿ ಅವಲೋಕಿಸಿ ಆ ಸಂದರ್ಭಕ್ಕೆ ಮನಸ್ಸಿಗೆ ಹೊಳೆದ ಉತ್ತಮ ನಡೆ ಆಡುವುದಕ್ಕೆ ಒತ್ತು ನೀಡುತ್ತೇವೆ. ಇದರಿಂದಾಗಿ ನಾವು ರ್‍ಯಾಪಿಡ್, ಬ್ಲಿಟ್ಜ್ ಮಾದರಿಯಲ್ಲಿ ಹೆಚ್ಚು ಯಶಸ್ಸು ಪಡೆಯುತ್ತೇವೆ. ಆದರೆ ಗುಕೇಶ್ ಗಹನವಾಗಿ, ಆಳ ಲೆಕ್ಕಾಚಾರಗಳನ್ನು ಮಾಡಿಯೇ ಮುಂದಿನ ನಡೆಗಳನ್ನು ಇರಿಸುತ್ತಾರೆ. ಅವರು ಆ ಕ್ಷಣಕ್ಕೆ ಪ್ರಜ್ಞಾಪೂರ್ವಕ ನಡೆ ಇಡುವುದಿಲ್ಲವೆಂದೇನಲ್ಲ. ಆದರೆ ಅವರು ಆಳವಾದ ವಿಶ್ಲೇಷಣೆ ನಡೆಸಿಯೇ ನಡೆಯನ್ನಿಡಲು ಮುಂದಾಗುತ್ತಾರೆ' ಎಂದು ಬುಡಾಪೆಸ್ಟ್ ಒಲಿಂಪಿಯಾಡ್ ಸಮಾರೋಪದಲ್ಲಿ ಅರ್ಜುನ್ ಇರಿಗೇಶಿ, ಸಹ ಆಟಗಾರನ ಆಟದ ಶೈಲಿಯ ಬಗ್ಗೆ ಪ್ರತಿಕ್ರಿಯಿಸಿದ್ದರು.

ಗುಕೇಶ್, ಒಂದು ಸಂದರ್ಭದಲ್ಲಿ ಒಂದೇ ವಿಷಯದ ಬಗ್ಗೆ ಹೆಚ್ಚು ಯೋಚಿಸುವುದನ್ನು ರೂಢಿಸಿಕೊಂಡವರು ಎನ್ನುತ್ತಾರೆ ವಿಶ್ವನಾಥನ್ ಆನಂದ್. ಗುಕೇಶ್ ಕೆಲ ಸಮಯದಿಂದ ಚೆನ್ನೈನಲ್ಲಿ ವಿಶ್ವನಾಥನ್ ಆನಂದ್ ಅವರ ವೆಸ್ಟ್‌ಬ್ರಿಜ್ ಆನಂದ್ ಚೆಸ್ ಅಕಾಡೆಮಿಯ ವಿದ್ಯಾರ್ಥಿ.

ಅಂದು ಪ್ರೇಕ್ಷಕ...

ಸುಮಾರು 11 ವರ್ಷಗಳ ಹಿಂದೆ ಚೆನ್ನೈನಲ್ಲಿ ವಿಶ್ವನಾಥನ್ ಆನಂದ್ ಮತ್ತು ಮ್ಯಾಗ್ನಸ್ ಕಾರ್ಲ್‌ಸನ್ ನಡುವೆ ವಿಶ್ವ ಚೆಸ್ ಚಾಂಪಿಯನ್ ಪಟ್ಟಕ್ಕಾಗಿ ಫೈನಲ್ ನಡೆದಿತ್ತು. ಚೆನ್ನೈನ ಹಯಾತ್ ಹೋಟೆಲ್‌ನಲ್ಲಿ ನಡೆಯುತ್ತಿದ್ದ ಆ ಪಂದ್ಯ ನೋಡಲು ತಂದೆಯ ಜೊತೆ ಬಂದಿದ್ದ ಏಳು ವರ್ಷದ ಹುಡುಗ ಗುಕೇಶ್ ಈಗ ಸ್ವತಃ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಡುತ್ತಿದ್ದಾರೆ. ಆನಂದ್ 12 ವರ್ಷಗಳಲ್ಲಿ ಐದು ಬಾರಿ ವಿಶ್ವ ಚಾಂಪಿಯನ್ ಆಗಿದ್ದರು.

ಭಾರತದ ಚೆಸ್ ರಾಜಧಾನಿಯಾಗಿ ಚೆನ್ನೈ ಬೆಳೆದಿದೆ. ಆನಂದ್ ಅವರಂತೆ ಗುಕೇಶ್ ಕೂಡ ಚೆನ್ನೈನವರು. ಕಳೆದ ವರ್ಷ ವಿಶ್ವಕಪ್ ಫೈನಲ್ ಆಡಿದ್ದ ಪ್ರಜ್ಞಾನಂದ ರಮೇಶಬಾಬು ಅವರೂ ಚೆನ್ನೈನ ಆಟಗಾರ. ಭಾರತದ 85 ಗ್ರ್ಯಾಂಡ್‌ಮಾಸ್ಟರ್‌ಗಳಲ್ಲಿ 31 ಮಂದಿ ತಮಿಳುನಾಡಿನವರು.

ವೈಶಿಷ್ಟ್ಯಗಳು

- ನವೆಂಬರ್ 25ರಿಂದ ಡಿಸೆಂಬರ್ 13ರವರೆಗೆ ನಿಗದಿಯಾಗಿರುವ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ನಾಲ್ಕು ವಿಶ್ರಾಂತಿ ದಿನಗಳೂ (ನವೆಂಬರ್ 28, ಡಿಸೆಂಬರ್ 2, 6 ಮತ್ತು 10) ಇವೆ. ಉಳಿದ ದಿನಗಳಲ್ಲಿ ಮಧ್ಯಾಹ್ನ 2:30ಕ್ಕೆ ಆಟ ಆರಂಭವಾಗುತ್ತದೆ
- ಈ ಫೈನಲ್ 14 ಕ್ಲಾಸಿಕಲ್ (ಸಾಂಪ್ರದಾಯಿಕ ಮಾದರಿಯ) ಪಂದ್ಯಗಳನ್ನು ಒಳಗೊಂಡಿದೆ. ಮೊದಲು 7.5 ಪಾಯಿಂಟ್ಸ್ ಗಳಿಸಿದ ಆಟಗಾರ ಚಾಂಪಿಯನ್ ಎನಿಸುತ್ತಾರೆ. ಒಂದು ವೇಳೆ ಸ್ಕೋರ್ 7–7 ಸಮಬಲ ಆದರೆ ವಿಜೇತರನ್ನು ನಿರ್ಧರಿಸಲು ಅಲ್ಪಾವಧಿಯ ಟೈಬ್ರೇಕ್ ಆಟಗಳನ್ನು ಆಡಿಸಲಾಗುತ್ತದೆ
- ಫೈನಲ್ ಪಂದ್ಯ ಸುಮಾರು ₹21 ಕೋಟಿ ಬಹುಮಾನ ಹಣ ಹೊಂದಿದೆ



- ಇಲ್ಲಿ ಚಾಂಪಿಯನ್ ಆದಲ್ಲಿ 18 ವರ್ಷ ವಯಸ್ಸಿನ ಗುಕೇಶ್ ಅತಿ ಕಿರಿಯ ವಿಶ್ವ ಚಾಂಪಿಯನ್ ಎನಿಸಲಿದ್ದಾರೆ. 1985ರಲ್ಲಿ ರಷ್ಯಾದ ಗ್ಯಾರಿ ಕ್ಯಾಸ್ಪರೋವ್ ಅವರು ಅನತೋಲಿ ಕಾರ್ಪೋವ್ ಅವರನ್ನು ಸೋಲಿಸಿ ವಿಶ್ವ ಚಾಂಪಿಯನ್ ಆದಾಗ ಅವರ ವಯಸ್ಸು 22
- ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ 138 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿ ಫೈನಲ್‌ನಲ್ಲಿ ಏಷ್ಯಾದ ಇಬ್ಬರು ಆಟಗಾರರು ಎದುರಾಳಿಗಳಾಗಿದ್ದಾರೆ
- ಸದ್ಯ 23ನೇ ಕ್ರಮಾಂಕದಲ್ಲಿರುವ ಲಿರೆನ್ (ರೇಟಿಂಗ್: 2728) ವಿಶ್ವ ಫೈನಲ್‌ನಲ್ಲಿ ಆಡುತ್ತಿರುವ ಕಡಿಮೆ ಕ್ರಮಾಂಕದ ಆಟಗಾರ. ಈ ಹಿಂದೆ, 2012ರಲ್ಲಿ ಆನಂದ್ ವಿರುದ್ಧ ಫೈನಲ್ ಆಡುವಾಗ ಬೋರಿಸ್ ಗೆಲ್ಫಾಂಡ್ (ಆಗ ರೇಟಿಂಗ್ 2727) ವಿಶ್ವ ಕ್ರಮಾಂಕದಲ್ಲಿ 20ನೇ ಸ್ಥಾನದಲ್ಲಿದ್ದರು

ಕಲಾವಿದನ 'ಪರಿಸ್ಥಿತಿ' ಅವಲೋಕನ

ಬಹುತೇಕ ಹೊಸಬರಿಂದಲೇ ಕೂಡಿರುವ 'ಪರಿಸ್ಥಿತಿ' ಚಿತ್ರ ಇತ್ತೀಚೆಗಷ್ಟೇ ತೆರೆ ಕಂಡಿದೆ. ಆರ್.ಎಸ್.ಗಣೇಶ್ ನಾರಾಯಣ್ ನಿರ್ದೇಶನದ ಚಿತ್ರಕ್ಕೆ ಎಂಸಿಎಂ ಆರಾಧ್ಯ ಬಂಡವಾಳ ಹೂಡಿದ್ದಾರೆ.

'ಚಿತ್ರ ಬಿಡಿಸುವ ಕಲಾವಿದನ ಕಥೆ. ರಸ್ತೆಯಲ್ಲಿ ಭಿಕ್ಷೆ ಬೇಡುತ್ತ, ಚಿತ್ರ ಬಿಡಿಸುವ ಕಲಾವಿದನ ಪರಿಸ್ಥಿತಿ ಅವಲೋಕನವಿದು. ಏಕೆ ಅವನು ಈ ರೀತಿ ಪ್ರತಿಭೆ ಇಟ್ಟುಕೊಂಡು ರಸ್ತೆಯಲ್ಲಿದ್ದಾನೆ, ಜೀವನ ಹೇಗಿದೆ ಎಂಬಿತ್ಯಾದಿ ಅಂಶಗಳನ್ನು ಒಳಗೊಂಡ ಕಥೆ. ಅವನಿಗೆ ಒಳ್ಳೆ ಅವಕಾಶ ಸಿಕ್ಕರೆ ಏನಾಗುತ್ತದೆ ಎಂಬುದೇ ಚಿತ್ರ. ಸಾಕಷ್ಟು ಚಿತ್ರೋತ್ಸವಗಳಲ್ಲಿ ಪ್ರಶಸ್ತಿ ಲಭಿಸಿದೆ. ಎಲ್ಲ ವಯೋಮಾನದವರು ನೋಡಬಹುದಾದ ಚಿತ್ರ. ನ.22ರಂದು ಚಿತ್ರ ತೆರೆಕಂಡಿದ್ದು, ಜನರಿಂದ ಕೂಡ ಉತ್ತಮ ಪ್ರಶಂಸೆ ವ್ಯಕ್ತವಾಗುತ್ತಿದೆ' ಎನ್ನುತ್ತಾರೆ ನಿರ್ದೇಶಕರು.

'ರೋಟರಿ ಸಂಸ್ಥೆಗಾಗಿ ಮಾಡಿರುವ ಆರೋಹಣ ಪ್ರಾಜೆಕ್ಟ್ ಮೂಲಕ ಈ ಚಿತ್ರ ನಿರ್ಮಾಣಗೊಂಡಿದೆ. ಇದರಲ್ಲಿ ಬರುವ ಹಣವನ್ನು ರಸ್ತೆಯಲ್ಲಿರುವ ಭಿಕ್ಷುಕರಿಗೆ ಸಹಾಯ ಮಾಡಲು ಬಳಸುತ್ತೇವೆ' ಎಂದರು ನಿರ್ಮಾಪಕರು.

ನಿರ್ದೇಶಕರೇ ಚಿತ್ರಕ್ಕೆ ಸಂಗೀತ ನೀಡಿದ್ದಾರೆ. ಗೌತಮ್ ಮನು ಛಾಯಾಚಿತ್ರಗ್ರಹಣವಿದೆ. ನಮ್ರತಾ, ಅಜಿತ್ ಕುಮಾರ್ ಮುಂತಾದವರು ತಾರಾಗಣದಲ್ಲಿದ್ದಾರೆ.



'ರುದ್ರಾಭಿಷೇಕಂ'ನಲ್ಲಿ ವಿಜಯ ರಾಘವೇಂದ್ರ

ನಾಡಿನ ಸಾಂಸ್ಕೃತಿಕ ಇತಿಹಾಸ, ಆಚರಣೆ, ಕಲೆಯನ್ನು ಪ್ರತಿಬಿಂಬಿಸುವ 'ರುದ್ರಾಭಿಷೇಕಂ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ವಿಜಯ ರಾಘವೇಂದ್ರ ಚಿತ್ರದ ನಾಯಕ.

'ನಮ್ಮ ಸಂಸ್ಕೃತಿ ಬಿಂಬಿಸುವ ಇನ್ನೊಂದು ಒಳ್ಳೆಯ ಪ್ರಯತ್ನ. ನಮ್ಮ ನಾಡಿನ ಸಾಂಸ್ಕೃತಿಕ ಹಿನ್ನೆಲೆಯ ಜೊತೆಗೆ ಒಂದು ಸಣ್ಣ ಇತಿಹಾಸ, ಅದರ ವೈಭವವನ್ನು ಸಾರುವ ಕಥೆ. ಕಮರ್ಷಿಯಲ್ ಅಂಶಗಳಿದ್ದರೂ ಕೂಡ ಭಕ್ತಿ ಪ್ರಧಾನ ಚಿತ್ರ. ನಿರ್ದೇಶಕರು ವೀರಗಾಸೆ ಕಲೆಯ ಹಿನ್ನಲೆ ಇಟ್ಟುಕೊಂಡು ಒಂದೊಳ್ಳೆ ಕಥೆ ಮಾಡಿಕೊಂಡಿದ್ದಾರೆ. ಇದೇ ಮೊದಲ ಬಾರಿಗೆ ನಾನು ಒಬ್ಬ ವೀರಗಾಸೆ ಕಲಾವಿದನಾಗಿ ಕಾಣಿಸಿಕೊಳ್ಳುತ್ತಿದ್ದೇನೆ. ಚಿತ್ರದಲ್ಲಿ ನನಗೆ ಸಾಕಷ್ಟು ಗೆಟಪ್‌ಗಳಿವೆ' ಎಂದರು ವಿಜಯ ರಾಘವೇಂದ್ರ.

ವಸಂತ್ ಕುಮಾರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುತ್ತಿದ್ದಾರೆ. ಫ್ಯಾನ್ ಇಂಡಿಯಾ ಕ್ರಿಯೇಶನ್ಸ್ ಚಿತ್ರಕ್ಕೆ ಬಂಡವಾಳ ಹೂಡುತ್ತಿದೆ. ನಾಯಕಿಯಾಗಿ ಮೈಸೂರು ಮೂಲದ ರಂಗಭೂಮಿ ಕಲಾವಿದೆ ಪ್ರೇರಣಾ ಕಾಣಿಸಿಕೊಂಡಿದ್ದಾರೆ. ವಿ. ಮನೋಹರ್ ಚಿತ್ರದ ನಾಲ್ಕು ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡುತ್ತಿದ್ದಾರೆ. ಮುತ್ತುರಾಜ್ ಛಾಯಾಚಿತ್ರಗ್ರಹಣವಿದೆ.



ವಿಜಯ ರಾಘವೇಂದ್ರ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಅಮೆರಿಕದ ನ್ಯಾಯಾಂಗ ಇಲಾಖೆ ಭಾರತದ ಉದ್ಯಮಿ ಗೌತಮ್ ಅದಾನಿ ವಿರುದ್ಧ ಭ್ರಷ್ಟಾಚಾರ ಮತ್ತು ವಂಚನೆ ಆರೋಪ ಮಾಡಿದ ಮರುದಿನವೇ ಅದಾನಿ ಅವರನ್ನು ಪೊಲೀಸರು ಬಂಧಿಸಿ ಕರೆದೊಯ್ಯುತ್ತಿರುವ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅಮೆರಿಕದಲ್ಲಿ ಅವರನ್ನು ಬಂಧಿಸಲಾಗಿದೆ ಎಂದು ಆ ಚಿತ್ರವನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ಚಿತ್ರವನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲನೆ ಮಾಡಿದಾಗ ಇದೇ ಚಿತ್ರವನ್ನು ಅನೇಕರು ಹಂಚಿಕೊಂಡಿರುವುದು ಕಂಡುಬಂತು. ಚಿತ್ರವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಚಿತ್ರ ಅಸಲಿ ಅಲ್ಲ ಎನ್ನುವ ಅನುಮಾನ ಮೂಡುತ್ತದೆ. ಅದಾನಿ ಅವರನ್ನು ಹಿಡಿದಿಡುವ ಪೊಲೀಸ್ ಒಬ್ಬರಿಗೆ ಕೈಯಲ್ಲಿ ಆರು ಬೆರಳು ಇವೆ. ಚಿತ್ರವನ್ನು ಎಐ ಧ್ವನಿ ಮತ್ತು ಡೀಪ್ ಫೇಕ್ ಪತ್ತೆ ಮಾಡುವ ಟ್ರೂ ಮೀಡಿಯಾ ಆ್ಯಪ್‌ನಲ್ಲಿ ಪರಿಶೀಲನೆ ನಡೆಸಿದಾಗ, ಇದು ಎಐ ನೆರವಿನಿಂದ ಸೃಷ್ಟಿಸಲಾಗಿರುವ ಚಿತ್ರ ಎನ್ನುವುದು ಖಚಿತವಾಯಿತು. ಜತೆಗೆ, ಅದಾನಿ ವಿರುದ್ಧ ವಾರಂಟ್ ಜಾರಿಯಾಗಿದೆ, ಆದರೆ ಬಂಧನ ಆಗಿಲ್ಲ. ಈ ಬಗ್ಗೆ ಪಿಟಿಐ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಮೊದಲು ಮಾನವ ಆಗು!

ನುಡಿ ಬೆಳಗು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

73

ಟೇಬಲ್ ಮೇಲೆ ಕ್ರಿಕೆಟ್ ತಾರೆಯರು, ಸಿನೆಮಾ ತಾರೆಯರ ಚಿತ್ರಗಳನ್ನು ಇಡಿ. ಜೊತೆಗೆ ನಿಮ್ಮದೂ ಒಂದು ಚಿತ್ರ ಇರಲಿ. ನಿಮ್ಮ ಮಗನನ್ನು ಕರೆದು ಇದರಲ್ಲಿ ನಿನ್ನ ಹೀರೊ ಯಾರು ಎಂದು ಕೇಳಿ ನೋಡಿ. ಅವನು ಖಂಡಿತ ನಿಮ್ಮ ಚಿತ್ರ ತೋರಿಸೋದಿಲ್ಲ. ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ ಅಥವಾ ಮಗಳಿಗೆ ನಾನು ಹೀರೋ ಆಗದಿದ್ದರೆ ತಂದೆ ಎನ್ನುವ ಅಥವಾ ತಾಯಿ ಎನ್ನುವ ಪದಕ್ಕೆ ಅರ್ಥವೇ ಇರೋದಿಲ್ಲ. ಮಕ್ಕಳಿಗೆ ತಂದೆ ತಾಯಂದಿರೇ ಹೀರೋ ಹೀರೋಯಿನ್ ಆಗದಿದ್ದರೆ, ತಂದೆ ತಾಯಿಗಳು ಬಿಸ್ಕೆಟ್ ತಯಾರು ಮಾಡುವ, ಮೊಬೈಲ್ ತಯಾರು ಮಾಡುವ ಫ್ಯಾಕ್ಟರಿಗಳಾಗಿಬಿಡುತ್ತಾರೆ. ಮಕ್ಕಳಿಗೆ ಆಸ್ತಿ ಬಿಟ್ಟು ಹೋದವ ತಂದೆಯಾಗುವುದಿಲ್ಲ. ಮಕ್ಕಳಿಗೆ ಆದರ್ಶ ಕೊಟ್ಟು ಹೋದವ ತಂದೆಯಾಗುತ್ತಾನೆ. ಕೆಲವನ್ನು ಶಾಸ್ತ್ರಗಳಿಂದಲೂ ಕಲಿಯಬೇಕು. ಶಾಸ್ತ್ರ ಅಂದರೆ ಇದನ್ನು ಮಾಡು ಇದನ್ನು ಮಾಡಬೇಡ ಎಂದು ತಿಳಿಸಿಕೊಡುವುದು. ಈಗ ನೋಡಿ, ಮನುಷ್ಯನಿಗೆ ಏನಾದರೂ ಆಗು ಮೊದಲು ಮಾನವನಾಗು ಅಂತಾರೆ. ಏನಾದರೂ ಆಗು ಮೊದಲು ಹುಲಿ ಆಗು ಅಂತ ಯಾವುದೇ ಹುಲಿಗೆ ಹೇಳ್ತಾರೇನು? ಏನಾದರೂ ಆಗು ಮೊದಲು ಆಕಳು ಆಗು ಅಂತ ಆಕಳಿಗೆ ಯಾರಾದರೂ ಹೇಳ್ತಾರೇನು? ಮನುಷ್ಯನಿಗೇ ಯಾಕೆ ಈ ಮಾತು ಹೇಳ್ತಾರೆ? ಯಾಕೆ ಎಂದರೆ, ಮನುಷ್ಯ ಮನುಷ್ಯನಂತೆ ಕಾಣ್ತಾನೆ ಆದರೆ ಮನುಷ್ಯನಂಗೆ ಇಲ್ಲ ಅದಕ್ಕೆ. ಕೆಲವು ವಿಷಯಗಳನ್ನು ಇನ್ನೊಬ್ಬರನ್ನು ನೋಡಿ ಕಲಿಯಬೇಕು. ಎಲ್ಲವನ್ನೂ ಓದಿಯೇ ತಿಳಕೋಬೇಕು ಅಂದರೆ ಆಗೋದಿಲ್ಲ. ಇನ್ನೊಬ್ಬರು ಮಾಡಿದ್ದನ್ನು ನೋಡಿಯೂ ತಿಳಕೋಬೇಕು. ಬರೀ ಅಷ್ಟೇ ಅಲ್ಲ. ಕೆಲವನ್ನು ಜ್ಞಾನದಿಂದ ತಿಳಕೋಬೇಕು. ಅವರು ಮಾಡ್ತಾರೆ ಅಂತ ನೀನೂ ಮಾಡಬೇಡ. ಸರಿತಪ್ಪು ಆಲೋಚಿಸಿ ಮಾಡೋದನ್ನು ತಿಳಕೋಬೇಕು.

ಗ್ರಾಮೀಣ ಪ್ರದೇಶದಲ್ಲಿ ಸೊಸೆಯ ಕಾಲ್ಗುಣ ಚೆನ್ನಾಗಿದೆ ಅಂತಾರೆ. ಕಾಲ್ಗುಣ ಅಂದರೆ ಅದು ಕಾಲಾಗಿರೋದಿಲ್ಲ. ಕಾಲಕ್ಕೆ ತಕ್ಕ ನಡವಳಿಕೆಯಲ್ಲಿ ಇರುತ್ತದೆ. ಮನೆಯ ಪರಿಸ್ಥಿತಿಯನ್ನು ಅರಿತುಕೊಂಡು ಸಂಸಾರವನ್ನು ತೂಗಿಸಿದರೆ ಒಳ್ಳೆಯದಾಗುತ್ತದೆ. ಹೀಗೆ ಒಳ್ಳೆಯದಾದರೆ ಅದಕ್ಕೆ ಕಾಲ್ಗುಣ ಅಂತಾರೆ. ಕೆಲವು ವಿಷಯಗಳನ್ನು ಸಜ್ಜನರ ಸಂಗದಿಂದ ಅರಿತುಕೊಳ್ಳಬೇಕು. ಹಾಗಾದರೆ ಯಾರು ಸಜ್ಜನರು? ಯಾರ ಬಳಿ ಕುಳಿತರೆ ಸಮಾಧಾನ ಸಿಗುತ್ತದೋ ಅವರು ಸಜ್ಜನರು. ಯಾರ ಬಳಿಗೆ ಹೋದರೆ ನಮ್ಮ ಮನದ ತಾಪ ಕಡಿಮೆಯಾಗುತ್ತದೆಯೋ ಅವರು ಸಜ್ಜನರು. ಒಮ್ಮೆ ಇದ್ದಿಲು ಬೆಂಕಿಗೆ ಕೇಳಿತಂತೆ, 'ನಾನು ನಿನ್ನಂಗೆ ಕೆಂಪಗೆ ಆಗಬೇಕಲ್ಲ, ಅದಕ್ಕೆ ಏನು ಮಾಡಬೇಕು' ಅಂತ. ಅದಕ್ಕೆ ಬೆಂಕಿ 'ಏನೂ ಮಾಡಬೇಡ. ಸುಮ್ಮನೆ ನನ್ನ ಜೊತೆ ಇರು ನೀನೂ ಕೆಂಪಗೆ ಆಗುತ್ತೀಯ' ಎಂದು ಹೇಳಿತು. ಒಂದು ಬಿದಿರು ಕಟ್ಟಿಗೆ ಮಾರೋಣ ಕೈಗೆ ಸಿಕ್ಕರೆ ಸುಟ್ಟು ಬೂದಿಯಾಗತ್ತೈತಿ. ಕೊಳಲು ಮಾಡುವವನ ಕೈಗೆ ಸಿಕ್ಕರೆ ಕೃಷ್ಣನ ಕೈಯೊಳಗಿನ ಕೊಳಲಾಗುತ್ತೈತಿ. ಅಂದರೆ, ನೀವು ಯಾರ ಸಂಗ ಮಾಡುತ್ತೀರಿ ಎನ್ನುವುದರ ಮೇಲೆ ನಿಮ್ಮ ವ್ಯಕ್ತಿತ್ವ ನಿರ್ಮಾಣ ಆಗತ್ತೈತಿ. ದೊಡ್ಡವರ ಸಂಗ ಮಾಡಿದರೆ ಕೈ ಮುಗೀತಾರೆ. ದುಷ್ಟರ ಸಂಗ ಮಾಡಿದರೆ ಬಡೀತಾರೆ ಎನ್ನುವುದು ನಮಗೆ ಗೊತ್ತಿರಬೇಕು. ಮನುಷ್ಯನ ಮನಸ್ಸು ಅಂದರೆ ಮಣ್ಣಿನ ಗೋಡೆ ಇದ್ದ ಹಾಗೆ. ಎಷ್ಟು ತೊಳೆದರೂ ಕೆಸರು ಹಾಗೇ ಇರತ್ತೈತಿ. ಒಬ್ಬ ವ್ಯಕ್ತಿ ಒಂದು ಶಕ್ತಿಯಾಗಿ ಬೆಳೆಯಲು ಸದ್ವಿಚಾರ, ಸತ್ಸಂಗದಿಂದ ಮಾತ್ರ ಸಾಧ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ನವೆಂಬರ್ 25, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ದಶಮಿ ಗಂ. 25-02 ನಕ್ಷತ್ರ: ಉತ್ತರಫಲ್ಗುನಿ ಗಂ. 25-24 ಯೋಗ: ವಿಷ್ಕಂಭ ಗಂ. 13-12 ಕರಣ: ವಣಿಜ ಗಂ. 11-40, ವೃಶ್ಚಿಕ ಮಾಸದ 09 ನೇ ದಿನ, ಮಳೆನಕ್ಷತ್ರ: ಅನುರಾಧ 2.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-38 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 22 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 4, 9

ಮೇಷ: ದೇವತಾನುಗ್ರಹ ಇಲ್ಲದೇ ಇರುವುದರಿಂದ ಯತ್ನಿಸಿದ ಕಾರ್ಯ ವಿಳಂಬವಾಗುವುದು. ಸಾಮಾಜಿಕವಾಗಿ ಗೌರವ ದೊರೆತು ನೆಮ್ಮದಿ ಉಂಟಾಗುವುದು. ಗುಣ ಧರ್ಮ ನಿಮ್ಮ ಬೆಂಬಲಕ್ಕಿರುತ್ತದೆ.

ವೃಷಭ: ವಾಹನಗಳ ಅಥವಾ ಯಂತ್ರೋಪಕರಣಗಳ ಬಿಡಿ ಭಾಗಗಳ ಮಾರಾಟಗಳಿಂದ ಹೆಚ್ಚು ಲಾಭ. ಸರ್ಕಾರಿ ನೌಕರರಿಗೆ ಉದ್ಯೋಗದಲ್ಲಿ ಸ್ಥಾನಮಾನ ದೊರೆಯಲಿದೆ. ಯಾತ್ರೆಯ ಯೋಚನೆ ಬರಲಿದೆ.

ಮಿಥುನ: ಹೊಸ ಜಾಗದಲ್ಲಿ ಹೊಸ ಕೆಲಸಗಳಲ್ಲಿ ಹೊಂದಿಕೊಳ್ಳಲು ಕಷ್ಟವಾಗದು. ಸರ್ಕಾರಿ ಕಾಮಗಾರಿಗಳಿಂದ ಬಾಕಿ ಬರಬೇಕಾದ ಹಣದ ಬಗ್ಗೆ ಗಮನ ಹರಿಸಿ.

ಕರ್ಕಾಟಕ: ನಕಾರಾತ್ಮಕ ಆಲೋಚನೆಗಳನ್ನು ಬಿಟ್ಟು ಸಕಾರಾತ್ಮಕವಾಗಿ ಯೋಚಿಸಲು ಪ್ರಾರಂಭಿಸಿದರೆ ಅಭಿವೃದ್ಧಿಯ ಹಾದಿ ಹಿಡಿಯುವಿರಿ. ಪಾಲುದಾರಿಕೆಯಲ್ಲಿ ಹೋಟೆಲ್ ನಡೆಸಲು ಒಪ್ಪಿಕೊಳ್ಳಬಹುದು.

ಸಿಂಹ: ಹಿಂದಿನಿಂದ ಬಂದ ಕಷ್ಟ ಕಾರ್ಪಣ್ಯಗಳಿಗೆ ದೇವರು ಇಂದು ದಾರಿ ತೋರುತ್ತಾನೆ. ಗೆಳೆಯರ ದುಃಖದ ಪರಿಸ್ಥಿತಿಗಳಿಗೆ ಸಮಾಧಾನ ಹೇಳಬೇಕಾಗುವುದು.

ಕನ್ಯಾ: ವಿಭಿನ್ನ ರೀತಿಯ ಕೆಲಸವೊಂದನ್ನು ಸ್ನೇಹಿತರೊಬ್ಬರು ಒಪ್ಪಿಸಲಿದ್ದಾರೆ. ಒಪ್ಪಿಕೊಳ್ಳಿ. ಸಣ್ಣ-ಪುಟ್ಟ ವಿಚಾರಗಳಿಗೆ ನೆರೆಹೊರೆಯವರ ಕಿರಿಕಿರಿ ತಪ್ಪದು. ಯೋಚನಾಬದ್ಧ ನಿರ್ಧಾರಕ್ಕೆ ತಕ್ಕ ಫಲವನ್ನು ಪಡೆಯುವಿರಿ.

ತುಲಾ: ಷರತ್ತುಗಳಿರುವ ಅಥವಾ ಷರತ್ತುಗಳಿಗೆ ಒಪ್ಪಿಕೊಳ್ಳುವಂಥ ಯಾವುದೇ ರೀತಿಯ ವ್ಯವಹಾರಕ್ಕೂ ಕೈ ಹಾಕದಿರುವುದು ಉತ್ತಮ. ಜಮೀನಿನ ತಕರಾರು ವಿಷಯಗಳು ಇತ್ಯರ್ಥಗೊಳ್ಳುವುದು.

ವೃಶ್ಚಿಕ: ಪ್ರಮುಖ ಬದಲಾವಣೆಯ ಘಟ್ಟದಲ್ಲಿದ್ದೀರಿ. ಭವಿಷ್ಯದ ದೃಷ್ಟಿಯಿಂದ ಜೀವನ ಶೈಲಿಯನ್ನು ಬದಲಾಯಿಸಿ. ಆರಕ್ಷಕ ಅಧಿಕಾರಿಗಳಿಗೆ ಕೆಲಸದಲ್ಲಿ ಒತ್ತಡ ನಿವಾರಣೆಯಾಗಲಿದೆ.

ಧನು: ಮಕ್ಕಳ ಒತ್ತಾಯದಿಂದ ಮನರಂಜನೆಗಾಗಿ ಖರ್ಚು ಮಾಡುವ ಸಾಧ್ಯತೆ ಇದೆ. ರೈತರು ಹಾಗೂ ವಿದ್ಯಾರ್ಥಿಗಳ ಪ್ರಯತ್ನ ಬಲಕ್ಕೆ ಉತ್ತಮ ಫಲ ದೊರೆಯುವುದು.

ಮಕರ: ಸ್ನೇಹಿತರಲ್ಲಿ ಸಂಶಯ, ಅಪನಂಬಿಕೆ ಬಾರದಂಥ ಮನಸ್ಥಿತಿ ಕಾಪಾಡಿಕೊಳ್ಳಿ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯಲಿವೆ. ಪರಿಶ್ರಮವು ಮುಂದಿನ ದಿನಕ್ಕೆ ಅಡಿಪಾಯವಾಗಲಿದೆ.

ಕುಂಭ: ಅತಿಯಾದ ಔದಾರ್ಯ ತೋರಬೇಕೆನಿಸಿದ್ದಲ್ಲಿ ಹಣಕಾಸಿನ ಸ್ಥಿತಿ ಗಮನಿಸಿಕೊಳ್ಳಿ. ಉನ್ನತ ವ್ಯಾಸಂಗದವರಿಗೆ ಕೆಲಸಕ್ಕೆ ನೇರ ಆಯ್ಕೆಗೊಳ್ಳುವ ಸಂಭವವಿದೆ. ಶ್ರೀಸಿದ್ಧಿವಿನಾಯಕನಿಗೆ ಸೇವೆ ಮಾಡುವುದರಿಂದ ಶುಭ.


ಮೀನ: ಗುತ್ತಿಗೆದಾರರು ಹಣ ಉಳಿಸುವ ಪ್ರಯತ್ನಕ್ಕಿಂತ ಹೆಸರು ಸಂಪಾದಿಸುವ ವಿಷಯದ ಬಗ್ಗೆ ಗಮನ ನೀಡಿ. ಭಾವನೆಗಳಿಗೆ ಬೆಲೆಕೊಡುವ ಸಹಚರರನ್ನು ಹೊಂದುವಿರಿ. ಅದೃಷ್ಟ ಹಾಗೂ ಖ್ಯಾತಿ ಇಮ್ಮಡಿಗೊಳ್ಳಲಿದೆ.

ಪದಬಂಧ 5872

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಊಟ ಮಾಡದಿರುವುದು (4)
5.ಕಣ್ಣಿಗೆ ಕಾಣುವುದು (4)
7.ಮಲಯ ಪರ್ವತದಲ್ಲಿ ಬೆಳೆದಿರುವ ಶ್ರೀಗಂಧ (4)
8.ಪರಸ್ಪರ ಸಂಧಿಸುವುದು (4)
9.ತಿರುಗಿ ನಿಂತು ಅರ್ಥಮಾಡಿಕೊ! (3)
10.ಮುತ್ತಿಗೆ ಹಾಕುವವನು ತಿರುಗಿದ್ದಾನಲ್ಲಾ! (4)
11.ಹಾಲಿನಲ್ಲಿ ಬೇಯಿಸಿರುವ ಅನ್ನ (4)
13.ಜಾಗದಲ್ಲಿದ್ದಾಗ ಎಚ್ಚರವಾಗಿರುವಿಕೆ (4)
15.ಈತ ನರಕಾಧಿಪತಿಯ ಸೇವಕ (4)

ಮೇಲಿಂದ ಕೆಳಕ್ಕೆ
1.ವಾಚಾಳಿ ಇಲ್ಲಿ ತಿರುಗಿ ನಿಂತಿದ್ದಾನೆ (2)
2.ಹೊಲಗದ್ದೆಗಳ ಎತ್ತರವಾದ ಅಂಚು (2)
3.ಹುಟ್ಟುವ ಸ್ಥಳ (3)
4.ಸಮಾಜವನ್ನು ಸರಿ ಮಾಡುವುದು (6)
5.ಇದು ಕನ್ನಡಿಗರ ಝೂ! (6)
6.ವನದಲ್ಲಿರುವ ಬಟ್ಟೆ (3)
10.ನವಿಲಿನ ಕುಣಿತ ಉಲ್ಟಾ ಕಾಣುತ್ತಿದೆ (3)
12.ರಕ್ತವಿಲ್ಲಿ ವಿರಳವಾಗಿ ಕಾಣುತ್ತಿದೆ (3)
14.ಹಟಕ್ಕೊಂದು ಪರ್ಯಾಯ ಪದ (2)
16.ಮುದ್ದು ಮಾಡುತ್ತಾ ಕುಡಿಸಿದ ಔಷಧಿ (2)



5871ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಮಪದ 4.ಕಟಾಕ್ಷ
5.ನಿರ್ಗತಿ 7.ಸರಸ
9.ಸತ್ಸಂಗ 10.ಜೀರಿಗೆ
13.ಸುಜನ 15.ವಲ್ಮೀಕ
17.ಬುದ್ಬುದ 18.ವಿಧಾನಸೌಧ

ಮೇಲಿಂದ ಕೆಳಕ್ಕೆ:
1.ಪಕ್ಷ 2.ಮತ್ಸರ
3.ದನಿ 4.ಕಲ್ಲೋಲ
6.ತಿಕ್ಕಲು 7.ಸವಿಗನಸು
8.ಸಹಜೀವನ 11.ಪ್ರಭವ
12.ಪ್ರಮಾದ 14.ಜವಾನ
16.ಕವಿ 17.ಬುಧ

ಸುಡೊಕು 6257

	4			2		7		3
6		9	5		7			
	3	7		8		6		
	7			9			3	
	9	3	6					4
4				5		8		
7			8		9			
	5						8	
	8			4		9		1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6256 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ಬಂಡವಾಳ ಸಂಗ್ರಹಕ್ಕೆ ವಿಶಾಲ್ ಮೆಗಾ ಮಾರ್ಟ್ ಸಿದ್ಧತೆ

ಐಪಿಒ: ₹1.3 ಲಕ್ಷ ಕೋಟಿ ಸಂಗ್ರಹ



ನವದೆಹಲಿ (ಪಿಟಿಐ): ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ವರ್ಷದಲ್ಲಿ ಕಂಪನಿಗಳ ಸಾರ್ವಜನಿಕ ಷೇರು ಹಂಚಿಕೆ (ಐಪಿಒ) ಪ್ರಕ್ರಿಯೆ ಹೆಚ್ಚಿದೆ.

2023ರಲ್ಲಿ 57 ಕಂಪನಿಗಳು ಐಪಿಒ ಮೂಲಕ ₹49,436 ಕೋಟಿ ಬಂಡವಾಳ ಸಂಗ್ರಹಿಸಿದ್ದವು. ಈ ಬಾರಿ ಇಲ್ಲಿಯವರೆಗೆ 75 ಕಂಪನಿಗಳು ಐಪಿಒ ಮೂಲಕ ₹1.3 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಿವೆ. ಹುಂಡೈ ಮೋಟರ್ ಇಂಡಿಯಾ, ಸ್ವಿಗ್ಗಿ, ಎನ್‌ಟಿಪಿಸಿ ಗ್ರೀನ್ ಎನರ್ಜಿ, ಬಜಾಜ್ ಹೌಸಿಂಗ್ ಫೈನಾನ್ಸ್, ಓಲಾ ಎಲೆಕ್ಟ್ರಿಕ್ ಮೊಬಿಲಿಟಿ, ಬ್ರೈನ್‌ಬೀಸ್ ಸಲ್ಯೂಷನ್ಸ್ ಈ ಪಟ್ಟಿಯಲ್ಲಿರುವ ಪ್ರಮುಖ ಕಂಪನಿಗಳಾಗಿವೆ.

ಡಿಸೆಂಬರ್‌ನಲ್ಲಿ ವಿಶಾಲ್ ಮೆಗಾ ಮಾರ್ಟ್ ಸೇರಿ ಹತ್ತು ಕಂಪನಿಗಳು ಐಪಿಒ ಮೂಲಕ ₹20 ಸಾವಿರ ಕೋಟಿ ಬಂಡವಾಳ ಸಂಗ್ರಹಕ್ಕೆ ಮುಂದಾಗಿವೆ.

ಮುಖ್ಯಾಂಶಗಳು
- 2023ರಲ್ಲಿ 57 ಕಂಪನಿಗಳಿಂದ ಐಪಿಒ ಮೂಲಕ ₹49,436 ಕೋಟಿ ಬಂಡವಾಳ ಸಂಗ್ರಹ
- ಕಳೆದ ಐದು ವರ್ಷಗಳಲ್ಲಿ ಐಪಿಒ ಗಳಿಕೆ ಶೇ 27ರಷ್ಟು ಏರಿಕೆ
- ಡಿಸೆಂಬರ್‌ನಲ್ಲಿ 10 ಕಂಪನಿಯಿಂದ ಬಂಡವಾಳ ಸಂಗ್ರಹಕ್ಕೆ ಸಿದ್ಧತೆ

ಇಂಟರ್‌ನ್ಯಾಷನಲ್ ಜೆಮೊಲಾಜಿಕಲ್ ಇನ್‌ಸ್ಟಿಟ್ಯೂಟ್ (ಭಾರತ) ಲಿಮಿಟೆಡ್, ಅವನ್ಸೆ ಫೈನಾನ್ಸ್ ಸರ್ವಿಸಸ್, ಸಾಯಿ ಲೈಫ್ ಸೈನ್ಸಸ್, ಪರಾಸ್ ಹೆಲ್ತ್‌ಕೇರ್, ಡಿಎಎಂ ಕ್ಯಾಪಿಟಲ್ ಅಡ್ವೈಸರ್ ಕಂಪನಿಗಳು ಬಂಡವಾಳ ಸಂಗ್ರಹಕ್ಕೆ ಸಿದ್ಧತೆ ನಡೆಸಿವೆ.

ವಿಶಾಲ್ ಮೆಗಾ ಮಾರ್ಟ್ ₹8 ಸಾವಿರ ಕೋಟಿ, ಜೆಮೊಲಾಜಿಕಲ್ ಇನ್‌ಸ್ಟಿಟ್ಯೂಟ್ ₹4 ಸಾವಿರ ಕೋಟಿ ಹಾಗೂ ಅವನ್ಸೆ ಫೈನಾನ್ಸ್ ಸರ್ವಿಸಸ್ ₹3,500 ಕೋಟಿ ಸಂಗ್ರಹಿಸಲು ನಿರ್ಧರಿಸಿವೆ. 'ಮಹಾರಾಷ್ಟ್ರ ವಿಧಾನಸಭಾ ಚುನಾವಣಾ ಫಲಿತಾಂಶ ಹಾಗೂ ಉತ್ತರ ಪ್ರದೇಶದ ಲೋಕಸಭಾ ಉಪ ಚುನಾವಣೆಯ ಫಲಿತಾಂಶವು ಸಾರ್ವಜನಿಕ ಷೇರು ಹಂಚಿಕೆ ಮಾರುಕಟ್ಟೆಗೆ ಮತ್ತಷ್ಟು ಉತ್ತೇಜನ ನೀಡಲಿದೆ' ಎಂದು ಆನ್‌ಲೈನ್ ಬ್ರೋಕರೇಜ್ ಸಂಸ್ಥೆ ಟ್ರೇಡೆಜಿನಿ ಸಿಒಒ ಡಿ. ತ್ರಿವೇಶ್ ತಿಳಿಸಿದ್ದಾರೆ.

ಕಳೆದ ಐದು ವರ್ಷಗಳಲ್ಲಿ ಐಪಿಒಗಳ ಮೂಲಕ ಹೂಡಿಕೆದಾರರು ಹೆಚ್ಚು ಲಾಭ ಗಳಿಸಿದ್ದಾರೆ. 2020–2021ರಿಂದ 2024–25ರ ಇಲ್ಲಿಯವರೆಗೆ 236 ಐಪಿಒಗಳು ನಡೆಸಿವೆ. ಇವುಗಳ ಸರಾಸರಿ ಗಳಿಕೆ ಶೇ 27ರಷ್ಟಿದೆ ಎಂದು ವಿವರಿಸಿದ್ದಾರೆ.

ಎಫ್‌ಪಿಐ ₹26,533 ಕೋಟಿ ಹೊರಹರಿವು

ನವದೆಹಲಿ (ಪಿಟಿಐ): ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಪಿಐ) ನವೆಂಬರ್ ಆರಂಭದಿಂದ 22ರ ವರೆಗೆ ದೇಶದ ಈಕ್ವಿಟಿ ಮಾರುಕಟ್ಟೆಯಿಂದ ₹26,533 ಕೋಟಿ ಬಂಡವಾಳವನ್ನು ವಾಪಸ್ ಪಡೆದಿದ್ದಾರೆ.

ಅಕ್ಟೋಬರ್‌ನಲ್ಲಿ ₹94,017 ಕೋಟಿ ಬಂಡವಾಳದ ಹೊರಹರಿವು ಆಗಿದ್ದರೆ, ಸೆಪ್ಟೆಂಬರ್‌ನಲ್ಲಿ ₹57,724 ಕೋಟಿ ಹೂಡಿಕೆಯಾಗಿತ್ತು. ಇಲ್ಲಿಯವರೆಗೆ ಸಾಲ ಪತ್ರದ ಮಾರುಕಟ್ಟೆಯಲ್ಲಿ ₹1.05 ಲಕ್ಷ ಕೋಟಿ ಹೂಡಿಕೆಯಾಗಿದೆ.

'ವಿದೇಶಿ ಹೂಡಿಕೆದಾರರು ಚೀನಾದ ಮಾರುಕಟ್ಟೆಯತ್ತ ಹೊರಳಿದ್ದಾರೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಗಳು ನಿರೀಕ್ಷಿಸಿದಷ್ಟು ಲಾಭ ಗಳಿಸಿಲ್ಲ. ಇದರಿಂದ ಬಂಡವಾಳದ ಹೊರಹರಿವು ಹೆಚ್ಚಿದೆ' ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ವಿಮಾ ಮೋಸ; ಪಾರಾಗುವುದು ಹೇಗೆ?



ಹಣಕಾಸು ಸಾಕ್ಷರತೆ
ರಾಜೇಶ್ ಕುಮಾರ್ ಟಿ.ಆರ್.

ಭಾರತದಲ್ಲಿ ಹೂಡಿಕೆದಾರರ ದಿಕ್ಕು ತಪ್ಪಿಸಿ ಮೋಸದಿಂದ ವಿಮೆ ಮಾರಾಟ ಮಾಡುವ ಪ್ರವೃತ್ತಿ ಹಲವು ದಶಕಗಳಿಂದ ಅಸ್ತಿತ್ವದಲ್ಲಿದೆ. 2024ರ ಆರ್ಥಿಕ ಸಮೀಕ್ಷೆಯಲ್ಲಿಯೂ ಸಾಲು ಸಾಲು ಸುಳ್ಳು ಹೇಳಿ ಗ್ರಾಹಕರಿಗೆ ವಿಮೆ ಮಾರಾಟ ಮಾಡುತ್ತಿರುವ ಬಗ್ಗೆ ಪ್ರಸ್ತಾಪಿಸಲಾಗಿದೆ.

ಇತ್ತೀಚೆಗಷ್ಟೇ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಭಾರತೀಯ ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಐಆರ್‌ಡಿಎಐ) ಅಧ್ಯಕ್ಷ ದೇಬಶೀಶ್ ಪಾಂಡಾ ಅವರು, ಮೋಸದಿಂದ ವಿಮೆ ಮಾರಾಟ ಮಾಡದಂತೆ ಬ್ಯಾಂಕ್‌ಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಸರ್ಕಾರದ ವಿವಿಧ ಸಂಸ್ಥೆಗಳು ವಿಮಾ ಪಾಲಿಸಿಗಳ ಮೋಸದ ಮಾರಾಟಕ್ಕೆ ಕಡಿವಾಣ ಹಾಕಲು ಶತಪ್ರಯತ್ನ ನಡೆಸಿದ್ದರೂ ವಾಸ್ತವದಲ್ಲಿ ಅದನ್ನು ಕಾರ್ಯರೂಪಕ್ಕೆ ತರುವುದು ಅಷ್ಟು ಸುಲಭವಲ್ಲ. ಪರಿಸ್ಥಿತಿ ಹೀಗಿರುವಾಗ, ವಿಮಾ ಪಾಲಿಸಿಗಳ ಮೋಸದ ಮಾರಾಟ ಕುರಿತು ಗ್ರಾಹಕರಿಗೆ ಸರಿಯಾದ ಮಾಹಿತಿ ಮತ್ತು ಶಿಕ್ಷಣ ನೀಡುವ ಅಗತ್ಯವಿದೆ.

ಬನ್ನಿ, ಬ್ಯಾಂಕ್‌ಗಳು, ಮಧ್ಯವರ್ತಿಗಳು ಮತ್ತು ವಿಮಾ ಏಜೆಂಟ್‌ಗಳು ಮೋಸದಿಂದ ವಿಮೆ ಮಾರಾಟ ಮಾಡಲು ಏನೆಲ್ಲಾ ತಂತ್ರಗಳನ್ನು ಪ್ರಯೋಗಿಸುತ್ತಾರೆ ಎನ್ನುವುದನ್ನು ತಿಳಿಯೋಣ.

ಮೋಸದ ಮಾರಾಟ ಹೇಗೆ?: ನಿರ್ದಿಷ್ಟ ವಿಮಾ ಪಾಲಿಸಿ ಭಾರಿ ಗಳಿಕೆ ತಂದು ಕೊಡುತ್ತದೆ ಎಂದು ಬಿಂಬಿಸುವುದು, ಪಾಲಿಸಿಯ ಕೆಲ ಮಾಹಿತಿಯನ್ನು ಗ್ರಾಹಕನಿಂದ ಮರೆಮಾಚುವುದು, ತಡ ಮಾಡದೆ ಬೇಗ ಪಾಲಿಸಿಕೊಳ್ಳುವಂತೆ ಒತ್ತಡ ಹೇರುವುದು, ಗೋಪ್ಯ ಶುಲ್ಕದ ಮಾಹಿತಿಯನ್ನು ಮುಚ್ಚಿಡುವುದು ಸೇರಿ ಹಲವು ರೀತಿಯಲ್ಲಿ ವಿಮಾ ವಲಯದಲ್ಲಿ ಮೋಸದ ಮಾರಾಟ ನಡೆಯುತ್ತದೆ. ಅವುಗಳಲ್ಲಿ ಕೆಲವು ಉದಾಹರಣೆ ಇಲ್ಲಿವೆ.

ಮ್ಯೂಚುವಲ್ ಫಂಡ್ ಹೂಡಿಕೆ ತರಹದ ವಿಮೆ: ಕಳೆದ ಒಂದೂವರೆ ವರ್ಷದಲ್ಲಿ ಹಲವು ವಿಮಾ ಕಂಪನಿಗಳು ಎನ್‌ಎಫ್‌ಒ (ನ್ಯೂ ಫಂಡ್ ಆಫರ್) ಬಿಡುಗಡೆ ಮಾಡಿವೆ. ಕೆಲವು ಕಂಪನಿಗಳು ವಿಮಾ ಪಾಲಿಸಿಗಳನ್ನು ಮ್ಯೂಚುವಲ್ ಫಂಡ್‌ಗಳೆಂದು ಬಿಂಬಿಸಿ ಗ್ರಾಹಕರಿಗೆ ಮೋಸ ಮಾಡುತ್ತಿವೆ. ಸಾಮಾನ್ಯವಾಗಿ ವಿಮೆ ಮಾರಾಟ ಮಾಡುವವರು ಎಂಡೋಮೆಂಟ್, ಮನಿ ಬ್ಯಾಕ್ ಮಾರಾಟ ಮಾಡಲು ಪ್ರಯತ್ನಿಸುತ್ತಾರೆ. ಈ ವಿಮೆಗಳು ಮ್ಯೂಚುವಲ್ ಫಂಡ್ ಮಾದರಿಯಲ್ಲಿ ಗರಿಷ್ಠ ಲಾಭ ಒದಗಿಸುತ್ತವೆ ಎಂದು ಬಣ್ಣದ ವಿವರಣೆ ಕೊಡುತ್ತಾರೆ.

ಆದರೆ, ಮ್ಯೂಚುವಲ್ ಫಂಡ್ ಯಾವುದು, ಇನ್ಶೂರೆನ್ಸ್ ಯಾವುದು ಎಂಬ ಸ್ಪಷ್ಟತೆ ಇಲ್ಲದಿದ್ದರೆ ಸುಲಭವಾಗಿ ಮೋಸದ ಮಾರಾಟದ ಬಲೆಗೆ ಬೀಳುತ್ತೀರಿ. ಹಾಗಾಗಿ, ಯಾವುದೇ ಮಧ್ಯವರ್ತಿಯ ಸಲಹೆ ಪರಿಗಣಿಸಿ ಹೂಡಿಕೆ ಮಾಡುವಾಗ ಸಾಕಷ್ಟು ಎಚ್ಚರಿಕೆ ತೆಗೆದುಕೊಳ್ಳಿ.

ಕಮಿಷನ್ ಜಾಸ್ತಿ ಇರುವ ಪಾಲಿಸಿಗಳ ಮಾರಾಟ: ಸಾಮಾನ್ಯವಾಗಿ ನೋಡಿದಾಗ ವಿಮೆ ಮಾರಾಟ ಮಾಡುವಾಗ ಮಧ್ಯವರ್ತಿಗಳು, ಬ್ಯಾಂಕ್‌ಗಳು ಗ್ರಾಹಕನಿಗೆ ಹೆಚ್ಚು ಲಾಭವಾಗುವ ಪಾಲಿಸಿಗಳಿಗಿಂತ ತಮಗೆ ಹೆಚ್ಚು ಕಮಿಷನ್ ಸಿಗುವ ಪಾಲಿಸಿಗಳ ಮಾರಾಟಕ್ಕೆ ಒತ್ತು ನೀಡುತ್ತವೆ. ಎಂಡೋಮೆಂಟ್, ಮನಿ ಬ್ಯಾಕ್ ಪಾಲಿಸಿಯಂತಹ ಇನ್ಶೂರೆನ್ಸ್‌ಗಳನ್ನು ಮಾರಾಟ ಮಾಡಿದಾಗ ಮೊದಲ ವರ್ಷ ಶೇ 20ರಿಂದ ಶೇ 25ರಷ್ಟು ಕಮಿಷನ್ ಸಿಗುತ್ತದೆ. ಅದರ ಸಲುವಾಗಿ ಅಂತಹ ಪಾಲಿಸಿಗಳನ್ನು ಗ್ರಾಹಕನ ತಲೆಗೆ ಕಟ್ಟಿ ಟೋಪಿ ಹಾಕುತ್ತಿವೆ.

ಎಂಡೋಮೆಂಟ್, ಮನಿ ಬ್ಯಾಕ್‌ನಂತಹ ಪಾಲಿಸಿಗಳಲ್ಲಿ ಗಳಿಕೆ ಕಡಿಮೆ ಮತ್ತು ಕವರೇಜ್ ಕೂಡ ಹೆಚ್ಚಿರುವುದಿಲ್ಲ. ಗ್ರಾಹಕನಿಗೆ ಇಂತಹ ಪಾಲಿಸಿಗಳಿಂದ ಹೆಚ್ಚು ಅನುಕೂಲವಾಗುವುದಿಲ್ಲ. ವಾಸ್ತವದಲ್ಲಿ ಟರ್ಮ್ ಇನ್ಶೂರೆನ್ಸ್‌ನಿಂದ ಗ್ರಾಹಕನಿಗೆ ಹೆಚ್ಚು ಅನುಕೂಲವಾಗುತ್ತದೆ. ಆದರೆ, ಹಣಕಾಸು ಸಂಸ್ಥೆಗಳು ಅದರ ಮಾರಾಟಕ್ಕೆ ಹೆಚ್ಚಿನ ಆದ್ಯತೆ ನೀಡುವುದಿಲ್ಲ.

ಹೂಡಿಕೆ ಮತ್ತು ತೆರಿಗೆ ಲಾಭ: ಜನವರಿ, ಫೆಬ್ರುವರಿ ಮತ್ತು ಮಾರ್ಚ್ ವೇಳೆ ಬ್ಯಾಂಕ್‌ಗಳು ಅಥವಾ ವಿಮಾ ಏಜೆಂಟ್‌ಗಳ ಬಳಿ ಹೋದರೆ ಅವರು ಹೇಳುವ ಮೊದಲ ಮಾತು ಈ ಸಲ ಆದಾಯ ತೆರಿಗೆ ಉಳಿಸುವ ಜೊತೆಗೆ ಕವರೇಜ್ ಮತ್ತು ಹೂಡಿಕೆ ಲಾಭ ಕೊಡುವ ಜೀವ ವಿಮೆ ತೆಗೆದುಕೊಳ್ಳಿ ಎನ್ನುವುದಾಗಿದೆ. ಹೀಗೆ ಹೇಳಿದ ತಕ್ಷಣ ವೇತನ ಪಡೆಯುವ ಹಲವರು ಪೂರ್ವಾಪರ ಯೋಚಿಸದೆ ಎಂಡೋಮೆಂಟ್ ಅಥವಾ ಮನಿ ಬ್ಯಾಕ್ ಪಾಲಿಸಿಗಳನ್ನು ತೆಗೆದುಕೊಂಡು ಬಿಡುತ್ತಾರೆ.

ಆದರೆ, ಎಷ್ಟೋ ಮಂದಿಗೆ ತೆರಿಗೆ ಉಳಿಸಲು ಜೀವ ವಿಮೆ ಪಾಲಿಸಿಯ ಅಗತ್ಯವೇ ಇರುವುದಿಲ್ಲ. ಕಾರ್ಮಿಕರ ಭವಿಷ್ಯ ನಿಧಿ (ಇಪಿಎಫ್) ಮತ್ತು ಮಕ್ಕಳ ಶಿಕ್ಷಣ ವೆಚ್ಚ (ಟ್ಯೂಷನ್ ಫೀಸ್) ಮೂಲಕವೇ ಸೆಕ್ಷನ್ 80ಸಿ ಅಡಿಯಲ್ಲಿ ₹1.5 ಲಕ್ಷದವರೆಗಿನ ತೆರಿಗೆ ವಿನಾಯಿತಿ ಸಿಕ್ಕಿಬಿಡುತ್ತದೆ. ಹೀಗಿದ್ದೂ ಮೋಸದ ವಿಮೆ ಮಾರಾಟಕ್ಕೆ ಅವರು ಸಿಲುಕುತ್ತಾರೆ. ತೆರಿಗೆ ಉಳಿತಾಯಕ್ಕೆ ವರ್ಷದ ಕೊನೆಯಲ್ಲಿ ಯೋಜನೆ ರೂಪಿಸುವ ಬದಲು ವರ್ಷದ ಆರಂಭದಲ್ಲೇ ಈ ಕೆಲಸ ಮಾಡಿದರೆ ಇಂತಹ ಸಮಸ್ಯೆಗಳಿಂದ ಪಾರಾಗಬಹುದು.

ಪಾರಾಗುವುದು ಹೇಗೆ?: ಯಾವುದೇ ವೃತ್ತಿಪರ ಹಣಕಾಸು ಸಲಹೆಗಾರರು ನಿಮ್ಮ ಅಗತ್ಯತೆ ಆಧರಿಸಿ ಯಾವ ಹಣಕಾಸು ಉತ್ಪನ್ನ ಖರೀದಿಸಬೇಕು ಎಂದು ಸಲಹೆ ನೀಡುತ್ತಾರೆ. ಹಾಗೆ ಮಾಡದೆ ನಿರ್ದಿಷ್ಟ ಹಣಕಾಸು ಉತ್ಪನ್ನದಲ್ಲಿ ಹೂಡಿಕೆ ಮಾಡುವಂತೆ ಒತ್ತಾಯಿಸಿದರೆ ಅಲ್ಲಿ ಮೋಸದ ಮಾರಾಟ ನಡೆಯುವ ಸಾಧ್ಯತೆ ಇರುತ್ತದೆ.

ನಿಮಗೆ ಯಾವುದೇ ಹೂಡಿಕೆ ಉತ್ಪನ್ನವನ್ನು ಹಣಕಾಸು ಸಲಹೆಗಾರರು ಶಿಫಾರಸು ಮಾಡಿದಾಗ ಅದನ್ನು ಯಾಕೆ ಮಾಡಿದ್ದಾರೆ. ಅದು ನಿಮಗೆ ಸರಿಹೊಂದುವುದೇ ಎನ್ನುವುದನ್ನು ಖಾತರಿ ಪಡಿಸಿಕೊಳ್ಳಿ. ಧುತ್ತೆಂದು ಹೂಡಿಕೆಯ ನಿರ್ಧಾರ ಮಾಡಿಬಿಡಬೇಡಿ. ಯಾವುದೇ ಹೂಡಿಕೆ ಮಾಡುವಾಗ ನಿಬಂಧನೆ ಪತ್ರವನ್ನು ಪೂರ್ತಿಯಾಗಿ ಓದಿ. ನಿಮಗೆ ಹಣಕಾಸು, ವಿಮೆ ಬಗ್ಗೆ ಸಲಹೆ ನೀಡುವವರು ನೋಂದಾಯಿತ ಪ್ರತಿನಿಧಿಗಳೇ ಎಂಬುದನ್ನು ಖಾತರಿಪಡಿಸಿಕೊಳ್ಳಿ.

ಮೋಸ ಹೋದರೆ ಏನು ಮಾಡಬೇಕು?: ಸಾಮಾನ್ಯವಾಗಿ ವಿಮೆ ಖರೀದಿಸಿದಾಗ 15 ರಿಂದ 30 ದಿನಗಳ ಫ್ರೀ ಲುಕ್ ಪೀರಿಯಡ್ ನೀಡಲಾಗುತ್ತದೆ. ಒಂದೊಮ್ಮೆ ನೀವು ಪಡೆದಿರುವ ಪಾಲಿಸಿ ಸರಿಯಿಲ್ಲ ಎಂದು ನಿಮಗೆ ಅನಿಸಿದರೆ ನಿಗದಿತ ಸಮಯದೊಳಗೆ ಪಾಲಿಸಿ ಹಿಂದಿರುಗಿಸಿ ಹಣ ಹಿಂಪಡೆಯಬಹುದು. ಈ ಅವಧಿ ಮುಗಿದಿದ್ದರೆ ನೇರವಾಗಿ ವಿಮಾ ಕಂಪನಿಗೆ ದೂರು ಸಲ್ಲಿಸಿ ಸಮಸ್ಯೆಗೆ ಪರಿಹಾರ ಕೇಳಿ. ಆಗಲೂ ಸಮಸ್ಯೆಗೆ ಸ್ಪಂದನೆ ಸಿಗದಿದ್ದರೆ ವಿಮಾ ಒಂಬುಡ್ಸ್‌ಮನ್‌ಗೆ ದೂರು ನೀಡಿ. ಎಲ್ಲ ಪ್ರಯತ್ನಗಳ ಬಳಿಕವೂ ಸಮಸ್ಯೆಗೆ ಪರಿಹಾರ ಸಿಗದಿದ್ದರೆ ಐಆರ್‌ಡಿಎಐಗೆ ದೂರು ಸಲ್ಲಿಸಬಹುದು.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಎರಡು ವಾರದ ಬಳಿಕ ಷೇರುಪೇಟೆ ಗಳಿಕೆ

ಷೇರುಪೇಟೆ

ಸತತ ಎರಡು ವಾರಗಳಿಂದ ಕುಸಿತದ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಮತ್ತೆ ಉತ್ತಮ ಗಳಿಕೆಯ ಲಯಕ್ಕೆ ಮರಳಿವೆ. ನವೆಂಬರ್ 22ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಉತ್ತಮ ಗಳಿಕೆ ದಾಖಲಿಸಿವೆ.

79,117 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.98ರಷ್ಟು ಜಿಗಿದಿದೆ. 23,907 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.59ರಷ್ಟು ಗಳಿಸಿಕೊಂಡಿದೆ. ಏಷ್ಯಾ ಮತ್ತು ಯುರೋಪ್ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆ, ದೀರ್ಘಾವಧಿಯಲ್ಲಿ ಭಾರತದ ಮಾರುಕಟ್ಟೆ ಬೆಳವಣಿಗೆ ಸಾಧಿಸಲಿದೆ ಎಂಬ ಆಶಾಭಾವ ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆ ಪುಟಿದೇಳಲು ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಧ್ಯಮ ಶೇ 1.65, ಎನರ್ಜಿ ಶೇ 1.41 ಮತ್ತು ಅನಿಲ ಮತ್ತು ತೈಲ ಸೂಚ್ಯಂಕಗಳು ಶೇ 1.23ರಷ್ಟು ಕುಸಿದಿವೆ. ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 6.26, ಆಟೊ ಶೇ 2.79, ಮಾಹಿತಿ ತಂತ್ರಜ್ಞಾನ ಶೇ 2.22, ಎಫ್‌ಎಂಸಿಜಿ ಶೇ 2.1, ಬ್ಯಾಂಕ್ ಶೇ 1.9, ಫೈನಾನ್ಸ್ ಶೇ 1.83, ಫಾರ್ಮಾ ಶೇ 0.97, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 0.24 ಮತ್ತು ಲೋಹ ವಲಯ ಶೇ 0.2ರಷ್ಟು ಗಳಿಸಿಕೊಂಡಿವೆ.


ಇಳಿಕೆ–ಏರಿಕೆ: ವಾರದ ಲೆಕ್ಕಾಚಾರದಲ್ಲಿ ನೋಡಿದಾಗ ನಿಫ್ಟಿಯಲ್ಲಿ ಅದಾನಿ ಎಂಟರ್ ಪ್ರೈಸಸ್ ಶೇ 20.92, ಅದಾನಿ ಪೋರ್ಟ್ಸ್ ಶೇ 10.01, ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಶೇ 5.16, ಬಿಪಿಸಿಎಲ್ ಶೇ 4.26, ಬಜಾಜ್ ಫಿನ್‌ಸರ್ವ್ ಶೇ 2.37, ಒಎನ್‌ಜಿಸಿ ಶೇ 2.27, ಎನ್‌ಟಿಪಿಸಿ ಶೇ 2.09, ಇಂಡಸ್‌ಇಂಡ್ ಬ್ಯಾಂಕ್ ಶೇ 1.82, ಸಿಪ್ಲಾ ಶೇ 1.57, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಶೇ 1.33, ಬ್ರಿಟಾನಿಯಾ ಇಂಡಸ್ಟ್ರಿಸ್ ಶೇ 1.28 ಮತ್ತು ಡಾ.ರೆಡ್ಡೀಸ್ ಲ್ಯಾಬ್ಸ್ ಶೇ 1.14ರಷ್ಟು ಕುಸಿದಿವೆ.

ಪವರ್ ಗ್ರಿಡ್ ಕಾರ್ಪೊರೇಷನ್ ಶೇ 7.34, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 6.79, ಅಲ್ಟ್ರಾಟೆಕ್ ಸಿಮೆಂಟ್ ಶೇ 5.29, ಹೀರೊ ಮೋಟೊಕಾರ್ಪ್ ಶೇ 4, ಹಿಂಡಾಲ್ಕೋ ಇಂಡಸ್ಟ್ರಿಸ್ ಶೇ 3.91, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 3.8, ಟೈಟನ್ ಕಂಪನಿ ಶೇ 3.53, ಟಾಟಾ ಸ್ಟೀಲ್ ಶೇ 3.26, ಟೆಕ್ ಮಹೀಂದ್ರ ಶೇ 3.19, ಟ್ರೆಂಟ್ ಶೇ 3.11, ಕೋಟಕ್ ಮಹೀಂದ್ರ ಬ್ಯಾಂಕ್ ಶೇ 3.01 ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 2.85ರಷ್ಟು ಗಳಿಸಿ ಕೊಂಡಿವೆ.

ಮುನ್ನೋಟ: ಈ ವಾರ ಎಸಿಎಂಇ ಸೋಲಾರ್ ಹೋಲ್ಡಿಂಗ್ಸ್, ಆಮ್ಕೋಲ್ ಟೂಲ್ಸ್, ಅನ್ಸಾಲ್ ಪ್ರಾಪರ್ಟೀಸ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್, ಹರೀಶ್ ಟೆಕ್ಸ್ ಟೈಲ್ ಎಂಜಿನಿಯರಿಂಗ್, ಮಿನಾಲ್ ಇಂಡಸ್ಟ್ರೀಸ್ ಸೇರಿ ಕೆಲ ಕಂಪನಿಗಳ ತ್ರೈಮಾಸಿಕ ಫಲಿತಾಂಶ ಪ್ರಕಟಗೊಳ್ಳಲಿದೆ.

ಡಿಸೆಂಬರ್‌ನಲ್ಲಿ ನಡೆಯುವ ಆರ್‌ಬಿಐ ಹಣಕಾಸು ಸಮಿತಿ ಸಭೆಯ ಮೇಲೆ ಹೂಡಿಕೆದಾರರ ದೃಷ್ಟಿ ನೆಟ್ಟಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ಕೇಂದ್ರದ ಕೆಲವು ಸಚಿವರು ರೆಪೊ ದರ ಇಳಿಕೆಗೆ ಒತ್ತಡ ಹೇರುತ್ತಿರುವ ಬೆನ್ನಲ್ಲೇ ಆರ್‌ಬಿಐ ಯಾವ ಕ್ರಮ ಕೈಗೊಳ್ಳಲಿದೆ ಎನ್ನುವ ಕುತೂಹಲವಿದೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹607

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹416-615
ದ್ವಿತಳಿ (ಬಿ.ವಿ)	₹315-728

ಡಿಜಿಟಲ್ ಜೀವನ್ ಪ್ರಮಾಣ ಪತ್ರಕ್ಕೆ ಒಪ್ಪಿಗೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ), ಕಳೆದ 20 ದಿನಗಳಲ್ಲಿ 2.15 ಲಕ್ಷ ಪಿಂಚಣಿದಾರರು ಸಲ್ಲಿಸಿದ್ದ ಡಿಜಿಟಲ್ ರೂಪದ ಜೀವನ್ ಪ್ರಮಾಣ ಪತ್ರಗಳಿಗೆ (ಡಿಎಲ್‌ಸಿ) ಅನುಮೋದನೆ ನೀಡಿದೆ.

ಪ್ರತಿ ವರ್ಷದ ನವೆಂಬರ್‌ನಲ್ಲಿ ಪಿಂಚಣಿದಾರರು ಜೀವಿತ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ಹೀಗಾಗಿ, ಡಿಜಿಟಲ್ ರೂಪದ ಪ್ರಮಾಣ ಪತ್ರ ಸಲ್ಲಿಕೆ ಸಂಬಂಧ ಕೇಂದ್ರ ಸರ್ಕಾರವು ಪಿಂಚಣಿದಾರರಿಗೆ ಪ್ರೋತ್ಸಾಹ ನೀಡಲು ವಿಶೇಷ ಅಭಿಯಾನಕ್ಕೆ ಚಾಲನೆ ನೀಡಿದ್ದು, ಇದೇ ತಿಂಗಳ 30ರ ವರೆಗೆ ನಡೆಯಲಿದೆ.

ಎಂ–ಕ್ಯಾಪ್ ಏರಿಕೆ

ನವದೆಹಲಿ (ಪಿಟಿಐ): ಕಳೆದ ವಾರ ನಡೆದ ಷೇರುಪೇಟೆ ವಹಿವಾಟಿನಲ್ಲಿ ಸೂಚ್ಯಂಕಗಳ ಏರಿಕೆಯಿಂದಾಗಿ ದೇಶದ ಪ್ರಮುಖ 10 ಕಂಪನಿಗಳ ಪೈಕಿ 8 ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯಕ್ಕೆ (ಎಂ–ಕ್ಯಾಪ್) ₹1.55 ಲಕ್ಷ ಕೋಟಿ ಸೇರ್ಪಡೆಯಾಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್‌ನ ಮಾರುಕಟ್ಟೆ ಬಂಡವಾಳ ಮೌಲ್ಯಕ್ಕೆ ₹40,392 ಕೋಟಿ ಸೇರ್ಪಡೆಯಾಗಿದ್ದು, ಒಟ್ಟು ಎಂ–ಕ್ಯಾಪ್ ₹13.34 ಲಕ್ಷ ಕೋಟಿ ಆಗಿದೆ.

ಟಿಸಿಎಸ್ ₹36,036 ಕೋಟಿ, ಐಸಿಐಸಿಐ ಬ್ಯಾಂಕ್ ₹16,266 ಕೋಟಿ, ಇನ್ಫೊಸಿಸ್ ₹16,189 ಕೋಟಿ, ಹಿಂದುಸ್ತಾನ್ ಯೂನಿಲಿವರ್ ₹13,239 ಕೋಟಿ, ಐಟಿಸಿ ₹11,508 ಕೋಟಿ, ಭಾರ್ತಿ ಏರ್‌ಟೆಲ್ ₹11,260 ಕೋಟಿ ಮತ್ತು ಎಸ್‌ಬಿಐ ಎಂ–ಕ್ಯಾಪ್‌ಗೆ ₹10,709 ಕೋಟಿ ಸೇರ್ಪಡೆಯಾಗಿದೆ.

ಲಂಚ ಪ್ರಕರಣ: ಭಾರತದ ಸಂಸ್ಥೆಗಳಿಂದ ತನಿಖೆಗೆ ಆದೇಶಿಸಲು ಮನವಿ

ಅದಾನಿ ವಿರುದ್ಧ ತನಿಖೆ: 'ಸುಪ್ರೀಂ'ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಮೆರಿಕದ ಕೋರ್ಟ್‌ನಲ್ಲಿ ದಾಖಲಾಗಿರುವ ಲಂಚ ಪ್ರಕರಣಕ್ಕೆ ಸಂಬಂಧಿಸಿದಂತೆ ಉದ್ಯಮಿ ಗೌತಮ್ ಅದಾನಿ ಹಾಗೂ ಇತರರ ವಿರುದ್ಧ ತನಿಖೆಗೆ ಆದೇಶಿಸುವಂತೆ ಕೋರಿ ವಕೀಲರೊಬ್ಬರು, ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿದ್ದಾರೆ.

ವಕೀಲ ವಿಶಾಲ್ ತಿವಾರಿ ಅರ್ಜಿ ಸಲ್ಲಿಸಿದ್ದಾರೆ.

ಅದಾನಿ ಸಮೂಹದ ಷೇರುಗಳು ಕೃತಕ ಬೆಲೆಯಲ್ಲಿ ಮಾರಾಟವಾಗುತ್ತಿವೆ ಎಂದು ಅಮೆರಿಕದ ಶಾರ್ಟ್ ಸೆಲ್ಲರ್ ಕಂಪನಿ ಹಿಂಡನ್‌ಬರ್ಗ್ ರಿಸರ್ಚ್, 2023ರ ಜನವರಿಯಲ್ಲಿ ಆರೋಪಿಸಿತ್ತು. ಸುಪ್ರೀಂ ಕೋರ್ಟ್‌ನ ನಿರ್ದೇಶನದ ಮೇರೆಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಅದಾನಿ ಸಮೂಹ ವಿರುದ್ಧದ ಆರೋಪಗಳ ಬಗ್ಗೆ ತನಿಖೆ ಕೈಗೊಂಡಿದೆ. ಒಟ್ಟು 24 ತನಿಖೆಗಳ ಪೈಕಿ 22 ತನಿಖೆಗಳು ಪೂರ್ಣಗೊಂಡಿವೆ. ಉಳಿದ ತನಿಖೆಗಳು ಪ್ರಗತಿಯಲ್ಲಿವೆ ಎಂದಷ್ಟೇ ವರದಿ ನೀಡಿದೆ ಎಂದು ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿದೆ.

ಪ್ರಸಕ್ತ ವರ್ಷದ ಜನವರಿ 3ರಂದು ಮೂರು ತಿಂಗಳೊಳಗೆ ತನಿಖೆ ಪೂರ್ಣಗೊಳಿಸಿ ವರದಿ ಸಲ್ಲಿಸುವಂತೆ ಸೆಬಿಗೆ ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಇದರ ಹೊರತಾಗಿಯೂ ನ್ಯಾಯಾಲಯಕ್ಕೆ ಅಂತಿಮ ತನಿಖಾ ವರದಿ ಸಲ್ಲಿಸಿಲ್ಲ. ಅಲ್ಲದೆ, ಅದಾನಿ ಸಮೂಹ ವಿರುದ್ಧದ ತನಿಖೆ ಬಗ್ಗೆ ಅಂತಿಮ ನಿರ್ಣಯಕ್ಕೆ ಬರಲು ಸಾಧ್ಯವಾಗಿಲ್ಲ. ಸದ್ಯದ ಸ್ಥಿತಿಯಲ್ಲಿ ತನಿಖಾ ವರದಿಯು ನ್ಯಾಯಾಲಯದಲ್ಲಿ ದಾಖಲಾಗದಿದ್ದರೆ ಸೆಬಿ ಮೇಲಿನ ವಿಶ್ವಾಸಾರ್ಹತೆ ಕುಗ್ಗಲಿದೆ ಎಂದು ಹೇಳಲಾಗಿದೆ.




ಸೌರ ವಿದ್ಯುತ್ ಯೋಜನೆಗಳ ಗುತ್ತಿಗೆ ಪಡೆಯಲು ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡಿದ ಪ್ರಕರಣದ ಮೂಲಕ ಅದಾನಿ ಸಮೂಹವು ಹಲವು ದುಷ್ಕೃತ್ಯ ಎಸಗಿರುವುದು ಅನಾವರಣಗೊಂಡಿದೆ. ದೇಶದ ಹಿತದೃಷ್ಟಿಯಿಂದ ಭಾರತದ ತನಿಖಾ ಸಂಸ್ಥೆಗಳಿಂದ ಪ್ರಕರಣದ ಬಗ್ಗೆ ತನಿಖೆ ನಡೆಸಬೇಕು ಎಂದು ಕೋರಲಾಗಿದೆ.

'ಸೆಬಿ ಕೈಗೊಂಡಿರುವ ತನಿಖೆಗಳನ್ನು ಮುಕ್ತಾಯಗೊಳಿಸಬೇಕು. ಜೊತೆಗೆ, ತನಿಖಾ ವರದಿ ಮತ್ತು ಅಂತಿಮ ನಿರ್ಣಯವನ್ನು ದಾಖಲೆ ರೂಪದಲ್ಲಿ ನ್ಯಾಯಾಲಯದ ಮುಂದೆ ಇರಿಸುವ ಮೂಲಕ ವಿಶ್ವಾಸ ಉಳಿಸಿಕೊಳ್ಳಬೇಕು. ಹೂಡಿಕೆದಾರರು ವಿಶ್ವಾಸ ಕಳೆದುಕೊಳ್ಳದಂತೆ ನೋಡಿಕೊಳ್ಳಬೇಕು' ಎಂದು ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿದೆ.

ನವೆಂಬರ್ 20ರಂದು ಅಮೆರಿಕದ ಅಟಾರ್ನಿ ಕಚೇರಿಯು ನ್ಯೂಯಾರ್ಕ್‌ನ ಪೂರ್ವ ಜಿಲ್ಲಾ ನ್ಯಾಯಾಲಯದಲ್ಲಿ ಗೌತಮ್ ಅದಾನಿ, ಸಾಗರ್ ಅದಾನಿ ಹಾಗೂ ಇತರೆ ಆರು ಮಂದಿ ವಿರುದ್ಧ ದಾಖಲಾಗಿರುವ ಆರೋಪ ಪಟ್ಟಿಯನ್ನು ಬಹಿರಂಗಪಡಿಸಿದೆ ಎಂದು ವಿವರಿಸಲಾಗಿದೆ.

'ಎಸ್‌ಇಸಿಗೆ ಸಮನ್ಸ್ ಜಾರಿ ಅಧಿಕಾರ ಇಲ್ಲ'


ಗೌತಮ್ ಅದಾನಿ

ನವದೆಹಲಿ (ಪಿಟಿಐ): ವಿದೇಶಿ ಪ್ರಜೆಗಳಿಗೆ ನೇರವಾಗಿ ಸಮನ್ಸ್ ಜಾರಿಗೊಳಿಸುವ ನ್ಯಾಯಿಕ ಅಧಿಕಾರವು ಅಮೆರಿಕದ ಸೆಕ್ಯುರಿಟೀಸ್ ಎಕ್ಸ್‌ಚೇಂಜ್ ಕಮಿಷನ್‌ಗೆ (ಎಸ್‌ಇಸಿ) ಇಲ್ಲ ಎಂದು ಮೂಲಗಳು ಹೇಳಿವೆ.

ಗೌತಮ್ ಅದಾನಿ ಮತ್ತು ಅವರ ಅಣ್ಣನ ಮಗ ಸಾಗರ್ ಅದಾನಿ ಅವರ ವಿರುದ್ಧ ಅಮೆರಿಕದ ಕೋರ್ಟ್‌ನಲ್ಲಿ ಲಂಚ ಪ್ರಕರಣ ಕುರಿತು ಆರೋಪ ಪಟ್ಟಿ ಸಲ್ಲಿಕೆಯಾಗಿದೆ. ಭಾರತದಲ್ಲಿ ಸೌರ ವಿದ್ಯುತ್ ಉತ್ಪಾದಿಸುವ ಯೋಜನೆಗಳ ಗುತ್ತಿಗೆ ಪಡೆಯಲು ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡಿದ್ದಾರೆ ಎನ್ನುವ ಆರೋಪ ಅವರ ಮೇಲಿದೆ.

ಪ್ರಕರಣ ಕುರಿತಂತೆ ಅಮೆರಿಕದ ಸೆಕ್ಯುರಿಟೀಸ್ ಎಕ್ಸ್‌ಚೇಂಜ್ ಕಮಿಷನ್‌ನಿಂದ (ಎಸ್‌ಇಸಿ) ಈ ಇಬ್ಬರಿಗೂ ನ್ಯಾಯಾಲಯದ ಮುಂದೆ ವಿವರಣೆ ನೀಡುವಂತೆ ಸಮನ್ಸ್ ಜಾರಿಗೊಳಿಸಲಾಗಿದೆ ಎಂದು ಹೇಳಲಾಗಿತ್ತು.

ಆದರೆ, ಎಸ್‌ಇಸಿಯಿಂದ ಸಮನ್ಸ್ ಜಾರಿಗೊಳಿಸುವುದಕ್ಕೂ ಮೊದಲು ರಾಜತಾಂತ್ರಿಕ ಶಿಷ್ಟಾಚಾರ ಪಾಲಿಸುವುದು ಕಡ್ಡಾಯವಾಗಿದೆ. ಅಮೆರಿಕದಲ್ಲಿರುವ ಭಾರತದ ರಾಯಭಾರ ಕಚೇರಿ ಮೂಲಕ ಸಮನ್ಸ್ ರವಾನಿಸಬೇಕಿದೆ. ಜೊತೆಗೆ, ಇದಕ್ಕೆ ಸಂಬಂಧಿಸಿದಂತೆ ರೂಪಿಸಿರುವ ಉಭಯ ದೇಶಗಳ ರಾಯಭಾರ ನೀತಿಯನ್ನು ಪಾಲಿಸಬೇಕಿದೆ ಎಂದು ಮೂಲಗಳು ತಿಳಿಸಿವೆ.

1965ರ ಹೇಗ್ ಸಮಾವೇಶ, ಅಮೆರಿಕದ ಆಡಳಿತ ಮತ್ತು ಭಾರತದ ನಡುವೆ ಪರಸ್ಪರ ಕಾನೂನು ನೆರವು ಒಪ್ಪಂದ ಏರ್ಪಟ್ಟಿದೆ. ಈ ಒಪ್ಪಂದದಡಿ ರೂಪಿಸಿರುವ ರೀತಿ-ರಿವಾಜು ಪಾಲಿಸಬೇಕಿದೆ. ಇದರ ಅನ್ವಯವೇ ಸಮನ್ಸ್ ಜಾರಿಗೊಳಿಸಬೇಕಿದೆ. ಅಂಚೆ ಮೂಲಕ ಸಂಬಂಧಪಟ್ಟವರಿಗೆ ನೇರವಾಗಿ ಕಳುಹಿಸುವ ಅಧಿಕಾರ ಇರುವುದಿಲ್ಲ ಎಂದು ಹೇಳಿವೆ. ಸಮನ್ಸ್‌ಗಳು ನ್ಯೂಯಾರ್ಕ್ ನ್ಯಾಯಾಲಯದ ಮುಂದೆ ಸೆಕ್ಯುರಿಟೀಸ್ ಎಕ್ಸ್‌ಚೇಂಜ್ ಕಮಿಷನ್‌ನಿಂದ ಸಲ್ಲಿಸಿದ ಕಾನೂನು ದಾಖಲೆಯ ಭಾಗವಾಗಿವೆ. ಹಾಗಾಗಿ, ಗೌತಮ್ ಅದಾನಿ ಹಾಗೂ ಇತರರಿಗೆ ಇವುಗಳನ್ನು ರವಾನಿಸಲು ಕೆಲ ಸಮಯ ಹಿಡಿಯಲಿದೆ ಎಂದು ಹೇಳಿವೆ.

ಆದರೆ, ಇಲ್ಲಿಯವರೆಗೂ ಗೌತಮ್ ಅದಾನಿ ಮತ್ತು ಸಾಗರ್ ಅವರಿಗೆ ಯಾವುದೇ ಸಮನ್ಸ್ ಜಾರಿಯಾಗಿಲ್ಲ ಎಂದು ಹೇಳಲಾಗಿದೆ.

ಬಾಂಗ್ಲಾ: ಅದಾನಿ ಇಂಧನ ಯೋಜನೆ ಪರಿಶೀಲನೆ

ಢಾಕಾ (ಪಿಟಿಐ): ಅದಾನಿ ಸಮೂಹ ಸೇರಿ ವಿವಿಧ ವ್ಯಾಪಾರ ಸಂಸ್ಥೆಗಳ ಜತೆಗೆ ಮಾಡಿಕೊಂಡಿರುವ ವಿದ್ಯುತ್ ಸಂಬಂಧಿತ ಒಪ್ಪಂದಗಳ ಪರಿಶೀಲನೆಗೆ ಬಾಂಗ್ಲಾದೇಶ ಸರ್ಕಾರ ರಚಿಸಿರುವ ಪರಿಶೀಲನಾ ಸಮಿತಿಯು, ತನಿಖಾ ಸಂಸ್ಥೆಯ ನೆರವು ಪಡೆಯಲು ಶಿಫಾರಸು ಮಾಡಿದೆ.

ಬಾಂಗ್ಲಾದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರು, 2009ರಿಂದ 2024ರ ನಡುವೆ ವಿದ್ಯುತ್ ಉತ್ಪಾದನೆ ಕುರಿತು ಮಾಡಿಕೊಂಡಿರುವ ಒಪ್ಪಂದಗಳನ್ನು ಪರಿಶೀಲಿಸಲು ಕಾನೂನು ಮತ್ತು ತನಿಖಾ ಸಂಸ್ಥೆಯನ್ನು ನೇಮಿಸುವಂತೆ ವಿದ್ಯುತ್, ಇಂಧನ ಮತ್ತು ಖನಿಜ ಸಂಪನ್ಮೂಲಗಳ ಸಚಿವಾಲಯದ ರಾಷ್ಟ್ರೀಯ ಪರಿಶೀಲನಾ ಸಮಿತಿ ತಿಳಿಸಿದೆ.

ಅದಾನಿ ಪವರ್ ಲಿಮಿಟೆಡ್‌ನ ಅಂಗಸಂಸ್ಥೆಯಾದ ಅದಾನಿ (ಗೊಡ್ಡ) ಬಿಐಎಫ್‌ಪಿಸಿಎಲ್‌ನ 1,234.4 ಮೆಗಾವಾಟ್ ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ಸ್ಥಾವರ, ಚೀನಾ ಕಂಪನಿಯ 1,320 ಮೆಗಾವಾಟ್ ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ಸ್ಥಾವರ ಸೇರಿ ಏಳು ಪ್ರಮುಖ ಇಂಧನ ಮತ್ತು ವಿದ್ಯುತ್ ಯೋಜನೆಗಳನ್ನು ಸಮಿತಿಯು ಪರಿಶೀಲಿಸುತ್ತಿದೆ. ಉಳಿದ ಐದು ಯೋಜನೆಗಳು ಬಾಂಗ್ಲಾದೇಶದ ವ್ಯಾಪಾರಿ ಗುಂಪುಗಳಿಗೆ ಸಂಬಂಧಿಸಿದ್ದಾಗಿವೆ ಎಂದು ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಮುಹಮ್ಮದ್ ಯೂನುಸ್ ಅವರ ಕಚೇರಿಯ ಪ್ರಕಟಣೆ ತಿಳಿಸಿದೆ.

ಆಕ್ಷೇಪಣೆಗಳಿಗೆ ಅವಕಾಶ ನೀಡದ ಸಿಒಪಿ29: ಅಸಮಾಧಾನ

'ಹವಾಮಾನ ಹಣಕಾಸು ಪ್ಯಾಕೇಜ್' ತಿರಸ್ಕರಿಸಿದ ಭಾರತ

ಬಾಕು (ಅಜರ್‌ಬೈಜಾನ್) (ಪಿಟಿಐ): ಭೂಗೋಳದ ದಕ್ಷಿಣದಲ್ಲಿರುವ ದೇಶಗಳಿಗಾಗಿ ವಿಶ್ವಸಂಸ್ಥೆಯ ಹವಾಮಾನ ಸಮಾವೇಶವು ಘೋಷಿಸಿರುವ ವಾರ್ಷಿಕ ಅಂದಾಜು ₹25 ಲಕ್ಷ ಕೋಟಿ (300 ಶತಕೋಟಿ ಡಾಲರ್) ಮೊತ್ತದ 'ಹವಾಮಾನ ಹಣಕಾಸು ಪ್ಯಾಕೇಜ್' ಅನ್ನು ಭಾರತ ಸಾರಾಸಗಟಾಗಿ ತಿರಸ್ಕರಿಸಿದೆ.

'ಬಡ ದೇಶಗಳಿಗೆ ಅತ್ಯಲ್ಪ ಮೊತ್ತದ ಪ್ಯಾಕೇಜ್ ನೀಡಲಾಗಿದೆ. ಈ ಕುರಿತು ಆಕ್ಷೇಪ ವ್ಯಕ್ತಪಡಿಸಲು ಅವಕಾಶ ನೀಡದಯೇ, ಹವಾಮಾನ ಸಮಾವೇಶದ (ಸಿಒಪಿ29) ಅಧ್ಯಕ್ಷ ವಹಿಸಿರುವ ರಾಷ್ಟ್ರ ಹಾಗೂ ವಿಶ್ವಸಂಸ್ಥೆ ಈ ಪ್ಯಾಕೇಜ್ ಘೋಷಿಸಿವೆ' ಎಂದು ಭಾರತ ಹೇಳಿದೆ.

> ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ತಮ್ಮ ಜವಾಬ್ದಾರಿ ನಿಭಾಯಿಸಲು ಆಸಕ್ತಿ ಹೊಂದಿಲ್ಲ ಎಂಬುದನ್ನು ಈ ಪ್ಯಾಕೇಜ್ ತೋರಿಸಿದೆ
>
> **ಚಾಂದಿನಿ ರೈನಾ** ಭಾರತದ ಆರ್ಥಿಕ ವ್ಯವಹಾರಗಳ ಇಲಾಖೆ ಸಲಹೆಗಾರ್ತಿ

ಹವಾಮಾನ ಸಮಾವೇಶದ ಅಂಗವಾಗಿ ನಡೆದ ಸಭೆಯಲ್ಲಿ, ಭಾರತದ ಆರ್ಥಿಕ ವ್ಯವಹಾರಗಳ ಇಲಾಖೆ ಸಲಹೆಗಾರ್ತಿ ಚಾಂದಿನಿ ರೈನಾ ಅವರು ಈ ಮಾತು ಹೇಳಿದ್ದಾರೆ.

'ಈ ಪ್ಯಾಕೇಜ್ ಅನ್ಯಾಯದಿಂದ ಕೂಡಿದೆ ಹಾಗೂ ತಮಗೆ ಅನುಕೂಲ ಆಗುವಂತೆ ರೂಪಿಸಲಾಗಿದೆ. ಪ್ಯಾಕೇಜ್ ಅಂಗೀಕರಿಸುವುದಕ್ಕೂ ಮೊದಲು ಈ ವಿಷಯವಾಗಿ ಮಾತನಾಡಬೇಕೆಂಬ ಭಾರತದ ಮನವಿಯನ್ನು ನಿರ್ಲಕ್ಷಿಸಲಾಗಿದೆ. ಈ ಘಟನೆಯಿಂದ ತೀವ್ರ ನಿರಾಸೆಯಾಗಿದೆ' ಎಂದು ಹೇಳಿದ್ದಾರೆ.

ಭಾರತದ ವಾದವನ್ನು ಬೆಂಬಲಿಸಿ ಮಾತನಾಡಿದ ನೈಜೀರಿಯಾ ಪ್ರತಿನಿಧಿ, '300 ಶತಕೋಟಿ ಡಾಲರ್ ಪ್ಯಾಕೇಜ್ ಘೋಷಿಸಿರುವುದು ತಮಾಷೆಯೇ ಸರಿ' ಎಂದಿದ್ದಾರೆ. ಮಲಾವಿ ಮತ್ತು ಬೊಲಿವಿಯಾ ದೇಶಗಳು ಕೂಡ ಈ ವಿಚಾರದಲ್ಲಿ ಭಾರತವನ್ನು ಬೆಂಬಲಿಸಿವೆ.

ಹವಾಮಾನ ಬದಲಾವಣೆಯಿಂದಾಗುವ ಪರಿಣಾಮಗಳನ್ನು ಎದುರಿಸುವುದಕ್ಕಾಗಿ 1.3 ಟ್ರಿಲಿಯನ್ ಡಾಲರ್ (₹109 ಲಕ್ಷ ಕೋಟಿ) ನೀಡಬೇಕು ಎಂಬುದು ಭೌಗೋಳಿಕವಾಗಿ ದಕ್ಷಿಣದಲ್ಲಿರುವ ರಾಷ್ಟ್ರಗಳ ಬೇಡಿಕೆಯಾಗಿದೆ.

ಉತ್ತರ ಪ್ರದೇಶ: ಮಸೀದಿ ಸಮೀಕ್ಷೆ ವಿರೋಧಿಸಿ ಪ್ರತಿಭಟನೆ, ಭದ್ರತಾ ಸಿಬ್ಬಂದಿ ಜೊತೆ ಘರ್ಷಣೆ • 20 ಪೊಲೀಸರಿಗೆ ಗಾಯ

ಸಂಭಲ್‌ನಲ್ಲಿ ಹಿಂಸಾಚಾರ, ಮೂವರ ಸಾವು

ಸಂಭಲ್ (ಉತ್ತರ ಪ್ರದೇಶ) (ಪಿಟಿಐ): ನಗರದ ಶಾಹಿ ಜಾಮಾ ಮಸೀದಿಯ ಸಮೀಕ್ಷೆ ವಿರೋಧಿಸಿ ಪ್ರತಿಭಟನೆ ನಡೆಸುತ್ತಿದ್ದವರು ಭದ್ರತಾ ಸಿಬ್ಬಂದಿ ಜೊತೆ ಘರ್ಷಣೆಗಿಳಿದಿದ್ದರಿಂದ ಭುಗಿಲೆದ್ದ ಹಿಂಸಾಚಾರದಲ್ಲಿ ಮೂವರು ಮೃತಪಟ್ಟಿದ್ದಾರೆ.

ಪ್ರತಿಭಟನಕಾರರು ಪೊಲೀಸರತ್ತ ಕಲ್ಲುತೂರಾಟ ನಡೆಸಿದ್ದಲ್ಲದೇ, ವಾಹನಗಳಿಗೆ ಬೆಂಕಿ ಹಚ್ಚಲು ಯತ್ನಿಸಿದ್ದಾರೆ. ಕೆಲ ಕಿಡಿಗೇಡಿಗಳು ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಬೈಕುಗಳಿಗೆ ಬೆಂಕಿ ಹಚ್ಚಿದ್ದಾರೆ. ಉದ್ರಿಕ್ತರ ಗುಂಪನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿ, ಅಶ್ರುವಾಯು ಷೆಲ್‌ಗಳನ್ನು ಸಿಡಿಸಿದ್ದಾರೆ.

'ಘರ್ಷಣೆ ವೇಳೆ ಮೃತಪಟ್ಟವರನ್ನು ನಯೀಮ್, ಬಿಲಾಲ್ ಹಾಗೂ ನೌಮಾನ್ ಎಂದು ಗುರುತಿಸಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗನ್‌ಮ್ಯಾನ್ ಸೇರಿದಂತೆ 20 ಪೊಲೀಸರು ಗಾಯಗೊಂಡಿದ್ದಾರೆ' ಎಂದು ಮೊರಾದಾಬಾದ್ ವಿಭಾಗೀಯ ಆಯುಕ್ತ ಆಂಜನೇಯ ಕುಮಾರ್ ಸಿಂಗ್ ಹೇಳಿದ್ದಾರೆ.

ಘಟನೆ ಸಂಬಂಧ, ಇಬ್ಬರು ಮಹಿಳೆಯರು ಸೇರಿ 10 ಜನರನ್ನು ವಶಕ್ಕೆ ಪಡೆಯಲಾಗಿದ್ದು, ಅವರನ್ನು ವಿಚಾರಣೆಗೆ ಒಳಪಡಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ರಾಜೇಂದ್ರ ಪೆಸಿಯಾ ತಿಳಿಸಿದ್ದಾರೆ.

'ಹಿಂಸಾಚಾರದಲ್ಲಿ ತೊಡಗಿದ್ದ ಆರೋಪಿಗಳ ವಿರುದ್ಧ ರಾಷ್ಟ್ರೀಯ ಭದ್ರತಾ ಕಾಯ್ದೆ(ಎನ್‌ಎಸ್‌ಎ) ಅಡಿ ಪ್ರಕರಣ ದಾಖಲಿಸಲಾಗುವುದು. ನಗರದ ದೀಪಾ ಸರಾಯ್ ಪ್ರದೇಶದಲ್ಲಿ ದುಷ್ಕರ್ಮಿಗಳು ಗುಂಡು ಹಾರಿಸಿದ್ದಾರೆ. ಈ ಬಗ್ಗೆ ತನಿಖೆ ಕೈಗೊಂಡಿದ್ದೇವೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಾಮಾ ಮಸೀದಿಯಿದ್ದ ಜಾಗದಲ್ಲಿ ಪುರಾತನ ಹಿಂದೂ ದೇವಾಲಯವಿತ್ತು, ಮೊಘಲ್ ದೊರೆ ಬಾಬರ್ ಆಳ್ವಿಕೆ ಅವಧಿಯಲ್ಲಿ ದೇಗುಲ ಕೆಡವಿ ಮಸೀದಿ ಕಟ್ಟಲಾಗಿದೆ. ದೇಗುಲಕ್ಕೆ ಸೇರಿದ ಅನೇಕ ಗುರುತುಗಳೂ ಅಲ್ಲಿವೆ ಎಂದು ಸುಪ್ರೀಂ ಕೋರ್ಟ್ ವಕೀಲ ವಿಷ್ಣು ಶಂಕರ್ ಜೈನ್ ಅವರು ಸ್ಥಳೀಯ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ವಿಚಾರಣೆ ನಡೆಸಿದ ಕೋರ್ಟ್, ವಿಡಿಯೊ ಚಿತ್ರೀಕರಣ ಮತ್ತು ಛಾಯಾಗ್ರಹಣ ಸಮೇತ ಸಮೀಕ್ಷೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶಿಸಿದೆ.

ನ್ಯಾಯಾಲಯದ ಆದೇಶದಂತೆ ಕೈಗೊಂಡಿರುವ ಸಮೀಕ್ಷೆ ವಿರೋಧಿಸಿ ಮಂಗಳವಾರದಿಂದ ಭಾರಿ ಪ್ರತಿಭಟನೆಗಳು ನಡೆಯುತ್ತಿವೆ.

ಘರ್ಷಣೆ ಆರಂಭವಾಗಿದ್ದು ಹೇಗೆ: ಭಾನುವಾರ ಬೆಳಿಗ್ಗೆ, ಮಸೀದಿ ಬಳಿ ಭಾರಿ ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದರು. ಮಸೀದಿ ಸಮೀಕ್ಷೆ ನಡೆಸುವ ತಂಡವು ತನ್ನ ಕಾರ್ಯ ಆರಂಭಿಸುತ್ತಿದ್ದಂತೆಯೇ ಅಲ್ಲಿ ಜಮಾಯಿಸಿದ್ದ ಜನರು ಘೋಷಣೆಗಳನ್ನು ಕೂಗಲು ಆರಂಭಿಸಿದರು. ನಂತರ ಅದು ಘರ್ಷಣೆಗೆ ತಿರುಗಿತು.

ಮಧ್ಯಾಹ್ನ ನಡೆಯುವ ಪ್ರಾರ್ಥನೆಗೆ ಅಡ್ಡಿಯಾಗಬಾರದು ಎಂಬ ಕಾರಣಕ್ಕೆ ಬೆಳಿಗ್ಗೆ ಸಮೀಕ್ಷೆ ನಡೆಸಲು ಯೋಜಿಸಿದ್ದೆವು. ಕೋರ್ಟ್ ಆದೇಶದಂತೆ ನೇಮಕವಾಗಿರುವ, 'ಅಡ್ವೊಕೇಟ್ ಕಮಿಷನರ್' ಅವರಿಂದ ಮಸೀದಿಯ 2ನೇ ಹಂತದ ಸಮೀಕ್ಷೆಗೆ ಬೆಳಿಗ್ಗೆ 7ರ ಸುಮಾರಿಗೆ ಚಾಲನೆ ನೀಡಲಾಯಿತು ಎಂದು ಅಧಿಕಾರಿಗಳು ಹೇಳಿದ್ದಾರೆ.

'ಸಮೀಕ್ಷೆಯು ಶಾಂತಿಯುತವಾಗಿಯೇ ನಡೆಯುತ್ತಿತ್ತು. ಮಸೀದಿ ಸಮೀಪ ಜಮಾಯಿಸಿದ್ದ ಜನರು ಘೋಷಣೆಗಳನ್ನು ಕೂಗಲು ಆರಂಭಿಸಿದರು. ಅವರನ್ನು ಚದುರಿಸಲು ಪೊಲೀಸರು ಮುಂದಾದಾಗ, ದುಷ್ಕರ್ಮಿಗಳ ಗುಂಪೊಂದು ಪೊಲೀಸರತ್ತ ಕಲ್ಲುಗಳನ್ನು ತೂರಲು ಆರಂಭಿಸಿತು. ನಂತರ ಘರ್ಷಣೆ ಹಿಂಸಾರೂಪ ಪಡೆಯಿತು' ಎಂದು ಮೊರಾದಾಬಾದ್ ವಿಭಾಗೀಯ ಆಯುಕ್ತ ಆಂಜನೇಯ ಸಿಂಗ್ ಹೇಳಿದ್ದಾರೆ.

'ಪಟ್ಟಭದ್ರ ಹಿತಾಸಕ್ತಿಯುಳ್ಳ ಕೆಲವರು ಶಾಂತಿ ಕದಡುವ ಉದ್ದೇಶದಿಂದ ಹಿಂಸಾಚಾರಕ್ಕೆ ಪ್ರಚೋದನೆ ಕೊಟ್ಟಿದ್ದಾರೆ' ಎಂದು ಹೇಳಿದ್ದಾರೆ.

'ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಪೊಲೀಸರು ಅಶ್ರುವಾಯು ಷೆಲ್ ಹಾಗೂ ಲಾಠಿ ಪ್ರಹಾರದಂತಹ ಕ್ರಮ ಕೈಗೊಂಡಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೃಷ್ಣಕುಮಾರ್ ವಿಷ್ಣೋಯಿ ತಿಳಿಸಿದ್ದಾರೆ.

ಕೇಂದ್ರ ಹಾಗೂ ಉತ್ತರ ಪ್ರದೇಶ ಸರ್ಕಾರ, ಮಸೀದಿ ಸಮಿತಿ ಹಾಗೂ ಜಿಲ್ಲಾಧಿಕಾರಿಯನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.




ಉತ್ತರ ಪ್ರದೇಶದ ಸಂಭಲ್ ನಗರದಲ್ಲಿ ಹಿಂದೂ ದೇವಸ್ಥಾನದ ಮೇಲೆ ನಿರ್ಮಿಸಲಾಗಿದೆ ಎಂದು ಹೇಳಲಾಗುವ ಶಾಹಿ ಜಾಮಾ ಮಸೀದಿಯ ಸಮೀಕ್ಷೆ ವೇಳೆ ಭಾನುವಾರ ಭುಗಿಲೆದ್ದ ಹಿಂಸಾಚಾರ ವೇಳೆ ದುಷ್ಕರ್ಮಿಗಳು ವಾಹನಗಳಿಗೆ ಬೆಂಕಿ ಹಚ್ಚಿದ್ದರು (ಎಡಚಿತ್ರ) ಪರಿಸ್ಥಿತಿ ನಿಯಂತ್ರಣಕ್ಕೆ ಪೊಲೀಸರು ಹರಸಾಹಸ ಪಟ್ಟರು – ಪಿಟಿಐ ಚಿತ್ರ

ಸಮಾಜಘಾತುಕ ಶಕ್ತಿಗಳನ್ನು ಗುರುತಿಸಿ, ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಜಿಲ್ಲಾ ಆಡಳಿತದ ಅಧಿಕಾರಿಗಳು ಪರಿಸ್ಥಿತಿ ಮೇಲೆ ನಿಗಾ ಇಟ್ಟಿದ್ದಾರೆ

ಪ್ರಶಾಂತಕುಮಾರ್, ಪೊಲೀಸ್ ಮುಖ್ಯಸ್ಥ, ಉತ್ತರ ಪ್ರದೇಶ

ಇದು ರಾಜ್ಯ ಸರ್ಕಾರದ ಪೂರ್ವನಿಯೋಜಿತ ಕೃತ್ಯ. ಚುನಾವಣೆಯಲ್ಲಿನ ಅಕ್ರಮಗಳಿಂದ ಜನರ ಗಮನ ಬೇರೆಡೆ ಸೆಳೆಯಲು ಹೀಗೆ ಮಾಡಲಾಗಿದೆ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಅಧ್ಯಕ್ಷ

ಜ.11–12ರಂದು 'ವಿಕಸಿತ ಭಾರತ ಯುವ ನಾಯಕರ ಸಂವಾದ'

ಪ್ರಜಾವಾಣಿ ವಾರ್ತೆ/ ಪಿಟಿಐ



ನರೇಂದ್ರ ಮೋದಿ

ನವದೆಹಲಿ: ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದ ಯುವಕರನ್ನು ರಾಜಕೀಯಕ್ಕೆ ತರುವ ಪ್ರಯತ್ನವಾಗಿ 'ವಿಕಸಿತ ಭಾರತ ಯುವ ನಾಯಕರ ಸಂವಾದ'ವನ್ನು ದೆಹಲಿಯಲ್ಲಿ ಜ.11–12ರಂದು ಹಮ್ಮಿಕೊಳ್ಳಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ತಿಳಿಸಿದ್ದಾರೆ.

ತಮ್ಮ ಮಾಸಿಕ 'ಮನದ ಮಾತು' ಬಾನುಲಿ ಕಾರ್ಯಕ್ರಮದ 116ನೇ ಸಂಚಿಕೆಯಲ್ಲಿ ಈ ವಿಷಯ ತಿಳಿಸಿದ ಅವರು, 'ಆಯ್ದ ಎರಡು ಸಾವಿರ ಯುವಕರನ್ನು ಗ್ರಾಮಗಳು, ಜಿಲ್ಲೆಗಳು ಮತ್ತು ರಾಜ್ಯಗಳಿಂದ ಆಯ್ಕೆ ಮಾಡಿಕೊಳ್ಳಲಾಗಿದ್ದು, ದೆಹಲಿಯ ಭಾರತ ಮಂಟಪದಲ್ಲಿ ನಡೆಯುವ ಸಂವಾದದಲ್ಲಿ ಭಾಗವಹಿಸಲಿದ್ದಾರೆ' ಎಂದರು.

'ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದ ಕುಟುಂಬದಿಂದ ಬಂದ ಯುವಜನರನ್ನು ರಾಜಕೀಯಕ್ಕೆ ಸೇರುವಂತೆ ಈ ಹಿಂದೆ ಕೆಂಪು ಕೋಟೆಯಿಂದ ಭಾಷಣ ಮಾಡಿದಾಗ ಒತ್ತಾಯಿಸಿದ್ದೆ. ಒಂದು ಲಕ್ಷ ಯುವಜನರನ್ನು ರಾಜಕೀಯಕ್ಕೆ ಪರಿಚಯಿಸಲು ದೇಶದಲ್ಲಿ ಹಲವು ವಿಶೇಷ ಅಭಿಯಾನಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಅವರು ಹೇಳಿದರು.

ಮೈಸೂರಿನ 'ಅರ್ಲಿ ಬರ್ಡ್'ಗೆ ಮೆಚ್ಚುಗೆ

ಮೈಸೂರು: ಪ್ರಧಾನಿ ನರೇಂದ್ರ ಮೋದಿ ಅವರು 'ಮನದ ಮಾತು' ಕಾರ್ಯಕ್ರಮದಲ್ಲಿ, ಮಕ್ಕಳಿಗೆ ಪ್ರಕೃತಿ ಶಿಕ್ಷಣ ನೀಡುತ್ತಿರುವ ಇಲ್ಲಿನ 'ಅರ್ಲಿ ಬರ್ಡ್' ಸಂಸ್ಥೆಯ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಈ ಸಂಸ್ಥೆಯು ಮಕ್ಕಳಿಗೆ ಪಕ್ಷಿ, ನಿಸರ್ಗದ ಮಹತ್ವ ತಿಳಿಸುತ್ತಿದೆ. ನಗರದ ಮಕ್ಕಳನ್ನು ಹಳ್ಳಿಗಳಿಗೆ ಕರೆದೊಯ್ದು ಪಕ್ಷಿ ಸಂಕುಲವನ್ನು ಪರಿಚಯಿಸುವ ಜೊತೆಗೆ, ಅವುಗಳಿಂದ ಆಗುವ ಪ್ರಯೋಜನಗಳ ಬಗ್ಗೆಯೂ ತಿಳಿಸುತ್ತಿದೆ. ಅವರನ್ನು ಉತ್ತಮ ನಾಗರಿಕರನ್ನಾಗಿಸಲು ಕೊಡುಗೆ ನೀಡುತ್ತಿದೆ. ವಿಶೇಷ ಗ್ರಂಥಾಲಯ ಹಾಗೂ ಸ್ಟೋರಿ ಬುಕ್‌ಗಳನ್ನು ಹೊಂದಿದೆ. ಶಿಕ್ಷಣ ತಜ್ಞರು ಮತ್ತು ಹವ್ಯಾಸಿ ಪಕ್ಷಿವೀಕ್ಷಕರಿಗೆ ತರಬೇತಿ ನೀಡುತ್ತಿದೆ' ಎಂದು ಶ್ಲಾಘಿಸಿದ್ದಾರೆ.

'ಸಂಸ್ಥೆಯು ಪ್ರಕೃತಿ ಶಿಕ್ಷಣದ ಕಿಟ್ ಸಿದ್ಧಪಡಿಸಿದೆ. ಇಂತಹ ಪ್ರಯತ್ನಗಳನ್ನು ನಾವೂ ಮಕ್ಕಳ ಕಲಿಕೆಗಾಗಿ ಮಾಡಬೇಕು ಎಂದರು.

ಸೊರೇನ್ 28ಕ್ಕೆ ಪ್ರಮಾಣ

ಪ್ರಜಾವಾಣಿ ವಾರ್ತೆ



ಹೇಮಂತ್ ಸೊರೇನ್

ಪಟ್ನಾ: ಜಾರ್ಖಂಡ್‌ನಲ್ಲಿ 'ಇಂಡಿಯಾ' ಮೈತ್ರಿಕೂಟವನ್ನು ಗೆಲುವಿನ ದಡ ಮುಟ್ಟಿಸಿರುವ ಜೆಎಂಎಂ ಕಾರ್ಯಾಧ್ಯಕ್ಷ ಹೇಮಂತ್ ಸೊರೇನ್ ಅವರು ನ. 28ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಪ್ರಸ್ತುತ ಉಸ್ತುವಾರಿ ಮುಖ್ಯಮಂತ್ರಿ ಆಗಿರುವ ಸೊರೇನ್ ಅವರಿಗೆ ನೂತನ ಸರ್ಕಾರ ರಚಿಸಲು ರಾಜ್ಯಪಾಲರಾದ ಸಂತೋಷ್ ಗಂಗ್ವಾರ್ ಅವರು ಆಹ್ವಾನಿಸಿದರು.

ಇದಕ್ಕೂ ಮೊದಲು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದ ಹೇಮಂತ್ ಅವರಿಗೆ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರುವವರೆಗೆ ಉಸ್ತುವಾರಿ ಮುಖ್ಯಮಂತ್ರಿಯಾಗಿ ಮುಂದುವರಿಯಲು ರಾಜ್ಯಪಾಲರು ಸೂಚಿಸಿದರು.

ಈ ಮಧ್ಯೆ, ಕಾಂಗ್ರೆಸ್ ಪಕ್ಷದ ಒಂದು ವರ್ಗ ರಾಜ್ಯದಲ್ಲಿ ಉಪ ಮುಖ್ಯಮಂತ್ರಿ ಸ್ಥಾನವನ್ನು ಸೃಷ್ಟಿಸಬೇಕು ಎಂದು ಒತ್ತಾಯಿಸಿದೆ. ಈ ಬೇಡಿಕೆಗೆ ಹೇಮಂತ್ ಸೊರೇನ್ ಸದ್ಯ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಮಹಾರಾಷ್ಟ್ರ: ಇಂದು ಮುಖ್ಯಮಂತ್ರಿ ಆಯ್ಕೆ ಸಾಧ್ಯತೆ

ದೇವೇಂದ್ರ ಫಡಣವೀಸ್‌ಗೆ ಆರ್‌ಎಸ್‌ಎಸ್ ಬೆಂಬಲ • ಹಾಲಿ ಸೂತ್ರ ಮುಂದುವರಿಸಲು ಶಿಂದೆ ಬೆಂಬಲಿಗರ ಒತ್ತಾಯ

ಪ್ರಜಾವಾಣಿ ವಾರ್ತೆ/ಪಿಟಿಐ



ದೇವೇಂದ್ರ ಫಡಣವೀಸ್

ಮುಂಬೈ: 'ಮಹಾಯುತಿ' ಮೈತ್ರಿಕೂಟ ಮಹಾರಾಷ್ಟ್ರದಲ್ಲಿ ಪ್ರಚಂಡ ಬಹುಮತ ಪಡೆದ ಹಿಂದೆಯೇ, ಮುಂಬೈನಲ್ಲಿ ತೀವ್ರ ರಾಜಕೀಯ ಚಟುವಟಿಕೆ ನಡೆದಿದೆ. ಸಿ.ಎಂ ಆಯ್ಕೆಗೆ ತೀವ್ರ ಚರ್ಚೆ ಆರಂಭವಾಗಿದ್ದು, ಸೋಮವಾರ ಅಭ್ಯರ್ಥಿ ಹೆಸರು ಘೋಷಣೆಯಾಗುವ ಸಾಧ್ಯತೆಗಳಿವೆ.

ಮಾಜಿ ಸಿ.ಎಂ ದೇವೇಂದ್ರ ಫಡಣವೀಸ್ ಅವರನ್ನು ಆರ್‌ಎಸ್‌ಎಸ್ ಬೆಂಬಲಿಸಿದೆ. ಬಿಜೆಪಿ ಅಧಿಕ ಸ್ಥಾನ ಗೆದ್ದರೂ, ಮಿತ್ರಪಕ್ಷಗಳ ಮುಖಂಡರಾದ ಏಕನಾಥ ಶಿಂದೆ, ಅಜಿತ್ ಪವಾರ್ ಅವರು ಲೆಕ್ಕಾಚಾರ ನಡೆಸಿದ್ದಾರೆ.

'ಹಾಲಿ ಇರುವ ಅಧಿಕಾರ ಹಂಚಿಕೆಯ ಸೂತ್ರವನ್ನೇ ಮುಂದುವರಿಸಬೇಕು' ಎಂದು ಶಿಂದೆ ಬೆಂಬಲಿಗರು ಒತ್ತಾಯಿಸಿದ್ದರೆ, 'ಸೂತ್ರ ಬದಲಾದರೆ ತಪ್ಪಿಲ್ಲ' ಎಂದು ಅಜಿತ್ ಪವಾರ್ ಬೆಂಬಲಿಗರು ಪ್ರತಿಕ್ರಿಯಿಸಿದ್ದಾರೆ.

ಸಿ.ಎಂ ಸ್ಥಾನದ ಅಭ್ಯರ್ಥಿಯ ಆಯ್ಕೆ ಪ್ರಶ್ನೆ ಈಗ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ಮುಂದಿದೆ. ಮಿತ್ರಪಕ್ಷಗಳಿಗೆ ನೀಡಬೇಕಾದ ಆದ್ಯತೆ, ಜಾತಿ ಸಮೀಕರಣ ಹಾಗೂ ಇತರೆ ಅಂಶಗಳನ್ನೂ ಆಧರಿಸಿ ವರಿಷ್ಠರು ಅಂತಿಮ ತೀರ್ಮಾನ ಕೈಗೊಳ್ಳುವರು ಎಂದು ಹೇಳಲಾಗಿದೆ.

ಆರ್‌ಎಸ್‌ಎಸ್‌ಗೆ ನಿಕಟವಾಗಿರುವ ದೇವೇಂದ್ರ ಫಡಣವೀಸ್ ಅವರು ನವದೆಹಲಿಗೆ ತೆರಳಿ ಪಕ್ಷದ ವರಿಷ್ಠರ ಭೇಟಿ ಮಾಡುವ ಸಂಭವವಿದೆ.

ಬಿಜೆಪಿಯ ಹಿರಿಯ ಮುಖಂಡರೊಬ್ಬರ ಪ್ರಕಾರ, ಹೆಚ್ಚಿನ ನಾಯಕರು ದೇವೇಂದ್ರ ಫಡಣವೀಸ್ ಅವರನ್ನೇ ಮುಖ್ಯಮಂತ್ರಿ ಸ್ಥಾನಕ್ಕೆ ಪರಿಗಣಿಸಬೇಕು ಎಂದು ಒಲವು ವ್ಯಕ್ತಪಡಿಸಿದ್ದಾರೆ.

ಮೈತ್ರಿ ಸಂಕೀರ್ಣತೆಯಿಂದಾಗಿ ಹೊಸ ಸರ್ಕಾರದಲ್ಲೂ ಇಬ್ಬರು ಡಿ.ಸಿ.ಎಂ ಇರಬಹುದು. ಸಂಪುಟದ ಗಾತ್ರ 43 ಇರಲಿದ್ದು, ಸಚಿವರ ಆಯ್ಕೆಗೆ ಎಚ್ಚರಿಕೆಯ ನಡೆ ಇಡಬೇಕಿದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯ ಬಿಜೆಪಿ ಅಧ್ಯಕ್ಷ ಚಂದ್ರಶೇಖರ ಬವಂಕುಲೆ ಅವರು, 'ಮೈತ್ರಿಕೂಟದ ಯೋಜನೆಯಂತೆಯೇ ಸಿ.ಎಂ ಆಯ್ಕೆ ನಡೆಯಲಿದೆ. ಮಹಾಯುತಿ, ಬಿಜೆಪಿ ನಾಯಕರು ತೀರ್ಮಾನಿಸುವರು' ಎಂದು ಪ್ರತಿಕ್ರಿಯಿಸಿದರು.

ಶಾಸಕಾಂಗ ಪಕ್ಷದ ನಾಯಕರಾಗಿ ಶಿಂದೆ ಆಯ್ಕೆ

ಮುಂಬೈ (ಪಿಟಿಐ): ಶಿವಸೇನೆಯ (ಶಿಂದೆ ಬಣ) ಶಾಸಕಾಂಗ ಪಕ್ಷದ ನಾಯಕರಾಗಿ ಮುಖ್ಯಮಂತ್ರಿ ಏಕನಾಥ ಶಿಂದೆ ಭಾನುವಾರ ಇಲ್ಲಿ ಆಯ್ಕೆಯಾದರು. ಖಾಸಗಿ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ಶಾಸಕರಾಗಿ ಆಯ್ಕೆಯಾದ ಪಕ್ಷದ ಎಲ್ಲ 57 ಸದಸ್ಯರು ಇದ್ದರು.

'ಮುಖ್ಯ ಸಚೇತಕ, ಇತರ ಪದಾಧಿಕಾರಿಗಳನ್ನು ನೇಮಿಸುವ ಅಧಿಕಾರವನ್ನು ಶಿಂದೆ ಅವರಿಗೆ ನೀಡಲಾಗಿದೆ' ಎಂದು ಪಕ್ಷದ ನಾಯಕ ದೀಪಕ್ ಕೇಸರ್‌ಕರ್ ಹೇಳಿದ್ದು, 'ಹೊಸ ಸಿ.ಎಂ ಆಯ್ಕೆ ಕುರಿತಂತೆ ಮಿತ್ರ ಪಕ್ಷಗಳಲ್ಲಿ ಯಾವುದೇ ವಿವಾದ ಇಲ್ಲ' ಎಂದರು.

'ಲಡ್ಕಿ ಬಹೀಣ್', ಧರ್ಮ ಆಧಾರದಲ್ಲಿ ಧ್ರುವೀಕರಣ ಕಾರಣ'



ಶರದ್ ಪವಾರ್

ಕರಾಡ್ (ಮಹಾರಾಷ್ಟ್ರ) (ಪಿಟಿಐ): 'ಲಡ್ಕಿ ಬಹೀಣ್ ಯೋಜನೆ, ಅತ್ಯಧಿಕ ಮಹಿಳೆಯರಿಂದ ಮತದಾನ, ಧರ್ಮದ ಆಧಾರದಲ್ಲಿ ಮತಗಳ ಧ್ರುವೀಕರಣ ಮಹಾ ಯುತಿ ಗೆಲುವಿಗೆ ಕಾರಣ' ಎಂದು ಎನ್‌ಸಿಪಿ–ಎಸ್‌ಪಿ ಮುಖ್ಯಸ್ಥ ಶರದ್ ಪವಾರ್ ಅವರು ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯ ಫಲಿತಾಂಶವನ್ನು ವಿಶ್ಲೇಷಿಸಿದ್ದಾರೆ.

'ಫಲಿತಾಂಶವು ನಿರೀಕ್ಷೆಯಂತೆ ಇಲ್ಲ. ಪಕ್ಷದ ಹಿನ್ನಡೆಗೆ ಕಾರಣಗಳನ್ನು ಅಧ್ಯಯನ ಮಾಡಲಿದ್ದು, ಪಕ್ಷದ ಪುನಶ್ಚೇತನಕ್ಕೆ ಅಗತ್ಯ ಕ್ರಮವಹಿಸುತ್ತೇವೆ' ಎಂದು ಹೇಳಿದರು.

ಸತಾರಾ ಜಿಲ್ಲೆಯ ಕರಾಡ್ ನಗರದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಸಕ್ರಿಯ ರಾಜಕಾರಣದಿಂದ ನಿವೃತ್ತಿ ಕುರಿತ ಪ್ರಶ್ನೆಗೆ, 'ನಾನು ಮತ್ತು ಪಕ್ಷದ ಸಹೋದ್ಯೋಗಿಗಳು ಇದನ್ನು ಚರ್ಚಿಸಿ ನಿರ್ಧರಿಸುತ್ತೇವೆ' ಎಂದರು.

'ಎನ್‌ಸಿಪಿಯ ಅಜಿತ್ ಪವಾರ್ ಬಣ ಹೆಚ್ಚು ಸ್ಥಾನ ಗೆದ್ದಿದೆ ಎಂದು ಒಪ್ಪಿದರೂ, ಎನ್‌ಸಿಪಿ ಸ್ಥಾಪಿಸಿದ್ದು ಯಾರು ಎಂದು ಎಲ್ಲರಿಗೂ ಗೊತ್ತಿದೆ' ಎಂದು ಹೇಳಿದರು.

'ಈ ಚುನಾವಣೆಯಲ್ಲಿ ರಾಜ್ಯದ ಎಲ್ಲ ವರ್ಗದ ಜನರು ಕಾಂಗ್ರೆಸ್ ಪಕ್ಷ ತಿರಸ್ಕರಿಸಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಸಿ.ಎಂ ಆಗುವ ಕನಸು ಕಾಣುತ್ತಿದ್ದರು. ಕಡೆಗೆ ಅಂಚೆ ಮತಗಳಿಂದ ಗೆದ್ದರು. ಈ ಜನಾದೇಶ ಹೇಗಿದೆ ಎಂದರೆ ವಿರೋಧಪಕ್ಷದ ನಾಯಕನ ಸ್ಥಾನವು ಇಲ್ಲ. ಇದು, ಕಾಂಗ್ರೆಸ್ ಪಕ್ಷದ ಕರ್ಮ' ಎಂದರು.

ಅಜಿತ್ ಪವಾರ್ ಆಯ್ಕೆ: ಎನ್‌ಸಿಪಿಯ (ಅಜಿತ್ ಬಣ) ಶಾಸಕಾಂಗ ಪಕ್ಷದ ನಾಯಕರಾಗಿ ಪಕ್ಷದ ಅಧ್ಯಕ್ಷ ಅಜಿತ್ ಪವಾರ್ ಭಾನುವಾರ ಆಯ್ಕೆಯಾಗಿದ್ದಾರೆ

ಆಘಾಡಿಯಲ್ಲಿ ಬಿರುಕು: 'ಮಹಾಯುತಿ' ಭರ್ಜರಿ ಜಯ ದಾಖಲಿಸಿದ ಬೆನ್ನಲ್ಲೇ, 'ಮಹಾ ವಿಕಾಸ್ ಆಘಾಡಿ' (ಎಂವಿಎ) ಒಟ್ಟಾಗಿ ಇರುವ ಸಾಧ್ಯತೆಗಳು ಕ್ಷೀಣಿಸಿವೆ.

ವಿರೋಧ ಪಕ್ಷದ ಹಲವು ಶಾಸಕರು ಈಗಾಗಲೇ ಬಿಜೆಪಿ ನೇತೃತ್ವದ 'ಮಹಾಯುತಿ' ಜೊತೆಗೆ ಸಂಪರ್ಕದಲ್ಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಪವಾರ್ ನೇತೃತ್ವದ ಎನ್‌ಸಿಪಿಯ ಹಲವು ಶಾಸಕರು ನಮ್ಮ ಸಂಪರ್ಕದಲ್ಲಿದ್ದಾರೆ. ಕೆಲವು ಕಾಂಗ್ರೆಸ್, ಶಿವಸೇನಾ (ಯುಬಿಟಿ) ಶಾಸಕರು ಕೂಡ ನಮ್ಮನ್ನು ಸಂಪರ್ಕಿಸಿದ್ದಾರೆ' ಎಂದು ಎನ್‌ಸಿಪಿಯ ಅಧ್ಯಕ್ಷ ಅಜಿತ್ ಪವಾರ್ ಅವರ ಆಪ್ತ ಅನಿಲ್ ಪಾಟೀಲ್ ತಿಳಿಸಿದರು.

ಚುನಾವಣೆಯಲ್ಲಿ ಮಹಾಯುತಿ ಮೈತ್ರಿಕೂಟ ಒಟ್ಟು 230 ಸ್ಥಾನ (ಬಿಜೆಪಿ 132, ಶಿವಸೇನೆ (ಶಿಂದೆ) 57, ಎನ್‌ಸಿಪಿ–ಅಜಿತ್ ಬಣ 41) ಸ್ಥಾನ ಗೆದ್ದುಕೊಂಡಿದೆ.

ಮಹಾವಿಕಾಸ ಅಘಾಡಿ ಮೈತ್ರಿಕೂಟವು ಒಟ್ಟು 48 ಶಿವಸೇನೆ (ಉದ್ಧವ್ ಬಣ) -20, ಕಾಂಗ್ರೆಸ್ 16, ಎನ್‌ಸಿಪಿ (ಶರದ್ ಬಣ) 10,ಎಸ್‌ಪಿ 2) ಸ್ಥಾನ ಗೆದ್ದಿದೆ. ಪಕ್ಷೇತರರು ಇತರ 10 ಕ್ಷೇತ್ರಗಳಲ್ಲಿ ಆಯ್ಕೆಯಾಗಿದ್ದಾರೆ.

ದಾರಿ ತಪ್ಪಿಸಿದ ಜಿಪಿಎಸ್; ನದಿಗೆ ಕಾರು ಉರುಳಿ ಮೂವರ ಸಾವು

ಬರೇಲಿ, ಉತ್ತರ ಪ್ರದೇಶ (ಪಿಟಿಐ): ಇಲ್ಲಿನ ನಿರ್ಮಾಣ ಹಂತದಲ್ಲಿದ್ದ ಸೇತುವೆಯಿಂದ ರಾಮ್‌ಗಂಗಾ ನದಿಗೆ ಕಾರು ಉರುಳಿಬಿದ್ದು, ಮೂವರು ಮೃತಪಟ್ಟಿದ್ದಾರೆ. ಚಾಲಕ 'ಜಿಪಿಎಸ್ ನ್ಯಾವಿಗೇಷನ್' ಬಳಸಿ ಈ ರಸ್ತೆ ಮೂಲಕ ಬಂದು ಬಿದ್ದಿರುವ ಸಾಧ್ಯತೆಯಿದೆ ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಬರೇಲಿ ಜಿಲ್ಲೆಯ ಖಾಲ್‌ಪುರ್‌ನಿಂದ ಬದೌನ್ ಜಿಲ್ಲೆಯ ದತಾಗಂಜ್‌ಗೆ ಭಾನುವಾರ ಬೆಳಿಗ್ಗೆ ತೆರಳುತ್ತಿದ್ದ ವೇಳೆ ಈ ಘಟನೆ ನಡೆದಿದೆ.

'ಈ ವರ್ಷ ಸುರಿದ ಪ್ರವಾಹದಿಂದ ಸೇತುವೆಯ ಒಂದು ಭಾಗವು ಕೊಚ್ಚಿ ಹೋಗಿತ್ತು. ಆದರೆ, ಜಿಪಿಎಸ್‌ನಲ್ಲಿ ಈ ಬದಲಾವಣೆಯೂ ಪರಿಷ್ಕರಣೆಗೊಂಡಿರಲಿಲ್ಲ' ಎಂದು ಇಲ್ಲಿನ ವಲಯ ಅಧಿಕಾರಿ ಅಶುತೋಷ್ ಶಿವಂ ತಿಳಿಸಿದರು.

ನಿವೃತ್ತ ಸಿಜೆಐ ಚಂದ್ರಚೂಡ್ ವಿರುದ್ಧ ಉದ್ಧವ್ ಟೀಕೆ

ಪ್ರಜಾವಾಣಿ ವಾರ್ತೆ



ಉದ್ಧವ್ ಠಾಕ್ರೆ

ಮುಂಬೈ: ಮಹಾರಾಷ್ಟ್ರ ಚುನಾವಣೆಯಲ್ಲಿ ಶಿವಸೇನಾ(ಯುಬಿಟಿ) ಹೀನಾಯ ಸೋಲು ಅನುಭವಿಸಿದ ಬೆನ್ನಲ್ಲೇ, ಪಕ್ಷದ ನಾಯಕರಾದ ಉದ್ಧವ್ ಠಾಕ್ರೆ ಹಾಗೂ ಸಂಜಯ್ ರಾವುತ್ ಅವರು ಸುಪ್ರೀಂ ಕೋರ್ಟ್ ನಿವೃತ್ತ ಸಿಜೆಐ ಡಿ.ವೈ.ಚಂದ್ರಚೂಡ್ ವಿರುದ್ಧ ಟೀಕೆ ಮಾಡಿದ್ದಾರೆ.

ಶನಿವಾರ, ಫಲಿತಾಂಶ ವಿಶ್ಲೇಷಿಸಿದ್ದ ಉದ್ಧವ್ ಠಾಕ್ರೆ, ಶಿವಸೇನಾ ಪಕ್ಷ ಇಬ್ಭಾಗವಾದ ಕುರಿತು ನ್ಯಾಯಮೂರ್ತಿ ಚಂದ್ರಚೂಡ್ ಅವರು ತೀರ್ಪು ನೀಡದಿರುವ ಬಗ್ಗೆ ಅಸಮಾಧಾನ ಹೊರಹಾಕಿದ್ದರು.

'ಈ ವಿಚಾರದಲ್ಲಿ ಗೊಂದಲವಿದೆ. ಶಿವಸೇನಾ ಹಾಗೂ ಎನ್‌ಸಿಪಿ ಬಣಗಳ ಹೆಸರು, ಚಿಹ್ನೆ ವಿಚಾರವಾಗಿ ಎರಡು ವರ್ಷ ಕಳೆದರೂ ಸುಪ್ರೀಂ ಕೋರ್ಟ್ ತೀರ್ಪು ನೀಡಿಲ್ಲ. ಹೀಗಿದ್ದರೂ ಚುನಾವಣೆಗಳು ನಡೆದಿವೆ. ಹಾಗಾಗಿ, ಯಾರನ್ನು ನಾವು ನಂಬಬೇಕು? ನ್ಯಾಯಕ್ಕಾಗಿ ಯಾರ ಬಳಿ ಹೋಗಬೇಕು' ಎಂದು ಉದ್ಧವ್ ಹೇಳಿದ್ದರು..

ಇದೇ ವಿಚಾರವಾಗಿ, ಪಕ್ಷದ ರಾಜ್ಯಸಭಾ ಸದಸ್ಯ ಸಂಜಯ್ ರಾವುತ್ ಕೂಡ ನಿವೃತ್ತ ಸಿಜೆಐ ಚಂದ್ರಚೂಡ್ ವಿರುದ್ಧ ಭಾನುವಾರ ಟೀಕಾಪ್ರಹಾರ ನಡೆಸಿದರು.

'ಪಕ್ಷಾಂತರ ಮಾಡುವವರಲ್ಲಿ ಕಾನೂನು ಬಗ್ಗೆ ಇದ್ದ ಹೆದರಿಕೆಯನ್ನು ಚಂದ್ರಚೂಡ್ ದೂರ ಮಾಡಿದ್ದಾರೆ. ಚರಿತ್ರೆಯಲ್ಲಿ ಅವರ ಹೆಸರನ್ನು ಕಪ್ಪು ಅಕ್ಷರಗಳಲ್ಲಿ ಬರೆಯಲಾಗುತ್ತದೆ' ಎಂದು ರಾವುತ್ ಟೀಕಿಸಿದರು.

'ಪಕ್ಷಾಂತರ ಮಾಡಿದ ಶಾಸಕರ ಅನರ್ಹತೆ ಕುರಿತ ಅರ್ಜಿಗಳಿಗೆ ಸಂಬಂಧಿಸಿ ನಿರ್ಧಾರ ಕೈಗೊಳ್ಳದಿರುವ ಮೂಲಕ ಚಂದ್ರಚೂಡ್ ಅವರು ಪಕ್ಷಾಂತರಕ್ಕೆ ಮುಕ್ತ ಅವಕಾಶ ಕೊಟ್ಟಿದ್ದಾರೆ' ಎಂದು ಹೇಳಿದರು.

ದಸರಾ ಪ್ರಯುಕ್ತ ಹಮ್ಮಿಕೊಳ್ಳುವ ರ‍್ಯಾಲಿ ಹಾಗೂ ಇತ್ತೀಚಿನ ಚುನಾವಣಾ ರ‍್ಯಾಲಿಗಳಲ್ಲಿ ಕೂಡ ಉದ್ಧವ್ ಈ ವಿಚಾರವಾಗಿ ಮಾತನಾಡಿದ್ದರು.

ಪತಿ ಆತ್ಮಹತ್ಯೆ: ವಿಡಿಯೊ ಮಾಡಿದ ಪತ್ನಿ!

ಠಾಣೆ (ಪಿಟಿಐ): ಪತಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾಗತಡೆಯದೆ, ಮೊಬೈಲ್‌ನಲ್ಲಿ ವಿಡಿಯೊ ಮಾಡಿದ ಮಹಿಳೆಯೊಬ್ಬರ ವಿರುದ್ಧ ಮಹಾರಾಷ್ಟ್ರದ ಠಾಣೆ ನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಾಗ್ಲೆ ಎಸ್ಟೇಟ್ ಪ್ರದೇಶದಲ್ಲಿ ವಾಸವಾಗಿರುವ ದಂಪತಿ ಪದೇ ಪದೇ ಜಗಳವಾಡುತ್ತಿದ್ದರು. ನವೆಂಬರ್ 20ರಂದು ರಾತ್ರಿ ಪತಿಯು(29) ಮನೆಯಲ್ಲಿನ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ, ಈ ವೇಳೆ ಪತ್ನಿಯು ಅವರನ್ನು ತಡೆಯುವ ಬದಲು ಮೊಬೈಲ್‌ನಲ್ಲಿ ವಿಡಿಯೊ ಮಾಡಿದ್ದರು ಎಂಬ ಆರೋಪ ಕೇಳಿಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿಯ ತಾಯಿ ನೀಡಿದ ದೂರಿನ ಆಧಾರದಲ್ಲಿ ಮಹಿಳೆಯ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಮತ್ತು ಈ ಕೃತ್ಯವನ್ನು ವಿಡಿಯೊ ಮಾಡಿಕೊಂಡಿದ್ದಕ್ಕಾಗಿ ದೂರು ದಾಖಲಿಸಿಕೊಳ್ಳಲಾಗಿದ್ದು, ತನಿಖೆ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಂಗವಿಕಲರಿಗೆ ಮೀಸಲಾತಿ ಕೇಂದ್ರದಿಂದ ಮಾರ್ಗಸೂಚಿ



ನವದೆಹಲಿ(ಪಿಟಿಐ): ಕನಿಷ್ಠ ಶೇ 40ರಷ್ಟು ಅಂಗವೈಕಲ್ಯ ಹೊಂದಿದ ವ್ಯಕ್ತಿಗಳಿಗೆ ಮೀಸಲಾತಿ ನೀಡುವುದು ಹಾಗೂ ಅವರಿಗೆ ಯೋಗ್ಯವೆನಿಸುವ ಹುದ್ದೆಗಳನ್ನು ಗುರುತಿಸುವುದಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

ಅಂಗವಿಕಲರಿಗೆ ಮೀಸಲಾದ ಹುದ್ದೆಗಳನ್ನು ನಿಯಮಿತವಾಗಿ ಗುರುತಿಸುವುದು ಕಡ್ಡಾಯ ಹಾಗೂ ಹುದ್ದೆಗಳ ಪರಿಶೀಲನೆಗಾಗಿ ಸಮಿತಿಗಳನ್ನು ರಚಿಸಬೇಕು ಎಂದು ಮಾರ್ಗಸೂಚಿಗಳಲ್ಲಿ ಹೇಳಲಾಗಿದೆ.

ಒಂದು ಹುದ್ದೆ ಅಂಗವಿಕಲ ವ್ಯಕ್ತಿಗೆ ಸೂಕ್ತ ಎಂದು ಭಾವಿಸಿದಲ್ಲಿ, ಅದಕ್ಕೆ ಸಂಬಂಧಿಸಿದ ಬಡ್ತಿ ನೀಡಲಾಗುವ ಹುದ್ದೆಗಳನ್ನು ಕೂಡ ಅಂಗವಿಕಲರಿಗೆ ಮೀಸಲಿಡಬೇಕು ಎಂಬುದು ಸೇರಿದಂತೆ ಹಲವು ಅಂಶಗಳನ್ನು ಮಾರ್ಗಸೂಚಿ ಒಳಗೊಂಡಿದೆ.

ಈ ಮಾರ್ಗಸೂಚಿಗಳನ್ನು ಅಂಗವಿಕಲರ ಹಕ್ಕುಗಳ ಕಾಯ್ದೆ–2016ಕ್ಕೆ ಅನುಸಾರ ಸಿದ್ಧಪಡಿಸಲಾಗಿದೆ ಎಂದು ಕೇಂದ್ರ ತಿಳಿಸಿದೆ.

ಅಂಗವಿಕಲರ ಹಕ್ಕುಗಳ ಕಾಯ್ದೆ–2016ರ ಸಮರ್ಪಕ ಅನುಷ್ಠಾನ ಆಗುತ್ತಿಲ್ಲ ಎಂದು ದೆಹಲಿ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿತ್ತು. ಅಲ್ಲದೇ, ಕೇಂದ್ರೀಯ ವಿದ್ಯಾಲಯ ಸಂಘಟನೆ(ಕೆವಿಎಸ್)ಯು ಅಂಗವಿಕಲ ವ್ಯಕ್ತಿಗಳಿಗಾಗಿ ಹುದ್ದೆಗಳನ್ನು ಗುರುತಿಸುವ ವಿಚಾರದಲ್ಲಿ ಕಾನೂನಿಗೆ ವಿರುದ್ಧವಾದ ಕ್ರಮ ಕೈಗೊಂಡಿದ್ದನ್ನು ಟೀಕಿಸಿತ್ತು.

ಈ ವಿಚಾರವಾಗಿ ಅಂಗವಿಕಲರ ಸಬಲೀಕರಣ ಇಲಾಖೆಯು ಏಕರೂಪ ಮಾರ್ಗಸೂಚಿಗಳನ್ನು ರೂಪಿಸಬೇಕು ಎಂದೂ ಹೈಕೋರ್ಟ್ ಸೂಚಿಸಿತ್ತು.

ಈ ಬೆಳವಣಿಗೆ ಬೆನ್ನಲ್ಲೇ, ಕೇಂದ್ರ ಸರ್ಕಾರ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

ನಿರ್ಧಾರ ಬದಲಿಸಿದ ಮಲಯಾಳ ನಟಿ

ಕೊಚ್ಚಿ (ಕೇರಳ) (ಪಿಟಿಐ): ಮಲಯಾಳ ಸಿನಿಮಾ ಕ್ಷೇತ್ರದ ಹಲವು ಪ್ರಮುಖ ನಟರ ವಿರುದ್ಧ ದಾಖಲಿಸಿದ್ದ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ವಾಪಸ್ ಪಡೆಯುವುದಾಗಿ ಹೇಳಿದ್ದ 51 ವರ್ಷ ನಟಿ, ತಮ್ಮ ನಿರ್ಧಾರದಿಂದ ಹಿಂದೆ ಸರಿದಿದ್ದಾರೆ.

ಈ ದೂರುಗಳನ್ನು ವಾಪಸ್ ಪಡೆಯುವುದಿಲ್ಲ ಎಂದು ಭಾನುವಾರ ಅವರು ತಿಳಿಸಿದ್ದಾರೆ.

'ಸರ್ಕಾರದಿಂದ ಬೆಂಬಲ ಲಭಿಸದ ಕಾರಣ ದೂರುಗಳನ್ನು ಹಿಂಡೆಯಲು ನಿರ್ಧರಿಸಿದ್ದೇನೆ' ಎಂದು ಎರಡು ದಿನಗಳ ಹಿಂದಷ್ಟೇ ಅವರು ಘೋಷಿಸಿದ್ದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹೋರಾಟವನ್ನು ಮುಂದುವರಿಸಲು ನನ್ನ ಪತಿ ಮತ್ತು ಕುಟುಂಬಸ್ಥರು ಪ್ರೋತ್ಸಾಹ ನೀಡುತ್ತಿದ್ದಾರೆ. ಹೀಗಾಗಿ ನನ್ನ ನಿರ್ಧಾರವನ್ನು ಬದಲಾಯಿಸಿದೆ' ಎಂದು ತಿಳಿಸಿದರು.

ಸಿಪಿಎಂ ಶಾಸಕ ಎಂ.ಮುಕೇಶ್ ಸೇರಿದಂತೆ ಹಲವು ನಟರ ವಿರುದ್ಧ ನಟಿ ಲೈಂಗಿಕ ದೌರ್ಜನ್ಯದ ಆರೋಪ ಮಾಡಿದ್ದಾರೆ.

ಇವಿಎಂ: ಕಾಂಗ್ರೆಸ್ ನಿಲುವಿಗೆ ಸ್ವಪಕ್ಷೀಯರಿಂದಲೇ ವಿರೋಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಇತ್ತೀಚಿನ ಚುನಾವಣೆಗಳಲ್ಲಿ ಪಕ್ಷದ ಸೋಲಿಗೆ ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ದೂರುವಂತೆ ಕಾಂಗ್ರೆಸ್ ವರಿಷ್ಠರು ಒತ್ತಾಯ ಮಾಡುತ್ತಿರುವ ಬಗ್ಗೆ ಸ್ವಪಕ್ಷೀಯರಿಂದಲೇ ವಿರೋಧ ವ್ಯಕ್ತವಾಗುತ್ತಿದೆ.

'ಚುನಾವಣೆಗಳಲ್ಲಿ ಆಗಿರುವ ಹಿನ್ನಡೆ ಕುರಿತು ಹೊಣೆಗಾರಿಕೆ ನಿಗದಿ ಮಾಡಬೇಕು. ಎಲ್ಲಿ ನಮ್ಮಿಂದ ತಪ್ಪಾಗಿದೆ ಎಂಬ ಬಗ್ಗೆ ಪ್ರಾಮಾಣಿಕ ಆತ್ಮಾವಲೋಕನ ನಡೆಸಬೇಕು' ಎಂಬುದಾಗಿ ಪಕ್ಷದ ಯುವ ನಾಯಕರು ವರಿಷ್ಠರನ್ನು ಆಗ್ರಹಿಸಿದ್ದಾರೆ.

ಪಕ್ಷದ ವಕ್ತಾರ ಮೋಹನ್ ಕುಮಾರಮಂಗಲಂ ಹಾಗೂ ವಾರ್ ರೂಮ್‌ನ ಮಾಜಿ ಉಪಾಧ್ಯಕ್ಷ ವರುಣ್ ಸಂತೋಷ್ ಅವರು ಇವಿಎಂಗಳ ಕುರಿತ ಪಕ್ಷದ ನಿಲುವನ್ನು ಭಾನುವಾರ ಬಹಿರಂಗವಾಗಿಯೇ ಪ್ರಶ್ನಿಸಿದ್ದಾರೆ.

'ಇವಿಎಂಗಳನ್ನು ದೂರುವುದನ್ನು ನಿಲ್ಲಿಸಿ' ಎಂಬುದಾಗಿ ತಮಿಳುನಾಡು ಸಂಸದ ಕಾರ್ತಿ ಚಿದಂಬರಂ ಅವರು, ಸಾಮಾಜಿಕ ಮಾಧ್ಯಮಗಳಲ್ಲಿ ಈ ಹಿಂದೆ ತಾವು ಮಾಡಿದ್ದ ಪೋಸ್ಟ್ ಅನ್ನು ಮತ್ತೊಮ್ಮೆ ಹಂಚಿಕೊಂಡಿದ್ದಾರೆ.

'ಸತತ ಸೋಲು ಕಂಡಿರುವ ದಿಗ್ವಿಜಯ ಸಿಂಗ್, ಇವಿಎಂ ವಿಷಯ ಪ್ರಸ್ತಾಪಿಸುತ್ತಾರೆ' ಎಂದು ಹಿರಿಯ ಸಂಸದರೊಬ್ಬರು ಟೀಕಿಸಿದ್ದಾರೆ.

'ನೇರ ಲಾಭ ವರ್ಗಾವಣೆಯು (ಡಿಬಿಟಿ) ಚುನಾವಣಾ ಫಲಿತಾಂಶಗಳ ಮೇಲೆ ಪ್ರಭಾವ ಬೀರಲು ಆರಂಭಿಸಿದೆ. ಇಂತಹ ಸಂದರ್ಭದಲ್ಲಿ ಪಕ್ಷದ ತಂತ್ರಗಾರಿಕೆಯಲ್ಲಿ ಯಾವ ಬದಲಾವಣೆಗಳಾಗಬೇಕು ಎಂಬ ಚರ್ಚೆ ಬದಲು, ಗಮನವನ್ನು ಬೇರೆಡೆ ಸೆಳೆಯುವುದಕ್ಕಾಗಿ ಅವರು ಇವಿಎಂ ವಿಷಯ ಪ್ರಸ್ತಾಪಿಸುತ್ತಾರೆ' ಎಂದೂ ಹೇಳಿದ್ದಾರೆ.

ಇಂದಿನಿಂದ ಸಂಸತ್‌ನ ಚಳಿಗಾಲದ ಅಧಿವೇಶನ; ಕಾವೇರಿದ ಚರ್ಚೆಯ ನಿರೀಕ್ಷೆ

ಅದಾನಿ ವಿಷಯ: ಚರ್ಚೆಗೆ ಕಾಂಗ್ರೆಸ್ ಪಟ್ಟು

ಪ್ರಜಾವಾಣಿ ವಾರ್ತೆ



ನವದೆಹಲಿ: ಸಂಸತ್‌ನ ಚಳಿಗಾಲದ ಅಧಿವೇಶನದಲ್ಲಿ ಮಣಿಪುರ ವಿದ್ಯಮಾನ, ಅದಾನಿ ಸಮೂಹದ ವಿರುದ್ಧದ ಆರೋಪಗಳು ಹಾಗೂ ವಾಯುಮಾಲಿನ್ಯ ಕುರಿತು ಚರ್ಚೆ ನಡೆಯಬೇಕು ಎಂಬ ಬೇಡಿಕೆಯನ್ನು ಕಾಂಗ್ರೆಸ್ ಮುಂದಿಟ್ಟಿದೆ. ಹೀಗಾಗಿ, ಸೋಮವಾರ ಆರಂಭವಾಗಲಿರುವ ಚಳಿಗಾಲದ ಅಧಿವೇಶನ ಕಾವೇರಿದ ಚರ್ಚೆಗಳಿಗೆ ಸಾಕ್ಷಿಯಾಗುವ ಎಲ್ಲ ಸಾಧ್ಯತೆಗಳಿವೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ಭಾನುವಾರ ನಡೆದ ಸರ್ವಪಕ್ಷಗಳ ಸಭೆಯಲ್ಲಿ ಕಾಂಗ್ರೆಸ್ ನಾಯಕರು ಈ ಬೇಡಿಕೆ ಮಂಡಿಸಿದ್ದಾರೆ.

ಕಾಂಗ್ರೆಸ್‌ನ ಈ ಬೇಡಿಕೆಗೆ ಪ್ರತಿಕ್ರಿಯಿಸಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, 'ಸದನಗಳಲ್ಲಿ ಯಾವ ವಿಷಯ ಕುರಿತು ಚರ್ಚೆ ನಡೆಸಬೇಕು ಎಂಬ ಬಗ್ಗೆ ಸಂಬಂಧಪಟ್ಟ ಕಲಾಪ ಸಲಹಾ ಸಮಿತಿಯು ಕಾರ್ಯಸೂಚಿ ಪ್ರಕಾರ ನಿರ್ಧರಿಸಲಿದೆ. ಅಧಿವೇಶನ ಸುಸೂತ್ರವಾಗಿ ನಡೆಯಲು ಎಲ್ಲ ಪಕ್ಷಗಳು ಸಹಕರಿಸಬೇಕು' ಎಂದು ಕೋರಿದರು.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕಾಂಗ್ರೆಸ್ ಸಂಸದ ಪ್ರಮೋದ್ ತಿವಾರಿ, 'ಗೌತಮ್ ಅದಾನಿ ವಿರುದ್ಧ ಅಮೆರಿಕದ ನ್ಯಾಯಾಂಗ ಇಲಾಖೆ ಹೊರಿಸಿರುವ ಲಂಚದ ಆರೋಪವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುವಂತೆ ಅಧಿವೇಶನಕ್ಕೂ ಮುಂಚೆಯೇ ಪಕ್ಷವು ಸರ್ಕಾರವನ್ನು ಒತ್ತಾಯಿಸಿತ್ತು' ಎಂದರು.ಅಧಿವೇಶನದಲ್ಲಿ ಈ ವಿಚಾರವಾಗಿ ಸರ್ಕಾರ ಹೇಳಿಕೆ ನೀಡಬೇಕು ಎಂದು ಆಗ್ರಹಿಸಿದರು.

'ಮಣಿಪುರದಲ್ಲಿ ಪರಿಸ್ಥಿತಿ ಸಂಪೂರ್ಣ ಕೈಮೀರಿ ಹೋಗುತ್ತಿದೆ. ಅಲ್ಲಿನ ಸಮಸ್ಯೆ ಬಗೆಹರಿಸಲು ಈ ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲ. 'ವಿಭಜಿಸು ಹಾಗೂ ಕೊಲ್ಲು' ಎಂಬುದು ಈ ಸರ್ಕಾರದ ಮಂತ್ರವಾಗಿದೆ' ಎಂದ ಅವರು, ಮಣಿಪುರ ವಿದ್ಯಮಾನಗಳ ಬಗ್ಗೆಯೂ ಚರ್ಚೆ ನಡೆಸಬೇಕು ಎಂಬ ಬೇಡಿಕೆ ಮುಂದಿಟ್ಟಿದ್ದೇವೆ ಎಂದರು.

'ನಿರುದ್ಯೋಗ ಹೆಚ್ಚಳ ಹಾಗೂ ಉತ್ತರ ಭಾರತದಲ್ಲಿ ವಾಯುಮಾಲಿನ್ಯ ಹೆಚ್ಚುತ್ತಿರುವ ಬಗ್ಗೆಯೂ ಚರ್ಚೆಗೆ ಒತ್ತಾಯಿಸಿದೆವು' ಎಂದರು.

ಕಾಂಗ್ರೆಸ್ ಬೇಡಿಕೆ ಕುರಿತು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಸಚಿವ ರಿಜಿಜು, 'ಲೋಕಸಭಾ ಸ್ಪೀಕರ್ ಹಾಗೂ ರಾಜ್ಯಸಭಾ ಸಭಾಪತಿ ಅವರ ಅನುಮತಿಯೊಂದಿಗೆ ಯಾವ ವಿಷಯಗಳ ಕುರಿತು ಚರ್ಚೆ ಕೈಗೆತ್ತಿಕೊಳ್ಳಬೇಕು ಎಂಬ ಬಗ್ಗೆ ಕಲಾಪ ಸಲಹಾ ಸಮಿತಿ ತೀರ್ಮಾನಿಸಲಿದೆ' ಎಂದರು.

ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ, ಕಾನೂನು ಸಚಿವ ಅರ್ಜುನ್ ಮೇಘವಾಲ್, ಸಂಸದೀಯ ವ್ಯವಹಾರಗಳ ಖಾತೆ ರಾಜ್ಯ ಸಚಿವ ಎಲ್.ಮುರುಗನ್, ಕಾಂಗ್ರೆಸ್‌ನ ರಾಜ್ಯ ಸಭಾ ಸದಸ್ಯರಾದ ಜೈರಾಮ್ ರಮೇಶ್, ಲೋಕಸಭಾ ಸದಸ್ಯರಾದ ಗೌರವ್ ಗೊಗೋಯಿ, ಕೆ.ಸುರೇಶ್ ಸಭೆಯಲ್ಲಿ ಪಾಲ್ಗೊಂಡಿದ್ದರು.

ಟಿಎಂಸಿ ಸದಸ್ಯರು ಗೈರಾಗಿದ್ದರೆ, ಸಿಪಿಐನ ರಾಜ್ಯಸಭಾ ಸದಸ್ಯ ಪಿ.ಸಂತೋಷಕುಮಾರ್ ಪಾಲ್ಗೊಂಡಿದ್ದರು.

'ಪ್ರಸ್ತಾಪ': ಕೇರಳ ಕುರಿತು ಕೇಂದ್ರ ಸರ್ಕಾರ ತೋರುತ್ತಿರುವ ತಾರತಮ್ಯ ಕುರಿತು ಅಧಿವೇಶನದಲ್ಲಿ ಪ್ರಸ್ತಾಪಿಸಲಾಗುವುದು ಎಂದು ಸಿಪಿಐ ಪ್ರಕಟಣೆಯಲ್ಲಿ ತಿಳಿಸಿದೆ.

26ಕ್ಕೆ ಸಂವಿಧಾನ ದಿನ

ಸಂಸತ್‌ನ ಚಳಿಗಾಲದ ಅಧಿವೇಶನ ಡಿ.20ರ ವರೆಗೆ ನಡೆಯಲಿದೆ. ನ.26ರಂದು ಸಂವಿಧಾನ ದಿನ ಆಚರಿಸಲಾಗುತ್ತದೆ. ಈ ಅಂಗವಾಗಿ, ಸಂವಿಧಾನ ಸದನದ ಸೆಂಟ್ರಲ್ ಹಾಲ್‌ನಲ್ಲಿ ಉಭಯ ಸದನಗಳ ಜಂಟಿ ಅಧಿವೇಶನ ನಡೆಯಲಿದೆ. ವಿವಾದಿತ ವಕ್ಫ್ ತಿದ್ದುಪಡಿ ಮಸೂದೆ ಸೇರಿದಂತೆ 16 ಮಸೂದೆಗಳನ್ನು ಕೇಂದ್ರ ಮಂಡಿಸಲಿದೆ.

ಐಟಿಎಫ್ ಟೂರ್ನಿ: ರಷ್ಯಾದ ಬಾಬ್‌ರೋವ್ ರನ್ನರ್ ಅಪ್

ಕಲಬುರಗಿ: ಸುಲ್ತಾನೋವ್ 'ಸುಲ್ತಾನ್'

• ಮಲ್ಲಪ್ಪ ಪಾರೇಗಾಂವ

ಕಲಬುರಗಿ: ಮನಮೋಹಕ ಆಟವಾಡಿದ ಉಜ್ಬೇಕಿಸ್ತಾನದ ಖುಮೋಯುನ್ ಸುಲ್ತಾನೋವ್ ಅವರು ಕಲಬುರಗಿ ಓಪನ್ ಪುರುಷರ ಐಟಿಎಫ್ ಟೆನಿಸ್ ಟೂರ್ನಿಯ ಚಾಂಪಿಯನ್ ಕಿರೀಟ ಮುಡಿಗೇರಿಸಿಕೊಂಡರು. ಅಗ್ರಶ್ರೇಯಾಂಕದ ಈ ಆಟಗಾರ ರಷ್ಯಾದ ಬಾಗ್ದಾನ್ ಬಾಬ್‌ರೋವ್ ವಿರುದ್ಧ ಗೆದ್ದು ಪ್ರಶಸ್ತಿಗೆ ಮುತ್ತಿಕ್ಕಿದರು.

ಸುಲ್ತಾನೋವ್‌ಗೆ ಇದು ಈ ಋತುವಿನ ಐದನೇ ಪ್ರಶಸ್ತಿಯಾಗಿದೆ. ಭಾರತದಲ್ಲಿ ಗೆದ್ದ ಎರಡನೇ ಪ್ರಶಸ್ತಿ ಕೂಡ. ವರ್ಷಾರಂಭದಲ್ಲಿ ಚಂಡೀಗಢದಲ್ಲಿ ನಡೆದ ಟೂರ್ನಿಯಲ್ಲಿ ವಿಜೇತರಾಗಿದ್ದರು.

ಮುಂಬೈ ಐಟಿಎಫ್ ಟೂರ್ನಿಯಲ್ಲಿ ಪ್ರಶಸ್ತಿ ಸುತ್ತಿನಲ್ಲಿ ಎಡವಿದ್ದ ಸುಲ್ತಾನೋವ್, ಇಲ್ಲಿ ತಪ್ಪುಗಳನ್ನು ತಿದ್ದಿಕೊಂಡರು. ಟ್ರೋಫಿಯೊಂದಿಗೆ ₹ 3 ಲಕ್ಷ ಬಹುಮಾನ ಹಾಗೂ 25 ಎಟಿಪಿ ಅಂಕಗಳು ಅವರ ಖಾತೆಗೆ ಸೇರಿದವು. ರನ್ನರ್ ಅಪ್ ಬಾಬ್‌ರೋವ್, ₹ 1.79 ಲಕ್ಷ ನಗದು ಹಾಗೂ 16 ಎಟಿಪಿ ಅಂಕಗಳನ್ನು ಗಳಿಸಿದರು. ಕಳೆದ ಬಾರಿ ತಮಿಳುನಾಡಿನ ರಾಮಕುಮಾರ್ ರಾಮನಾಥನ್ ಚಾಂಪಿಯನ್ ಆಗಿದ್ದರು.

ಇಲ್ಲಿಯ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಸಿಂಗಲ್ಸ್ ಪ್ರಶಸ್ತಿ ಸುತ್ತಿನ ಸೆಣಸಾಟದಲ್ಲಿ ಸುಲ್ತಾನೋವ್ ಅವರಿಗೆ ಬಾಬ್‌ರೋವ್ ಸುಲಭ ತುತ್ತಾದರು. ಅವರು 6–2, 6–1ರಿಂದ ಎರಡನೇ ಶ್ರೇಯಾಂಕದ ಆಟಗಾರರನ್ನು ಮಣಿಸಿದರು. ಪಂದ್ಯದಲ್ಲಿ ಸುಲ್ತಾನೋವ್ ಸತತ 9 ಗೇಮ್‌ಗಳನ್ನು ಗೆದ್ದು ಪ್ರಾಬಲ್ಯ ಮೆರೆದರು.

ಮುಂಬೈ ಟೂರ್ನಿಯ ಸೋಲಿನ ಸೇಡನ್ನು ಇಲ್ಲಿ ತೀರಿಸಬೇಕೆಂಬ ಹುಮ್ಮಸ್ಸಿನಿಂದ ಅಂಗಣಕ್ಕಿಳಿದ ಬಾಬ್‌ರೋವ್ ಆಸೆ ಈಡೇರಲಿಲ್ಲ. ಸುಲ್ತಾನೋವ್ ಬಿರುಸಿನ ಹೊಡೆತಗಳಿಗೆ ಮಾರುತ್ತರ ನೀಡುವಲ್ಲಿ ಬಾಬ್‌ರೋವ್ ಅವರಿಗೆ ಸಾಧ್ಯವಾಗಲಿಲ್ಲ.



ಉಜ್ಬೇಕಿಸ್ತಾನದ ಖುಮೋಯುನ್ ಸುಲ್ತಾನೋವ್ ಮತ್ತು ರಷ್ಯಾದ ಬಾಗ್ದಾನ್ ಬಾಬ್‌ರೋವ್ ಪ್ರಶಸ್ತಿಯೊಂದಿಗೆ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಶ್ರೇಯಸ್‌ಗೆ ₹26.75 ಕೋಟಿ • ವೆಂಕಟೇಶ್‌ಗೆ ಬಂಪರ್ • ರಾಹುಲ್‌ಗೆ ಡೆಲ್ಲಿ ಕ್ಯಾಪಿಟಲ್ಸ್ ಮಣೆ

ರಿಷಭ್ ಪಂತ್ ದಾಖಲೆ ವೀರ

72 ಮೊದಲ ದಿನ ಖರೀದಿಯಾದ ಒಟ್ಟು ಆಟಗಾರರು

24 ಖರೀದಿಯಾದ ವಿದೇಶಿ ಆಟಗಾರರು

₹467.95 ಕೋಟಿ ಮೊದಲ ದಿನ ಖರ್ಚಾದ ಒಟ್ಟು ಮೊತ್ತ

ಇಂದಿನ ಹರಾಜು ಆರಂಭ: ಮಧ್ಯಾಹ್ನ 2.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ



ರಿಷಭ್ ಪಂತ್

ಶ್ರೇಯಸ್ ಅಯ್ಯರ್



ಕೆ.ಎಲ್. ರಾಹುಲ್

ಜೆದ್ದಾ, ಸೌದಿ ಅರೇಬಿಯಾ(ಪಿಟಿಐ): ಭಾನುವಾರ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮೆಗಾ ಹರಾಜಿನಲ್ಲಿ ಫ್ರ್ಯಾಂಚೈಸಿಗಳು ವಿಕೆಟ್ ಕೀಪರ್ ರಿಷಭ್ ಪಂತ್ ಮತ್ತು 'ಚಾಂಪಿಯನ್' ಕ್ರಿಕೆಟಿಗ ಶ್ರೇಯಸ್ ಅಯ್ಯರ್ ಅವರಿಬ್ಬರ ಖರೀದಿಗೆ ಜಿದ್ದಾಜಿದ್ದಿ ನಡೆಸಿದವು.

ಈ ಪೈಪೋಟಿಯಲ್ಲಿ ರಿಷಭ್ ಅವರನ್ನು ₹ 27 ಕೋಟಿಗೆ ಲಖನೌ ಸೂಪರ್ ಜೈಂಟ್ಸ್ ಖರೀದಿಸಿದರೆ. ರಿಷಭ್‌ಗಿಂತ ಕೇವಲ ₹ 25 ಲಕ್ಷ ಕಡಿಮೆ ಮೊತ್ತಕ್ಕೆ ಶ್ರೇಯಸ್ ಅಯ್ಯರ್ ಅವರನ್ನು ಪಂಜಾಬ್ ಕಿಂಗ್ಸ್ ತಂಡವು ಸೆಳೆದುಕೊಂಡಿತು. ಐಪಿಎಲ್ ಇತಿಹಾಸದಲ್ಲಿಯೇ ಅತಿ ಹೆಚ್ಚು ಮೌಲ್ಯ ಪಡೆದ ಆಟಗಾರನೆಂಬ ಹೆಗ್ಗಳಿಕೆಗೆ ರಿಷಭ್ ಪಾತ್ರರಾದರು. ಇದೇ ಸಾಲಿನಲ್ಲಿ ಎರಡನೇ ಸ್ಥಾನವನ್ನು ಶ್ರೇಯಸ್ (₹26.75 ಕೋಟಿ) ಪಡೆದುಕೊಂಡರು. ಹೋದ ವರ್ಷ ₹24.75 ಕೋಟಿ ಗಳಿಸಿದ್ದ ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್ ದಾಖಲೆಯನ್ನು ಈ ಇಬ್ಬರೂ ಭಾರತೀಯ ಆಟಗಾರರು ನುಚ್ಚುನೂರು ಮಾಡಿದರು. ಈ ಬಾರಿ ಸ್ಟಾರ್ಕ್ ಅವರು ಕೇವಲ ₹11.75 ಕೋಟಿ ಗಳಿಸಿ ಡೆಲ್ಲಿ ತಂಡ ಸೇರಿಕೊಂಡರು.

ಕಳೆದ ಐಪಿಎಲ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ (ಕೆಕೆಆರ್) ತಂಡವು ಶ್ರೇಯಸ್ ನಾಯಕತ್ವದಲ್ಲಿ ಚಾಂಪಿಯನ್ ಆಗಿತ್ತು. ಅದರಿಂದಾಗಿ ಅವರ ಖರೀದಿಗೆ ಅಪಾರ ಪೈಪೋಟಿ ಏರ್ಪಟ್ಟಿತು. ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕರಾಗಿದ್ದ ರಿಷಭ್ ಅವರು ಕೂಡ ತಂಡದಿಂದ ಬಿಡುಗಡೆ ಗೊಂಡಿದ್ದರು. ಬಿಡ್‌ನಲ್ಲಿ ಅವರು ₹25 ಕೋಟಿ ಪಡೆಯುತ್ತಾರೆಂದು ಹಲವು ಮಾಜಿ ಕ್ರಿಕೆಟಿಗರು ನಿರೀಕ್ಷೆ ವ್ಯಕ್ತಪಡಿಸಿದ್ದರು. ದೀಗ ಶ್ರೇಯಸ್ ಮತ್ತು ರಿಷಭ್ ಅವರು ನಿರೀಕ್ಷೆಗೂ ಮೀರಿದ ಮೊತ್ತ ಗಳಿಸಿದ್ದಾರೆ.

ರಿಷಭ್ ಅವರ ಬಿಡ್ ₹ 20.75 ಕೋಟಿಗೆ ಮುಟ್ಟಿದಾಗ ಡೆಲ್ಲಿ ತಂಡವು ರೈಟ್ ಟು ಮ್ಯಾಚ್ (ಆರ್‌ಟಿಎಂ) ಕಾರ್ಡ್ ಬಳಸಿತು. ಆದರೆ ಲಖನೌ ಹಿಮ್ಮೆಟ್ಟಲಿಲ್ಲ. 27 ಕೋಟಿಯವರೆಗೂ ಬಿಡ್ ಮಾಡಿತು.

ಎರಡು ವರ್ಷಗಳ ಹಿಂದೆ ಭೀಕರ ರಸ್ತೆ ಅಪಘಾತದಲ್ಲಿ ಗಾಯಗೊಂಡು 'ಪುನರ್ಜನ್ಮ' ಪಡೆದು ಬಂದಿರುವ ರಿಷಭ್ ಹೋದ ವರ್ಷದ ಐಪಿಎಲ್‌ನಲ್ಲಿ ಕ್ರಿಕೆಟ್‌ಗೆ ಮರಳಿದ್ದರು. ಟಿ20 ವಿಶ್ವಕಪ್ ಟೂರ್ನಿ ಸೇರಿದಂತೆ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಮಿಂಚಿದ್ದರು. ಅದರಿಂದಾಗಿ ಅವರನ್ನು ಸೆಳೆದುಕೊಳ್ಳಲು ಫ್ರ್ಯಾಂಚೈಸಿಗಳು ಅಪಾರ ಪೈಪೋಟಿಗಿಳಿದವು.

ಅಚ್ಚರಿ ಮೂಡಿಸಿದ ವೆಂಕಟೇಶ್: ಆದರೆ ಈ ಬಿಡ್‌ನಲ್ಲಿ ಅಚ್ಚರಿಯ ಸಂಗತಿಯೆಂದರೆ ವೆಂಕಟೇಶ್ ಅಯ್ಯರ್ ಅವರು ₹ 23.75 ಕೋಟಿ ಗಳಿಸಿದ್ದು ಕಳೆದ ಋತುಗಳಲ್ಲಿ ಕೆಕೆಆರ್ ತಂಡದ ಆಲ್‌ರೌಂಡರ್ ಆಗಿ ಮಿಂಚಿದ್ದರು. ಈಚೆಗೆ ಅವರನ್ನು ಬಿಡುಗಡೆ ಮಾಡಿದ್ದ ಕೆಕೆಆರ್ ತಂಡವೇ ಅವರನ್ನು ಖರೀದಿಸಿತು. ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ವೆಂಕಟೇಶ್ ಅವರನ್ನು ಖರೀದಿಸಲು ಕೆಕೆಆರ್‌ಗೆ ತೀವ್ರ ಪೈಪೋಟಿಯೊಡ್ಡಿತು.

ಡೆಲ್ಲಿಗೆ ರಾಹುಲ್: ಕನ್ನಡಿಗ ಕೆ.ಎಲ್. ರಾಹುಲ್ ಅವರು ಕಳೆದ ಋತುಗಳಲ್ಲಿ ಲಖನೌ ತಂಡದ ನಾಯಕರಾಗಿದ್ದರು. ಈ ಬಾರಿ ಅವರು ಡೆಲ್ಲಿ ತಂಡದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಅನುಭವಿ ಆಟಗಾರ ರಾಹುಲ್ ಅವರನ್ನು ₹ 14 ಕೋಟಿ ನೀಡಿದ ಡೆಲ್ಲಿ ತನ್ನ ತೆಕ್ಕೆಗೆಳೆದುಕೊಂಡಿತು. ಡೆಲ್ಲಿಯಲ್ಲಿದ್ದ ಪಂತ್ ಲಖನೌಗೆ ಮತ್ತು ಅಲ್ಲಿದ್ದ ರಾಹುಲ್ ಡೆಲ್ಲಿಗೆ ಬಂದಿದ್ದು ಕಾಕತಾಳೀಯವೆಂಬಂತಾಗಿದೆ.

ಚೆನ್ನೈಗೆ ಅಶ್ವಿನ್ : ಅನುಭವಿ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅವರು ತಮ್ಮ ತವರು ತಮಿಳುನಾಡಿನ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಮರಳಿದ್ದಾರೆ. ಅಶ್ವಿನ್ ಅವರಿಗೆ ₹ 9.75 ಕೋಟಿ ಲಭಿಸಿತು.

ಡೆವೊನ್ ಕಾನ್ವೆ ಮತ್ತು ರಚಿನ್ ರವೀಂದ್ರ ಅವರನ್ನು ಚೆನ್ನೈ ತಂಡವು ಮರಳಿ ಖರೀದಿಸಿತು. ಕ್ರಮವಾಗಿ ₹ 6.55 ಕೋಟಿ ಮತ್ತು ₹ 4 ಕೋಟಿ ನೀಡುವ ಮೂಲಕ ಉತ್ತಮ ಲಾಭ ಪಡೆದುಕೊಂಡಿತು.


ಆಸ್ಟ್ರೇಲಿಯಾದ ಬಿರುಸಿನ ಬ್ಯಾಟರ್ ಜೇಕ್ ಫ್ರೆಸರ್ ಮಕ್‌ಗುರ್ಕ್ ಆರ್‌ಟಿಎಂ ಮೂಲಕ ಡೆಲ್ಲಿ ತಂಡಕ್ಕೆ ಮರಳಿದರು. ಅವರಿಗೆ ₹ 9 ಕೋಟಿ ಲಭಿಸಿತು. ಐಪಿಎಲ್‌ನಲ್ಲಿ ಆಡಿದ ಪ್ರಮುಖ ಆಟಗಾರರಲ್ಲಿ ಒಬ್ಬರಾಗಿರುವ ಡೇವಿಡ್ ವಾರ್ನರ್ ಅವರನ್ನು ಯಾರೂ ಖರೀದಿಸಲಿಲ್ಲ. ಅವರಿಗೆ ₹ 2 ಕೋಟಿ ಮೂಲಬೆಲೆ ನಿಗದಿ ಪಡಿಸಲಾಗಿದೆ.

ಹರಾಜು ಪ್ರಕ್ರಿಯೆಯನ್ನು ಮುಂಬೈ ಮೂಲದ ಮಲ್ಲಿಕಾ ಸಾಗರ್ ಅವರು ನಡೆಸಿಕೊಟ್ಟರು.



ಜೋಸ್ ಬಟ್ಲರ್

ರಾಹುಲ್, ಪ್ರಸಿದ್ಧಗೆ ಉತ್ತಮ ಮೌಲ್ಯ



ಪ್ರಸಿದ್ಧ ಕೃಷ್ಣ

ಕರ್ನಾಟಕದ ಕೆ.ಎಲ್. ರಾಹುಲ್ ಮತ್ತು ವೇಗಿ ಪ್ರಸಿದ್ಧ ಕೃಷ್ಣ ಅವರಿಗೆ ಐಪಿಎಲ್ ಮೆಗಾ ಹರಾಜಿನಲ್ಲಿ ಉತ್ತಮ ಮೌಲ್ಯ ಒಲಿಯಿತು.

ರಾಹುಲ್ ₹ 14 ಕೋಟಿಯೊಂದಿಗೆ ಡೆಲ್ಲಿ ಕ್ಯಾಪಿಟಲ್ಸ್ ಸೇರಿದರೆ, ಪ್ರಸಿದ್ಧಕೃಷ್ಣ ಅವರು ₹ 9.5 ಕೋಟಿಯೊಂದಿಗೆ ಗುಜರಾತ್ ಟೈಟನ್ಸ್‌ಗೆ ಸೇರ್ಪಡೆಯಾದರು. ಕಣದಲ್ಲಿದ್ದ ರಾಜ್ಯದ ಅಭಿನವ್ ಮನೋಹರ್ (₹ 3.20 ಕೋಟಿ) ಅವರು ಸನ್‌ರೈಸರ್ಸ್ ಹೈದರಾಬಾದ್‌ಗೆ, ವೈಶಾಖ ವಿಜಯಕುಮಾರ್ (₹ 1.80 ಕೋಟಿ) ಪಂಜಾಬ್ ಕಿಂಗ್ಸ್‌ಗೆ ಹಾಗೂ ಕರುಣ್ ನಾಯರ್ (₹ 50 ಲಕ್ಷ) ಅವರು ಡೆಲ್ಲಿ ಕ್ಯಾಪಿಟಲ್ಸ್‌ಗೆ ಸೇರ್ಪಡೆಯಾದರು.

ಆದರೆ ದೇವದತ್ತ ಪಡಿಕ್ಕಲ್, ಲವನೀತ್ ಸಿಸೊಡಿಯಾ ಮತ್ತು ಶ್ರೇಯಸ್ ಗೋಪಾಲ್ ಅವರನ್ನು ಖರೀದಿಸಲು ಯಾರೂ ಒಲವು ತೋರಲಿಲ್ಲ.

ಆರ್‌ಸಿಬಿಗೆ ಸಿಗದ ರಾಹುಲ್

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಕನ್ನಡಿಗ ಕೆ.ಎಲ್. ರಾಹುಲ್ ಅವರನ್ನು ಬಿಡ್‌ನಲ್ಲಿ ಖರೀದಿಸಲಿಲ್ಲ.

ಲಖನೌ ತಂಡದಿಂದ ರಾಹುಲ್ ಅವರು ಬಿಡುಗಡೆಯಾದ ನಂತರ ಆರ್‌ಸಿಬಿಗೆ ಬರಲಿದ್ದಾರೆಂಬ ಮಾತುಗಳು ಕೇಳಿಬಂದಿದ್ದವು. ಮೆಗಾ ಹರಾಜಿನಲ್ಲಿ ಅವರನ್ನು ಆರ್‌ಸಿಬಿ ಖರೀದಿಸಲಿ ಎಂದು ಹಲವು ಅಭಿಮಾನಿಗಳೂ ಒತ್ತಾಯಿಸಿದ್ದರು. ಆದರೆ ರಾಹುಲ್ ಡೆಲ್ಲಿ ತಂಡದ ಪಾಲಾದರು. ಈಚೆಗೆ ಆರ್‌ಸಿಬಿಯು ವಿರಾಟ್ ಕೊಹ್ಲಿ, ರಜತ್ ಪಾಟೀದಾರ್ ಮತ್ತು ಯಶ್ ದಯಾಳ್ ಅವರನ್ನು ಬಿಟ್ಟು ಉಳಿದೆಲ್ಲ ಆಟಗಾರರನ್ನು ಬಿಡುಗಡೆ ಮಾಡಿತ್ತು.

ಆದರೆ ಬಿಡ್‌ನಲ್ಲಿ ಹೆಚ್ಚು ತರಾತುರಿ ತೋರದೆ ಎಚ್ಚರಿಕೆಯೊಂದಿಗೆ ಆಟಗಾರರನ್ನು ಖರೀದಿಸಿತು. ಶ್ರೇಯಸ್ ಅಯ್ಯರ್ ಮತ್ತು ವೆಂಕಟೇಶ್ ಅಯ್ಯರ್ ಅವರ ಬಿಡ್‌ನಲ್ಲಿ ಪಾಲ್ಗೊಂಡಿತ್ತು. ಆದರೆ ಒಂದು ಹಂತದ ನಂತರ ಹಿಂದೆ ಸರಿಯಿತು.

'ಜೋಶ್ ಹ್ಯಾಜಲ್‌ವುಡ್ ಅವರನ್ನು ಆರ್‌ಸಿಬಿಯು ಆಯ್ಕೆ ಮಾಡಿಕೊಂಡಿರುವುದು ಉತ್ತಮ ನಡೆಯಾಗಿದೆ. ಅವರ ಸೇರ್ಪಡೆಯಿಂದಾಗಿ ತಂಡದ ಬೌಲಿಂಗ್ ವಿಭಾಗ ಬಲಾಢ್ಯವಾಗಿದೆ' ಎಂದು ಆರ್‌ಸಿಬಿ ಮಾಜಿ ಆಟಗಾರ ದಿನೇಶ್ ಕಾರ್ತಿಕ್ ಹೇಳಿದ್ದಾರೆ.

ಐಪಿಎಲ್ ಬಿಡ್: ಆಟಗಾರರು ಪಡೆದ ಮೌಲ್ಯ (₹ ಕೋಟಿಗಳಲ್ಲಿ)

ಆಟಗಾರ	ಪಡೆದ ಮೌಲ್ಯ	ಮೂಲಬೆಲೆ
ಚೆನ್ನೈ ಸೂಪರ್ ಕಿಂಗ್ಸ್		
ನೂರ್ ಅಹಮ್ಮದ್	10	2.0
ರವಿಚಂದ್ರನ್ ಅಶ್ವಿನ್	9.75	2.0
ಡೆವೊನ್ ಕಾನ್ವೆ	6.25	2.0
ಸಯ್ಯದ್ ಖಲೀಲ್ ಅಹಮ್ಮದ್	4.80	2.0
ರಚಿನ್ ರವೀಂದ್ರ (ಆರ್‌ಟಿಎಂ)	4.0	1.50
ರಾಹುಲ್ ತ್ರಿಪಾಠಿ	3.40	0.75
ವಿಜಯ್ ಶಂಕರ್	1.20	0.30
ಡೆಲ್ಲಿ ಕ್ಯಾಪಿಟಲ್ಸ್		
ಕೆ.ಎಲ್. ರಾಹುಲ್	14	2.0
ಮಿಚೆಲ್ ಸ್ಟಾರ್ಕ್	11.75	2.0
ಎನ್. ನಟರಾಜನ್	10.75	2.0
ಜೇಕ್ ಫ್ರೇಸರ್ ಮೆಕ್‌ಗುರ್ಕ್ (ಆರ್‌ಟಿಎಂ)	9.0	2.0
ಹ್ಯಾರಿ ಬ್ರೂಕ್	6.25	2.0
ಅಶುತೋಷ್ ಶರ್ಮಾ	3.80	0.30
ಮೋಹಿತ್ ಶರ್ಮಾ	2.20	0.50
ಸಮೀರ್ ರಿಜ್ವಿ	0.95	0.30
ಕರುಣ್ ನಾಯರ್	0.50	0.30
ಗುಜರಾತ್ ಟೈಟನ್ಸ್		
ಜೋಸ್ ಬಟ್ಲರ್	15.75	2.0
ಮೊಹಮ್ಮದ್ ಸಿರಾಜ್	12.25	2.0
ಕಗಿಸೊ ರಬಾಡ	10.75	2.0
ಪ್ರಸಿದ್ಧ ಕೃಷ್ಣ	9.50	2.0
ಮಹಿಪಾಲ್ ಲೊಮ್ರೋರ್	1.70	0.50
ಕುಮಾರ್ ಕುಶಾಗ್ರ	0.65	0.30
ಮಾನವ್ ಸುತಾರ್	0.30	0.30
ಅನುಜ್ ರಾವತ್	0.30	0.30
ನಿಶಾಂತ್ ಸಿಂಧು	0.30	0.30
ಕೋಲ್ಕತ್ತ ನೈಟ್ ರೈಡರ್ಸ್		
ವೆಂಕಟೇಶ್ ಅಯ್ಯರ್	23.75	2.0
ಆ್ಯನ್ರಿಚ್ ನಾಕಿಯಾ	6.50	2.0
ಕ್ವಿಂಟನ್ ಡಿಕಾಕ್	3.60	2.0
ಅಂಗ್‌ಕ್ರಿಷ್ ರಘುವಂಶಿ	3.0	0.30
ರೆಹಮಾನುಲ್ಲಾ ಗುರ್ಬಾಜ್	2.0	2.0
ವೈಭವ್ ಅರೋರಾ	1.80	0.30
ಮಯಂಕ್ ಮಾರ್ಕಂಡೆ	0.30	0.30
ಮುಂಬೈ ಇಂಡಿಯನ್ಸ್		
ಟ್ರೆಂಟ್ ಬೌಲ್ಟ್	12.50	2.0
ನಮನ್ ಧೀರ್ (ಆರ್‌ಟಿಎಂ)	5.25	0.30
ರಾಬಿನ್ ಮಿಂಜ್	0.65	0.30
ಕರಣ್ ಶರ್ಮಾ	0.50	0.50

ಆಟಗಾರ	ಪಡೆದ ಮೌಲ್ಯ	ಮೂಲಬೆಲೆ
ಲಖನೌ ಸೂಪರ್ ಜೈಂಟ್ಸ್		
ರಿಷಭ್ ಪಂತ್	27.0	2.0
ಆವೇಶ್ ಖಾನ್	9.75	2.0
ಡೇವಿಡ್ ಮಿಲ್ಲರ್	7.5	1.5
ಅಬ್ದುಲ್ ಸಮದ್	4.20	0.30
ಮಿಚೆಲ್ ಮಾರ್ಷ್	3.40	2.0
ಏಡನ್ ಮರ್ಕರಂ	2.0	2.0
ಆರ್ಯನ್ ಜುಯಾಲ್	0.30	0.30
ಪಂಜಾಬ್ ಕಿಂಗ್ಸ್		
ಶ್ರೇಯಸ್ ಅಯ್ಯರ್	26.75	2.0
ಯಜುವೇಂದ್ರ ಚಾಹಲ್	18.0	2.0
ಅರ್ಷದೀಪ್ ಸಿಂಗ್ (ಆರ್‌ಟಿಎಂ)	18.0	2.0
ಮಾರ್ಕಸ್ ಸ್ಟೊಯಿನಿಸ್	11.0	2.0
ನೆಹಲ್ ವಧೇರಾ	4.20	0.30
ಗ್ಲೆನ್ ಮ್ಯಾಕ್ಸ್‌ವೆಲ್	4.20	2.0
ವೈಶಾಖ ವಿಜಯಕುಮಾರ್	1.80	0.30
ಯಶ್ ಠಾಕೂರ್	1.60	0.30
ಹರಪ್ರೀತ್	1.50	0.30
ವಿಷ್ಣು ವಿನೋದ್	0.95	0.30
ರಾಜಸ್ಥಾನ ರಾಯಲ್ಸ್		
ಜೋಫ್ರಾ ಆರ್ಚರ್	12.50	2.0
ವನಿಂದು ಹಸರಂಗ	5.25	2.0
ಮಹೀಷ ತೀಕ್ಷಣ	4.40	2.0
ಆಕಾಶ್ ಮಧ್ವಲ್	1.20	0.30
ಕುಮಾರ್ ಕಾರ್ತಿಕೇಯ ಸಿಂಗ್	0.30	0.30
ರಾಯಲ್ ಚಾಲೆಂಜರ್ಸ್ ಬೆಂಗಳೂರು		
ಜೋಶ್ ಹ್ಯಾಜಲ್‌ವುಡ್	12.50	2.0
ಫಿಲ್ ಸಾಲ್ಟ್	11.50	2.0
ಜಿತೇಶ್ ಶರ್ಮಾ	11.0	1.0
ಲಿಯಾಮ್ ಲಿವಿಂಗ್‌ಸ್ಟೋನ್	8.75	2.0
ರಾಸಿಖ್ ಧಾರ್	6.0	0.30
ಸುಯಾಷ್ ಶರ್ಮಾ	2.60	0.30
ಸನ್‌ರೈಸರ್ಸ್ ಹೈದರಾಬಾದ್		
ಇಶಾನ್ ಕಿಶನ್	11.25	2.0
ಮೊಹಮ್ಮದ್ ಶಮಿ	10.0	2.0
ಹರ್ಷಲ್ ಪಟೇಲ್	8.0	2.0
ಅಭಿನವ್ ಮನೋಹರ್	3.20	0.30
ರಾಹುಲ್ ಚಾಹರ್	3.20	1.0
ಆ್ಯಡಂ ಜಂಪಾ	2.40	2.0
ಸಿಮ್ರಾನ್‌ಜಿತ್ ಸಿಂಗ್	1.50	0.30
ಅಥರ್ವ ತೈಡೆ	0.30	0.30

ಮೊದಲ ಟೆಸ್ಟ್: ಆಸ್ಟ್ರೇಲಿಯಾಕ್ಕೆ 534 ರನ್ ಗುರಿ • ಆರಂಭದಲ್ಲೇ ಪೆಟ್ಟು ನೀಡಿದ ಬೂಮ್ರಾ

ಯಶಸ್ವಿ, ಕೊಹ್ಲಿ ಆಟಕ್ಕೆ ಕಾಂಗರೂ ಪಡೆ ಕಂಗಾಲು

ಮಧು ಜವಳಿ

ಪರ್ತ್: ಭಾರತ ತಂಡಕ್ಕೆ ಏನೇನು ಸಮಸ್ಯೆಗಳು ಎದುರಾಗಿದ್ದವೊ, ಅವೆಲ್ಲವೂ ಆಸ್ಟ್ರೇಲಿಯಾಕ್ಕೆ ಕಾಲಿಡುವ ಮೊದಲೇ ಆಗಿದ್ದವು. ತವರಿನಲ್ಲಿ ನ್ಯೂಜಿಲೆಂಡ್ ಎದುರು ಮನೋಬಲ ಕುಗ್ಗಿಸುವ ರೀತಿ 3–0 ಸರಣಿ ಸೋಲು, ಅನುಭವಿ ಬೌಲರ್ ಶಮಿ ಅವರ ಬಹುನಿರೀಕ್ಷಿತ ಪುನರಾಗಮನ ವಿಳಂಬ, ರೋಹಿತ್ ಶರ್ಮಾ ಅವರು ಆಸ್ಟ್ರೇಲಿಯಾ ವಿರುದ್ಧದ ಮೊದಲ ಟೆಸ್ಟ್‌ಗೆ ಅಲಭ್ಯರಾಗಿದ್ದು, ತಾರಾ ಆಟಗಾರ ವಿರಾಟ್ ಕೊಹ್ಲಿ ದೀರ್ಘ ಪರದಾಟ...

ಮೂರನೇ ಕ್ರಮಾಂಕಕ್ಕೆ ಮೊದಲ ಆಯ್ಕೆಯಾದ ಬ್ಯಾಟರ್ ಶುಭಮನ್ ಗಿಲ್ ಇಲ್ಲಿಗೆ ಬಂದಿಳಿದ ಮೇಲೆ ಎಡಗೈ ಹೆಬ್ಬೆರಳಿಗೆ ಗಾಯಮಾಡಿಕೊಂಡರು. ಈ ಎಲ್ಲ ಬೆಳವಣಿಗೆಗಳಿಂದ ಇಲ್ಲಿ ಭಾರತದ ಮೇಲುಗೈ ನಿರೀಕ್ಷಿಸುವಂತೆಯೇ ಇರಲಿಲ್ಲ. ಸಾಲದ್ದಕ್ಕೆ ಮೊದಲ ಇನಿಂಗ್ಸ್‌ನಲ್ಲಿ ತಂಡ 150 ರನ್ನಿಗೆ ಉರುಳಿತು.

ಪರ್ತ್‌ನ ಒಪ್ಟಸ್ ಕ್ರೀಡಾಂಗಣದಲ್ಲಿ ಆಸ್ಟ್ರೇಲಿಯಾ ಬೇಗನೇ ಪಂದ್ಯ ಮುಗಿಸಬಹುದೆಂಬ ಅಭಿಪ್ರಾಯಗಳು ಮೂಡಿದವು. ಆದರೆ ಭಾರತ ಎಲ್ಲರ ನಿರೀಕ್ಷೆ ಮೀರಿ ಭಾರತ ತಿರುಗೇಟು ನೀಡಿತು. ಮೊದಲು ಬೌಲರ್‌ಗಳು ಮೇಲುಗೈ ಒದಗಿಸಿಕೊಟ್ಟರೆ, ನಂತರ ಬ್ಯಾಟರ್‌ಗಳ ಅಬ್ಬರ ನಿರ್ಣಾಯಕ ಮೇಲುಗೈ ದೊರಕಿಸಿಕೊಟ್ಟಿತು. ಮೊದಲ ಟೆಸ್ಟ್ ಪಂದ್ಯದಲ್ಲಿ ಈಗ ಭಾರತ ಗೆಲುವಿನ ಹಾದಿಯಲ್ಲಿದೆ.

ಶನಿವಾರ ಅಜೇಯರಾಗುಳಿದಿದ್ದ ಯಶಸ್ವಿ ಜೈಸ್ವಾಲ್ (161, 297ಎ, 4x15, 6x3) ಮತ್ತು ಕೆ.ಎಲ್.ರಾಹುಲ್ ಮೊದಲು ಉತ್ತಮ ಆರಂಭ ನೀಡಿದರು. ಭಾನುವಾರ ವಿರಾಟ್ ಕೊಹ್ಲಿ ಅಜೇಯ ಶತಕ (100, 143ಎ, 4x8) ದಾಖಲಿಸಿದರು.

ಕೊಹ್ಲಿ ಸಾಧನೆ: ಕೊಹ್ಲಿ ಶತಕ ಪೂರೈಸಿದಾಗ, ಅದಕ್ಕೇ ಕಾಯುತ್ತಿದ್ದಂತೆ ಕಂಡ ಜಸ್‌ಪ್ರೀತ್ ಬೂಮ್ರಾ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡರು. ಆಗ ಭಾರತದ ಮೊತ್ತ 6 ವಿಕೆಟ್‌ಗೆ 487 ರನ್. 46 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಸೇರಿದರೆ, ಆಸ್ಟ್ರೇಲಿಯಾಕ್ಕೆ 534 ರನ್‌ಗಳ ಹಿಮಾಲಯದೆತ್ತರದ ಗುರಿ ಎದುರಾಗಿದೆ.

ಲಯಕ್ಕೆ ಮರಳಲು ಪರದಾಡಿದ್ದ ಕೊಹ್ಲಿ ಅವರಿಗೆ ಇದು ಟೆಸ್ಟ್‌ನಲ್ಲಿ 30ನೇ ಶತಕ. ಮಾರ್ನಸ್ ಲಾಬುಷೇನ್ ಬೌಲಿಂಗ್‌ನಲ್ಲಿ ಸ್ವೀಪ್ ಮೂಲಕ ಬೌಂಡರಿ ಗಳಿಸಿದ ಅವರು, ಅದು ಸೀಮಾರೇಖೆ ದಾಟಿದ್ದು ಖಚಿತವಾಗುತ್ತಿದ್ದಂತೆ, ನಟಿ–ಪತ್ನಿ ಅನುಷ್ಕಾ ಶರ್ಮಾ ಅವರತ್ತ ಹೂಮುತ್ತುಗಳನ್ನು ಹಾರಿಸಿದರು.

ಕೊಹ್ಲಿ ಅವರಿಗೆ ಇದು ಆಪ್ಟಸ್ ಕ್ರೀಡಾಂಗಣದಲ್ಲಿ ಸತತ ಎರಡನೇ ಶತಕ. 119 ಟೆಸ್ಟ್ ಪಂದ್ಯಗಳಲ್ಲಿ 30ನೇ ಹಾಗೂ ಒಟ್ಟಾರೆ 81ನೇ ಅಂತರರಾಷ್ಟ್ರೀಯ ಶತಕ.

ಟೆಸ್ಟ್ ಕ್ರಿಕೆಟ್‌ನಲ್ಲಿ, ವೆಸ್ಟ್ ಇಂಡೀಸ್ 2003ರಲ್ಲಿ ಆಸ್ಟ್ರೇಲಿಯಾ ವಿರುದ್ಧ 418 ರನ್‌ಗಳ ಗುರಿಯನ್ನು ದಾಟಿದ್ದು ಇದುವರೆಗಿನ ಅತಿ ದೊಡ್ಡ ಚೇಸ್ ಎನಿಸಿದೆ. ಈಗ ಆಸ್ಟ್ರೇಲಿಯಾಕ್ಕೆ ಅದಕ್ಕೂ ಮೀರಿದ ಸವಾಲು ಎದುರಾಗಿದೆ. ಆಸ್ಟ್ರೇಲಿಯಾ ಯಶಸ್ವಿಯಾಗಿ ಸಾಧಿಸಿದ ಅತಿ ದೊಡ್ಡ ಗುರಿ ಎಂದರೆ 404. 1948ರಲ್ಲಿ ಇಂಗ್ಲೆಂಡ್ ವಿರುದ್ಧ ಲೀಡ್ಸ್‌ನಲ್ಲಿ ಬ್ರಾಡ್ಮನ್ ಅವರ ಅಜೇಯ 173 ರನ್ ನೆರವಿನಿಂದ ಆಸ್ಟ್ರೇಲಿಯಾ ಗುರಿ ಸಾಧಿಸಿತ್ತು.

ಮೂರನೇ ದಿನದ ಆಟ ಮುಗಿದಾಗ ಆಸ್ಟ್ರೇಲಿಯಾ 3 ವಿಕೆಟ್‌ಗೆ 12 ರನ್ ಗಳಿಸಿದೆ. ಇನ್ನೂ 521 ರನ್‌ಗಳಿಂದ ಹಿಂದಿದೆ. ಬೂಮ್ರಾ (2.2–1–1–2) ಎಂದಿನಂತೆ ಪರಿಣಾಮಕಾರಿಯಾಗಿದ್ದು, ಮಾರ್ನಸ್ ಲಾಬುಷೇನ್ ವಿಕೆಟ್ ಪಡೆದು ಹೊಡೆತ ನೀಡಿದರು.

ಬೆಳಿಗ್ಗೆ ಜೈಸ್ವಾಲ್– ರಾಹುಲ್ ಜೋಡಿ ಶುಕ್ರವಾರದ ಮೊತ್ತಕ್ಕೆ (ವಿಕೆಟ್ ನಷ್ಟವಿಲ್ಲದೇ 172) 29 ರನ್ ಸೇರಿಸಿತು. ಈ ವೇಳೆ ಸ್ಟಾರ್ಕ್ ಬೌಲಿಂಗ್‌ನಲ್ಲಿ ರಾಹುಲ್ ವಿಕೆಟ್ ಕೀಪರ್‌ಗೆ ಕ್ಯಾಚಿತ್ತರು. 63 ಓವರುಗಳಲ್ಲಿ 201 ರನ್ ಜೊತೆಯಾಟ ಪಂದ್ಯವನ್ನು ಭಾರತದ ಕಡೆಗೆ ವಾಲಿಸಿತ್ತು. ಈ ಜೋಡಿಯ ಆಟ ಪ್ರತಿಕೂಲ ಸನ್ನಿವೇಶದಲ್ಲಿ ಬಂದಿತ್ತು. ರಾಹುಲ್, ರೋಹಿತ್ ಶರ್ಮಾ ಸ್ಥಾನದಲ್ಲಿ ಅವಕಾಶ ಪಡೆದರೆ, ಜೈಸ್ವಾಲ್ ಅವರಿಗೆ ಇದು ಆಸ್ಟ್ರೇಲಿಯಾದ ನೆಲದಲ್ಲಿ ಮೊದಲ ಟೆಸ್ಟ್. ಆದರೆ ಇಬ್ಬರೂ ಪ್ರಬುದ್ಧ ಆಟವಾಡಿದರು.

ಜೈಸ್ವಾಲ್ ಅವರಿಗೆ ಇದು ವೃತ್ತಿ ಜೀವನದ ನಾಲ್ಕನೇ ಶತಕ. ಆಸ್ಟ್ರೇಲಿಯಾ ನೆಲದಲ್ಲಿ ಮೊದಲ ಟೆಸ್ಟ್‌ನಲ್ಲೇ ಶತಕ ಬಾರಿಸಿದ ಭಾರತದ ಮೂರನೇ ಬ್ಯಾಟರ್ ಎಂಬ ಹಿರಿಮೆ ಕೂಡ ಅವರದಾಯಿತು. ಈ ಹಿಂದೆ ಈ ಗೌರವ ಪಡೆದ ಇತರ ಇಬ್ಬರು– ಎಂ.ಎಲ್.ಜೈಸಿಂಹ (1968ರಲ್ಲಿ) ಮತ್ತು ಸುನೀಲ್ ಗಾವಸ್ಕರ್ (1977ರಲ್ಲಿ). ವಿಶೇಷವೆಂದರೆ ಈ ಮೂರೂ ಶತಕಗಳು ಎರಡನೇ ಇನಿಂಗ್ಸ್‌ನಲ್ಲೇ ದಾಖಲಾಗಿವೆ.

ಭರ್ಜರಿ ಶತಕಗಳಿಗೆ ಹೆಸರಾದ ಜೈಸ್ವಾಲ್ (161, 297ಎ, 4x15, 6x3) ನಾಲ್ಕನೇ ಬಾರಿ 150ಕ್ಕೂ ಹೆಚ್ಚು ರನ್ ದಾಖಲಿಸಿದರು.

ಈ ಹಿಂದೆ ಮುಂಬೈನ ಈ ಆಟಗಾರ ವೆಸ್ಟ್ ಇಂಡೀಸ್ ವಿರುದ್ಧ 171, ಇಂಗ್ಲೆಂಡ್ ವಿರುದ್ಧ 209 ಮತ್ತು ಅಜೇಯ 214 ರನ್ ಗಳಿಸಿದ್ದರು. ಅವರು ಬೇರೂರಿ ಆಡಿದರಷ್ಟೇ ಅಲ್ಲ, ಸಾಕಷ್ಟು ವೇಗದಲ್ಲಿ ರನ್ ಕೂಡ ಗಳಿಸಿದರು. ಅವರು ನಿರ್ಗಮಿಸುತ್ತಿದ್ದಂತೆ ಪ್ರೇಕ್ಷಕರು ಎದ್ದುನಿಂತು ಗೌರವ ಕರತಾಡನದ ಮೆಚ್ಚುಗೆ ನೀಡಿದರು. ಆಸ್ಟ್ರೇಲಿಯಾ ತಂಡಕ್ಕೆ ನೆಲಕುಸಿದ ಅನುಭವವಾಯಿತು.





ಶತಕ ದಾಖಲಿಸಿದ ಸಂಭ್ರಮದಲ್ಲಿ ವಿರಾಟ್ ಕೊಹ್ಲಿ (ಎಡ). 150 ರನ್ ಗಳಿಸಿದ ಸಂಭ್ರಮದಲ್ಲಿ ಯಶಸ್ವಿ ಜೈಸ್ವಾಲ್ —ಎಎಫ್‌ಪಿ / ಎಪಿ:ಪಿಟಿಐ ಚಿತ್ರ

ವಿದೇಶದಲ್ಲಿ ತಂಡವೊಂದರ ವಿರುದ್ಧ ಹೆಚ್ಚು ಶತಕ ಗಳಿಸಿದ ಭಾರತದ ಬ್ಯಾಟರ್‌ಗಳು (ಟೆಸ್ಟ್)

ಶತಕ	ಆಟಗಾರ	ಎದುರಾಳಿ
7	ಸುನಿಲ್ ಗಾವಸ್ಕರ್	ವೆಸ್ಟ್‌ಇಂಡೀಸ್
7	ವಿರಾಟ್ ಕೊಹ್ಲಿ	ಆಸ್ಟ್ರೇಲಿಯಾ
6	ರಾಹುಲ್ ದ್ರಾವಿಡ್	ಇಂಗ್ಲೆಂಡ್
6	ಸಚಿನ್ ತೆಂಡೂಲ್ಕರ್	ಆಸ್ಟ್ರೇಲಿಯಾ

ಗರಿಷ್ಠ ಕ್ಯಾಚ್ ಪಡೆದ ಭಾರತದ ಫೀಲ್ಡರ್ (ಟೆಸ್ಟ್)

ಫೀಲ್ಡರ್	ಕ್ಯಾಚ್
ರಾಹುಲ್ ದ್ರಾವಿಡ್	210
ವಿ.ವಿ.ಎಸ್.ಲಕ್ಷ್ಮಣ್	135
ವಿರಾಟ್ ಕೊಹ್ಲಿ	116
ಸಚಿನ್ ತೆಂಡೂಲ್ಕರ್	115
ಸುನಿಲ್ ಗಾವಸ್ಕರ್	108

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ: 150 (49.4 ಓವರುಗಳಲ್ಲಿ): ಆಸ್ಟ್ರೇಲಿಯಾ: 104 (51.2 ಓವರುಗಳಲ್ಲಿ). ಎರಡನೇ ಇನಿಂಗ್ಸ್: ಭಾರತ: 6ಕ್ಕೆ 487 ಡಿಕ್ಲೇರ್ (134.3 ಓವರ್‌ಗಳಲ್ಲಿ) (ಶನಿವಾರ 57 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 172)

ಜೈಸ್ವಾಲ್ ಸಿ ಸ್ಮಿತ್ ಬಿ ಮಾರ್ಷ್ 161 (297ಎ, 4x15, 6x3)
ರಾಹುಲ್ ಸಿ ಕ್ಯಾರಿ ಬಿ ಸ್ಟಾರ್ಕ್ 77 (176ಎ, 4x5)
ಪಡಿಕ್ಕಲ್ ಸಿ ಸ್ಮಿತ್ ಬಿ ಹ್ಯಾಜಲ್‌ವುಡ್ 25 (71ಎ, 4x2)
ವಿರಾಟ್ ಕೊಹ್ಲಿ ಔಟಾಗದೇ 100 (143ಎ, 4x8, 6x2)
ರಿಷಭ್ ಸ್ಟಂಪ್ಡ್ ಕ್ಯಾರಿ ಬಿ ಲಯನ್ 1 (4ಎ)
ಜುರೇಲ್ ಎಲ್‌ಬಿಡಬ್ಲ್ಯು ಬಿ ಕಮಿನ್ಸ್ 1 (6ಎ)
ವಾಷಿಂಗ್ಟನ್ ಬಿ ಲಯನ್ 29 (94ಎ, 6x1)
ನಿತೀಶ್ ಕುಮಾರ್ ರೆಡ್ಡಿ ಔಟಾಗದೇ 38 (27ಎ, 4x3, 6x2)

ಇತರೆ: 55 (ಬೈ 22, ಲೆಗ್‌ಬೈ 15, ನೋಬಾಲ್ 11, ವೈಡ್ 7)

ವಿಕೆಟ್ ಪತನ: 1-201 (ಕೆ.ಎಲ್. ರಾಹುಲ್, 62.6), 2-275 (ದೇವದತ್ತ ಪಡಿಕ್ಕಲ್, 84.1), 3-313 (ಯಶಸ್ವಿ ಜೈಸ್ವಾಲ್, 93.5), 4-320 (ರಿಷಭ್ ಪಂತ್, 95.1), 5-321 (ಧ್ರುವ್ ಜುರೇಲ್, 96.3), 6-410 (ವಾಷಿಂಗ್ಟನ್ ಸುಂದರ್, 125.5)

ಬೌಲಿಂಗ್: ಮಿಚೆಲ್ ಸ್ಟಾರ್ಕ್ 26–2–111–1, ಜೋಶ್ ಹ್ಯಾಜಲ್‌ವುಡ್ 21–9–28–1, ಪ್ಯಾಟ್ ಕಮಿನ್ಸ್ 25–5–86–1, ಮಿಚೆಲ್ ಮಾರ್ಷ್ 12–0–65–1, ನೇಥನ್ ಲಯನ್ 39–5–96–2, ಮಾರ್ನಸ್ ಲಾಬುಷೇನ್ 6.3–0–38–0, ಟ್ರಾವಿಸ್ ಹೆಡ್ 5–0–26–0

ಆಸ್ಟ್ರೇಲಿಯಾ: 3ಕ್ಕೆ 12 (4.2 ಓವರ್‌ಗಳಲ್ಲಿ)

ಮೆಕ್‌ಸ್ವೀನಿ ಎಲ್‌ಬಿಡಬ್ಲ್ಯು ಬಿ ಬೂಮ್ರಾ 0 (4ಎ)
ಉಸ್ಮಾನ್ ಖ್ವಾಜಾ ಔಟಾಗದೇ 3 (9ಎ)
ಕಮಿನ್ಸ್ ಸಿ ಕೊಹ್ಲಿ ಬಿ ಸಿರಾಜ್ 2 (8ಎ)
ಲಾಬುಷೇನ್ ಎಲ್‌ಬಿಡಬ್ಲ್ಯು ಬಿ ಬೂಮ್ರಾ 3 (5ಎ)

ಇತರೆ: 4 (ಬೈ 4)

ವಿಕೆಟ್ ಪತನ: 1-0 (ನೇಥನ್ ಮೆಕ್‌ಸ್ವೀನಿ, 0.4), 2-9 (ಪ್ಯಾಟ್ ಕಮಿನ್ಸ್, 3.1), 3-12 (ಮಾರ್ನಸ್ ಲಾಬುಷೇನ್, 4.2)

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 2.2–1–1–2, ಮೊಹಮ್ಮದ್ ಸಿರಾಜ್ 2–0–7–1

ಏಕದಿನ ಪಂದ್ಯ: ಜಿಂಬಾಬ್ವೆಗೆ ಮಣಿದ ಪಾಕಿಸ್ತಾನ

ಬುಲಾವಯೊ (ಜಿಂಬಾಬ್ವೆ), (ಎಪಿ): ಸಿಕಂದರ್ ರಝಾ ಅವರ ಆಲ್‌ರೌಂಡ್ ಆಟದ ನೆರವಿನಿಂದ ಜಿಂಬಾಬ್ವೆ ತಂಡ, ಮಳೆಯ ಆಟ ಕಂಡ ಮೊದಲ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ಭಾನುವಾರ ಡಿಎಲ್‌ಎಸ್ ಆಧಾರದಲ್ಲಿ 80 ರನ್‌ಗಳಿಂದ ಸೋಲಿಸಿತು.

ಜಿಂಬಾಬ್ವೆ 7 ವಿಕೆಟ್‌ಗೆ 125 ರನ್‌ಗಳಾಗಿದ್ದಾಗ ಆಡಲು ಇಳಿದ ರಝಾ ಉಪಯುಕ್ತ 39 ರನ್ ಗಳಿಸಿದರು. 9ನೇ ಕ್ರಮಾಂಕದಲ್ಲಿ ಆಡಿದ ರಿಚರ್ಡ್ ಎನ್‌ಗರಾವಾ (48) ಜೊತೆ ಎಂಟನೇ ವಿಕೆಟ್‌ಗೆ 62 ರನ್ ಸೇರಿಸಿದರು. ನಂತರ ಬೌಲಿಂಗ್‌ನಲ್ಲೂ ಮಿಂಚಿ 7 ರನ್ನಿಗೆ 2 ವಿಕೆಟ್ ಪಡೆದರು.

ಪಾಕಿಸ್ತಾನ ತಂಡ 2019ರ ನಂತರ ಇದೇ ಮೊದಲ ಬಾರಿ ಅನುಭವಿ ಬ್ಯಾಟರ್ ಬಾಬರ್ ಆಜಂ ಅವರಿಗೆ ವಿಶ್ರಾಂತಿ ನೀಡಿತು. ತಂಡ ತನ್ನ ಬೆಂಚ್ ಸಾಮರ್ಥ್ಯ ಪರೀಕ್ಷೆಗೊಳಪಡಿಸಿತು.

ಸ್ಕೋರುಗಳು: ಜಿಂಬಾಬ್ವೆ: 40.2 ಓವರುಗಳಲ್ಲಿ 205 (ಸಿಕಂದರ್ ರಝಾ 39, ರಿಚರ್ಡ್ ಎನ್‌ಗಾರವ 48, ಸಲ್ಮಾನ್ ಆಘಾ 42ಕ್ಕೆ3, ಫೈಸಲ್ ಅಕ್ರಮ್ 24ಕ್ಕೆ3); ಪಾಕಿಸ್ತಾನ: 21 ಓವರುಗಳಲ್ಲಿ 60ಕ್ಕೆ6 (ಬ್ಲೆಸಿಂಗ್ ಮುಝರಬಾನಿ 9ಕ್ಕೆ2, ಸಿಯಾನ್ ವಿಲಿಯಮ್ಸ್ 12ಕ್ಕೆ2, ಸಿಕಂದರ್ ರಝಾ 7ಕ್ಕೆ2). ಪಂದ್ಯದ ಆಟಗಾರ: ಸಿಕಂದರ್ ರಝಾ.

ಪ್ರೊ ಕಬಡ್ಡಿ: ಯೋಧಾಸ್‌ಗೆ ಜಯ

ನೊಯ್ಡಾ: ಕನ್ನಡಿಗ ಗಗನ್ ಗೌಡ (11) ಮತ್ತು ಭವಾನಿ ರಜಪೂತ್ (10) ಅವರ ಸೂಪರ್ ಟೆನ್ ಸಾಹಸದಿಂದ ಯು.ಪಿ ಯೋಧಾಸ್ ತಂಡ, ಪ್ರೊ ಕಬಡ್ಡಿ ಲೀಗ್‌ನ ತೀವ್ರ ಹೋರಾಟದ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ತಂಡವನ್ನು 44–42 ಅಂಕಗಳಿಂದ ಸೋಲಿಸಿತು.

ಭಾನುವಾರ ನಡೆದ ಈ ಪಂದ್ಯದಲ್ಲಿ ಪಟ್ನಾದ ರೇಡರ್‌ಗಳಾದ ದೇವಾಂಕ್ (18) ಮತ್ತು ಅಯಾನ್ (10) ಉತ್ತಮ ಪ್ರದರ್ಶನ ನೀಡಿದರೂ ಅದರು ಗೆಲುವಿಗೆ ಸಾಲಲಿಲ್ಲ.

ದಿನದ ಮೊದಲ ಪಂದ್ಯದಲ್ಲಿ ಪುಣೇರಿ ಪಲ್ಟನ್ 51–34 ಪಾಯಿಂಟ್‌ಗಳಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಸುಲಭವಾಗಿ ಸೋಲಿಸಿತು. ವಿಜೇತ ತಂಡದ ಪರ ಆಕಾಶ್ ಶಿಂದೆ ಮತ್ತು ಮೋಹಿತ್ ಗೋಯತ್ (ತಲಾ 9) ಮತ್ತು ವಾರಿಯರ್ಸ್ ಪರ ನಿತಿನ್ ಕುಮಾರ್ (13) ಉತ್ತಮವಾಗಿ ಆಡಿದರು.



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಕೆನರಾ ಬ್ಯಾಂಕ್ ಓಟದ 10ಕೆ ಮಹಿಳೆಯರ ವಿಭಾಗದಲ್ಲಿ ಚಿನ್ನ ಗೆದ್ದ ಸಂಜೀವನಿ ಜಾಧವ್ ಅವರಿಗೆ ₹ 2 ಲಕ್ಷ ಬಹುಮಾನವನ್ನು ಕೆನರಾ ಬ್ಯಾಂಕ್ ಸಿಇಒ ಹಿಲ್ಡೆ ಫೇಡರ್ ವಿತರಿಸಿದರು —ಪ್ರಜಾವಾಣಿ ಚಿತ್ರ

ಟಿ.ಟಿ: ಸಿದ್ಧಾಂತ್‌ಗೆ ಪ್ರಶಸ್ತಿ ಡಬಲ್

ಬೆಂಗಳೂರು: ಸಿದ್ಧಾಂತ್ ಧರಿವಾಲ್ ಅವರು ಇಲ್ಲಿನ ಕೆನರಾ ಯೂನಿಯನ್‌ನ ಆಶ್ರಯದಲ್ಲಿ ನಡೆಯುತ್ತಿರುವ ಸಿವಿಎಲ್ ಶಾಸ್ತ್ರಿ ಸ್ಮಾರಕ ಕರ್ನಾಟಕ ರಾಜ್ಯ ಟೇಬಲ್ ಟೆನಿಸ್ ಟೂರ್ನಿಯಲ್ಲಿ 'ಡಬಲ್' ಪ್ರಶಸ್ತಿಯನ್ನು ಗೆದ್ದುಕೊಂಡರು.

ಟೂರ್ನಿಯ ಮೂರನೇ ದಿನವಾದ ಭಾನುವಾರ ಸಿದ್ಧಾಂತ್, 17 ವರ್ಷದೊಳಗಿನವರ ಮತ್ತು 15 ವರ್ಷದೊಳಗಿನವರ ಬಾಲಕರ ಸಿಂಗಲ್ಸ್ ಪ್ರಶಸ್ತಿ ಗೆದ್ದರು. 15 ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಹಿಯಾ ಸಿಂಗ್ ಗೆದ್ದರು.